ಮಂಗಳವಾರ, ಮೇ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 136 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಆನಂದ ಎನ್ನುವುದು ಜೀವನದ ಒಂದು ಆಯ್ಕೆ. ಅದನ್ನು ಸರಿಯಾಗಿ ರೂಢಿಸಿಕೊಳ್ಳುವುದು, ರೂಪಿಸಿಕೊಳ್ಳುವುದು ನಮ್ಮ ಕೈಲಿದೆ.

ಸಂಖ್ಯೆ-ಸುದ್ದಿ ಕುಡಿತದ ಅಭ್ಯಾಸ ಮಹಿಳೆಯರಲ್ಲಿ ಅತ್ಯಲ್ಪ

ರಾಜ್ಯದಲ್ಲಿ ಡೆಂಗಿ ಪ್ರಕರಣ ಹೆಚ್ಚಳ 10

ಪಿಎಸ್ಐ: ಡಿವೈಎಸ್ಪಿ ಆಪ್ತ 'ಆರ್‌ಪಿಐ' ಸೇರಿ ಇಬ್ಬರ ಬಂಧನ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
52,973 ▲	15,842 ▲	₹51,920 (ಬೆಂಗಳೂರು)	₹61,900 (ಬೆಂಗಳೂರು)

ಭಗತ್ ಸಿಂಗ್‌ಗೆ ಕೊಕ್, ಆರೆಸ್ಸೆಸ್ ಸಂಸ್ಥಾಪಕಗೆ ಮಣೆ: ಶೈಕ್ಷಣಿಕ ವಲಯದ ಆಕ್ಷೇಪ

ಪಠ್ಯ ಸೇರಿದ ಹೆಡಗೇವಾರ್ ಭಾಷಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಹತ್ತನೇ ತರಗತಿ ಪಠ್ಯ ಪುಸ್ತಕದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಅವರ ಭಾಷಣ ಸೇರ್ಪಡೆ ಮಾಡಿರುವುದು ಶೈಕ್ಷಣಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯು ಹೆಡಗೇವಾರ್ ಅವರ ಸಾರ್ವಜನಿಕ ಭಾಷಣವನ್ನು ಪಠ್ಯಕ್ರಮದಲ್ಲಿ ಸೇರಿಸಲು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಈ ಶಿಫಾರಸಿನಂತೆ 2022-23ರ ಶೈಕ್ಷಣಿಕ ವರ್ಷದಿಂದ 10ನೇ ತರಗತಿಯ ಕನ್ನಡ ವಿಷಯದ (ಪ್ರಥಮ ಭಾಷೆ) ಐದನೇ ಪಾಠವಾಗಿ 'ನಿಜವಾದ ಆದರ್ಶ ಪುರುಷ ಯಾರಾಗಬೇಕು?' ಎನ್ನುವುದನ್ನು ಸೇರಿಸಲಾಗಿದೆ.

ಜತೆಗೆ, ಪಿ.ಲಂಕೇಶ್ ಅವರ 'ಮೃಗ ಮತ್ತು ಸುಂದರಿ' ಸೇರಿದಂತೆ ಹಲವು ಪಠ್ಯಗಳನ್ನು ಕೈಬಿಟ್ಟು ಶಿವಾನಂದ ಕಳವೆ ಅವರ 'ಸ್ವದೇಶಿ ಸೂತ್ರದ ಸರಳ ಹಬ್ಬ' ಮತ್ತು ಎಂ. ಗೋವಿಂದ ಪೈ ಅವರ 'ನಾನು ಪ್ರಾಸ ಬಿಟ್ಟ ಕಥೆ', ವಿದ್ವಾಂಸ ದಿವಂಗತ ಬನ್ನಂಜೆ ಗೋವಿಂದಾಚಾರ್ಯರ 'ಶುಕನಾಶನ ಉಪದೇಶ' ಮತ್ತು ಶತಾವಧಾನಿ ಆರ್. ಗಣೇಶ್ ಅವರ 'ಶ್ರೇಷ್ಠ ಭಾರತೀಯ ಚಿಂತನೆಗಳು' ಸೇರಿಸಲಾಗಿದೆ. ಈ ವಿಷಯಗಳನ್ನು ಸೇರಿಸಿದ್ದಕ್ಕೆ ಈಗ ಪರ, ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಹೆಡಗೇವಾರ್ ಅವರ ಭಾಷಣ ಸೇರ್ಪಡೆಗೆ ಆಕ್ಷೇಪ ವ್ಯಕ್ತವಾಗಿದೆ.

ಯಾವುದೇ ಸಿದ್ಧಾಂತ ಹೇರಿಲ್ಲ: 'ವಿರೋಧಿಸುವವರು ಪಠ್ಯಪುಸ್ತಕ ಓದಿಲ್ಲ. ಓದಿದ ನಂತರ ಆಕ್ಷೇಪಗಳನ್ನು ವ್ಯಕ್ತಪಡಿಸಲಿ. ಒಂದು ಸಿದ್ಧಾಂತಕ್ಕೆ ಸೀಮಿತವಾಗಿ ಪಠ್ಯ ರಚಿಸಿಲ್ಲ ಮತ್ತು ಯಾವುದೇ ಸಿದ್ಧಾಂತವನ್ನು ಹೇರುವ ಪ್ರಯತ್ನವನ್ನು ಮಾಡಿಲ್ಲ' ಎಂದು ರೋಹಿತ್ ಚಕ್ರತೀರ್ಥ ಹೇಳಿದ್ದಾರೆ.

5ನೇ ಪುಟ ನೋಡಿ

'ಪಠ್ಯದಿಂದ ಹೆಡಗೇವಾರ್ ಭಾಷಣ ಕೈಬಿಡಲ್ಲ'

ತುಮಕೂರು: 'ಯಾರೇ ವಿರೋಧ ಮಾಡಿದರೂ ಎಸ್ಸೆಸ್ಸೆಲ್ಸಿ ಪಠ್ಯಪುಸ್ತಕದಲ್ಲಿ ಸೇರ್ಪಡೆಯಾಗಿರುವ ಕೇಶವ ಬಲಿರಾಮ್ ಹೆಡಗೇವಾರ್ ಭಾಷಣ ಹಿಂಪಡೆಯುವುದಿಲ್ಲ' ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೆಡಗೇವಾರ್ ಕೋಟ್ಯಂತರ ಯುವಕರಿಗೆ ಪ್ರೇರಣೆಯಾಗಿದ್ದರು. ವೈಯಕ್ತಿಕ ಜೀವನಕ್ಕಿಂತ ಸಮಾಜದ ಅಭಿವೃದ್ಧಿಗೆ ಶ್ರಮಿಸಿದವರು. ಸ್ವಾತಂತ್ರ್ಯಕ್ಕಾಗಿ ಅವರು ಹೋರಾಟ ಮಾಡಿದರು. ಜೈಲಿಗೂ ಹೋಗಿದ್ದರು. ಅಂದಿನ ಜಾತಿ, ಅಸ್ಪೃಶ್ಯತೆಯಂತಹ ದೊಡ್ಡ ಸಮಸ್ಯೆಗಳಿಗೆ ಪರಿಹಾರ ಹುಡುಕಿದ್ದರು' ಎಂದು ಅಭಿಪ್ರಾಯಪಟ್ಟರು.

'ಆರ್‌ಎಸ್‌ಎಸ್‌ನಂತಹ ಒಂದು ದೊಡ್ಡ ಸಂಘಟನೆಯನ್ನು ಹೆಡಗೇವಾರ್ ಕಟ್ಟಿದರು. ಅವರ ಒಂದು ಭಾಷಣ ವಿರೋಧಿಸುತ್ತಾರೆ ಎಂದರೆ ಇವರು ಎಂತಹ ಸಂಕುಚಿತ ಮನಸ್ಸಿನವರು ಎಂಬುದು ಅರ್ಥವಾಗುತ್ತದೆ. ಪಠ್ಯದಲ್ಲಿ ಏನಾದರೂ ತಪ್ಪಿದ್ದರೆ ಅದನ್ನು ವಿರೋಧಿಸಲಿ. ಅದನ್ನು ನಾನು ಸ್ವಾಗತಿಸುತ್ತೇನೆ. ಹೆಡಗೇವಾರ್ ವಿಚಾರವನ್ನು ಎಲ್ಲರೂ ತಿಳಿದುಕೊಂಡರೆ ಕಮ್ಯೂನಿಸ್ಟ್ ವಿಚಾರಗಳು ದೇಶದಿಂದ ಎಲ್ಲಿಗೆ ಹೋಗುತ್ತವೊ ಎನ್ನುವ ಭಯ, ಹೆದರಿಕೆ ಕೆಲವರಲ್ಲಿ ಶುರುವಾಗಿದೆ' ಎಂದರು.

ಪಠ್ಯದಿಂದ ಕೈಬಿಟ್ಟಿರುವ ವಿಷಯಗಳು

- ಪತ್ರಕರ್ತ ಪಿ. ಲಂಕೇಶ್ ಅವರ 'ಮೃಗ ಮತ್ತು ಸುಂದರಿ'.
- ಜಿ. ರಾಮಕೃಷ್ಣ ಅವರ 'ಭಗತ್ ಸಿಂಗ್'
- ಸಾರಾ ಅಬೂಬಕ್ಕರ್ ಅವರ 'ಯುದ್ಧ'
- ಎ.ಎನ್. ಮೂರ್ತಿ ರಾವ್ ಅವರ 'ವ್ಯಾಘ್ರ ಕಥೆ'
- ಶಿವಕೋಟ್ಯಾಚಾರ್ಯ ಅವರ 'ಸುಕುಮಾರ ಸ್ವಾಮಿ ಕಥೆ'

'ಪಠ್ಯಪುಸ್ತಕ ಪಕ್ಷ ಪುಸ್ತಕವಲ್ಲ'

'ಪಠ್ಯ ಪುಸ್ತಕಗಳು ಪಕ್ಷ ಪುಸ್ತಕಗಳಲ್ಲ. ಯಾವುದೇ ಪಕ್ಷದ ಸರ್ಕಾರಗಳು ತಮ್ಮ ಕಾರ್ಯಸೂಚಿಗೆ ಪಠ್ಯ ಪುಸ್ತಕಗಳನ್ನು ಸಾಧನ ಮಾಡಿಕೊಳ್ಳಬಾರದು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರತಿಕ್ರಿಯಿಸಿದ್ದಾರೆ.

'ಜಾತಿವಾದ ಮತ್ತು ಧಾರ್ಮಿಕ ಮೂಲಭೂತ ವಾದವನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪೋಷಿಸಲು ಪಠ್ಯ ಪುಸ್ತಕಗಳು ಸಾಧನವಾಗಬಾರದು' ಎಂದು ತಿಳಿಸಿದ್ದಾರೆ.

ಮಂಗಳೂರಿನ ಮಣ್ಣಗುಡ್ಡೆಯ ದ.ಕ. ಜಿಲ್ಲಾ ಪಂಚಾಯಿತಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಾರಂಭೋತ್ಸವದ ಪ್ರಯುಕ್ತ ಸೋಮವಾರ ಆಯೋಜಿಸಿದ್ದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಮಕ್ಕಳ ಸಂಭ್ರಮ ಪ್ರಜಾವಾಣಿ ಚಿತ್ರ/ಇರ್ಷಾದ್ ಮೊಹಮ್ಮದ್

ಶಾಲೆಗಳಲ್ಲಿ ಹಬ್ಬ: ಮಕ್ಕಳ ಸಡಗರ

ಸಂಭ್ರಮದಿಂದ ಆರಂಭವಾದ ಶೈಕ್ಷಣಿಕ ವರ್ಷದ ಮೊದಲ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಳಿರು ತೋರಣಗಳಿಂದ ಶೃಂಗರಿಸುವ ಮೂಲಕ ಹಬ್ಬದ ವಾತಾವರಣ ಸೃಷ್ಟಿಸಿದ್ದ ಶಾಲೆಗಳತ್ತ ಮಕ್ಕಳು ಸೋಮವಾರ ಉತ್ಸಾಹದಿಂದ ಹೆಜ್ಜೆ ಹಾಕಿ ಸಂಭ್ರಮಿಸಿದರು.

ಶಾಲಾ ಆವರಣಗಳಲ್ಲಿ ರಂಗೋಲಿಗಳನ್ನು ಬಿಡಿಸಲಾಗಿತ್ತು. ಶಿಕ್ಷಕರು ಮತ್ತು ಸಿಬ್ಬಂದಿ ಮಕ್ಕಳನ್ನು ನಗುಮೊಗದೊಂದಿಗೆ ಸ್ವಾಗತಿಸಿದರು. ಹಲವು ಶಾಲೆಗಳಲ್ಲಿ ಮಕ್ಕಳಿಗೆ ಗುಲಾಬಿ, ಪುಸ್ತಕ ಹಾಗೂ ಸಿಹಿ ತಿಂಡಿ ನೀಡಿ ಬರಮಾಡಿಕೊಳ್ಳಲಾಯಿತು.

ಕೋವಿಡ್ ಕರಿಛಾಯೆಯಿಂದ ಮನೆಯಲ್ಲಿಯೇ ಹೆಚ್ಚು ಸಮಯ ಕಳೆದಿದ್ದ ಮಕ್ಕಳಿಗೆ ಮರಳಿ ಶಾಲೆಗೆ ಮರಳುವುದು ಉತ್ಸಾಹ ತಂದಿತ್ತು. ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಮೊದಲ ದಿನ ಖುಷಿಯಿಂದ ಪಾಠಪ್ರವಚನಗಳಲ್ಲಿ ಭಾಗಿಯಾದರು. ಸ್ನೇಹಿತರನ್ನು ಭೇಟಿಯಾಗಿ ಸಂಭ್ರಮಿಸಿದರು. ಹಲವರು ಎರಡು ವರ್ಷಗಳ ನಂತರ ತಮ್ಮ ಸ್ನೇಹಿತರನ್ನು ಭೇಟಿಯಾಗಿದ್ದು ಸಂತಸ ಮೂಡಿಸಿತ್ತು.

ಎರಡು ವರ್ಷಗಳಿಂದ ಶಾಲೆಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ನಿಗದಿತ ಅವಧಿಯಲ್ಲಿ ಆರಂಭ ಆಗಲಿರಲಿಲ್ಲ. ಹೀಗಾಗಿ, ಈ ಬಾರಿ 15 ದಿನ ಮೊದಲೇ ಶಾಲೆಗಳ ಬಾಗಿಲು ತೆರೆದಿದ್ದು, ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳಿಗಾಗಿ ಕಲಿಕಾ ಚೇತರಿಕೆ ಕಾರ್ಯಕ್ರಮ ಆರಂಭಿಸಿದೆ.

ಶಾಲೆ ಆರಂಭಕ್ಕೆ ಅಧಿಕಾರಿಗಳು, ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಪೂರ್ವಸಿದ್ಧತೆ ಮಾಡಿಕೊಂಡಿದ್ದರು. ಬಹುತೇಕ ಶಾಲೆಗಳಲ್ಲಿ ಮೊದಲ ದಿನ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿರುವುದು ವರದಿಯಾಗಿದೆ.

ಶಾಲೆಗಳ ಪುನರಾರಂಭದ ದಿನವೇ ಸಮವಸ್ತ್ರ ಮತ್ತು ಪಠ್ಯಪುಸ್ತಕ ನೀಡಲು ಶಿಕ್ಷಣ ಇಲಾಖೆ ಉದ್ದೇಶಿಸಿತ್ತು. ಆದರೆ, ಇದುವರೆಗೆ ಶೇಕಡ 60ರಷ್ಟು ಮಾತ್ರ ಪಠ್ಯಪುಸ್ತಕಗಳನ್ನು ಪೂರೈಸಲಾಗಿದೆ. ಟೆಂಡರ್ ಪ್ರಕ್ರಿಯೆಯ ವಿಳಂಬದಿಂದಾಗಿ ಸಮವಸ್ತ್ರಗಳನ್ನು ಸಕಾಲಕ್ಕೆ ಪೂರೈಸಲು ಸಾಧ್ಯವಾಗಿಲ್ಲ.

'ಪಠ್ಯಪುಸ್ತಕ ಪೂರೈಸಿಲ್ಲ': 'ಶಿಕ್ಷಣ ಇಲಾಖೆ ಮಕ್ಕಳಿಗೆ ಸಕಾಲಕ್ಕೆ ಪಠ್ಯ ಪುಸ್ತಕ ಒದಗಿಸುವಲ್ಲಿ ವಿಫಲವಾಗಿದೆ. ಇದು ಖಂಡನೀಯ. ಸರ್ಕಾರವೇ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿದೆ' ಎಂದು ಕರ್ನಾಟಕ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ (ಕೆಎಎಂಎಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ದೂರಿದ್ದಾರೆ.

ಈ ವರ್ಷ ಮಕ್ಕಳಿಗೆ ಬೈಸಿಕಲ್: ಸಿ.ಎಂ

ತುಮಕೂರು: ಈ ವರ್ಷದಿಂದ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಬೈಸಿಕಲ್ ಕೊಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಪ್ರಕಟಿಸಿದರು.

ನಗರದ ಎಂಪ್ರೆಸ್ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ, ಉಚಿತ ಪಠ್ಯಪುಸ್ತಕ ವಿತರಣೆ, ಕಲಿಕಾ ಚೇತರಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಂತರ ವಿದ್ಯಾರ್ಥಿಗಳ ಜತೆ ಅವರು ಸಂವಾದ ನಡೆಸಿದರು.

'ಗ್ರಾಮೀಣ ಪ್ರದೇಶದಲ್ಲಿ ಶಾಲೆಗಳಿಗೆ ಸಾಕಷ್ಟು ದೂರ ನಡೆದು ಹೋಗಬೇಕಿದೆ. ಹಿಂದಿನಂತೆ ಬೈಸಿಕಲ್ ಕೊಟ್ಟರೆ ಸಕಾಲಕ್ಕೆ ಹೋಗಲು ಅನುಕೂಲವಾಗುತ್ತದೆ' ಎಂದು ವಿದ್ಯಾರ್ಥಿನಿಯೊಬ್ಬಳ ಪ್ರಶ್ನೆಗೆ ಮುಖ್ಯಮಂತ್ರಿ ಈ ಭರವಸೆ ನೀಡಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿದ್ಯಾರ್ಥಿಗಳಿಗೆ ಬೈಸಿಕಲ್ ಕೊಡಲು ಪೂರಕ ಬಜೆಟ್‌ನಲ್ಲಿ ಹಣ ಒದಗಿಸಲಾಗುವುದು' ಎಂದರು.

5ನೇ ಪುಟ ನೋಡಿ

'ಇನ್ನೂ ಒಂದು ತಿಂಗಳು ಬೇಕಾಗಬಹುದು'

'ಶೇ 60ರಷ್ಟು ಪಠ್ಯಪುಸ್ತಕಗಳನ್ನು ಮುದ್ರಿಸಲಾಗಿದ್ದು, ಶೇ 54ರಷ್ಟು ಸರಬರಾಜು ಮಾಡಲಾಗಿದೆ. ಇನ್ನೂ ಶೇ 40ರಷ್ಟು ಮುದ್ರಣವಾಗಬೇಕಾಗಿದೆ. ಉಳಿದ ಪಠ್ಯ ಪುಸ್ತಕಗಳ ಮುದ್ರಣ ಮತ್ತು ಸರಬರಾಜು ಮಾಡಲು ಇನ್ನೂ ಒಂದು ತಿಂಗಳು ಸಮಯಾವಕಾಶ ಬೇಕಾಗಬಹುದು' ಎಂದು ಪಠ್ಯಪುಸ್ತಕದ ಪ್ರಮುಖ ಮುದ್ರಕರಾದ ಅಭಿಮಾನಿ ಪ್ರಕಾಶನದ ಆಡಳಿತಾಧಿಕಾರಿ ಅನಿಲ್ ಹೊಸಕೊಪ್ಪ ತಿಳಿಸಿದ್ದಾರೆ.

'ಕಾಗದದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಉತ್ತರ ಭಾರತದ ಮಿಲ್‌ಗಳು ನೀಡಿರುವ ವಿವರಗಳನ್ನು ಶಿಕ್ಷಣ ಇಲಾಖೆಗೆ ನೀಡಲಾಗಿದೆ. ಇನ್ನೂ ಅನುಮೋದನೆ ದೊರೆಯಬೇಕಾಗಿದೆ. ಆದರೆ, ಕಾಗದ ದರ ಏರಿಕೆಯಾಗಿರುವುದರಿಂದ ಮುದ್ರಕರಿಗೆ ಅಪಾರ ನಷ್ಟವಾಗಲಿದೆ ಎನ್ನುವುದನ್ನು ಅಧಿಕಾರಿಗಳಿಗೆ ತಿಳಿಸಿದ್ದೇವೆ' ಎಂದು ವಿವರಿಸಿದರು.

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹4630/-gm
ಬೆಳ್ಳಿ ₹ 56,000/-*CA
ಚಿಕ್ಕಪೇಟೆ: 41300355
Gangothri

ಕಮಲ್ ಪಂತ್ ದಿಢೀರ್ ವರ್ಗ: ಪ್ರತಾಪ್ ರೆಡ್ಡಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರನ್ನು ಸೋಮವಾರ ದಿಢೀರ್ ವರ್ಗಾವಣೆ ಮಾಡಲಾಗಿದ್ದು, ಅವರ ಜಾಗಕ್ಕೆ ರಾಜ್ಯ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಸಿ.ಎಚ್. ಪ್ರತಾಪ್ ರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ.

ಪ್ರತಾಪ್ ರೆಡ್ಡಿ

3ನೇ ಪುಟ ನೋಡಿ

ಜ್ಞಾನವಾಪಿ ಸಮೀಕ್ಷೆ: ಸಿಕ್ಕಿದ್ದು ಕಾರಂಜಿಯ ಬಿಡಿಭಾಗ ಎಂದ ಮಸೀದಿ ವಕ್ತಾರ

ಶಿವಲಿಂಗ ಪತ್ತೆ: ಹಿಂದೂ ಪರ ವಕೀಲ

ವಾರಾಣಸಿ (ಪಿಟಿಐ): ಕಾಶಿ ವಿಶ್ವನಾಥ ಮಂದಿರದ ಸಮೀಪದಲ್ಲಿ ಇರುವ ಜ್ಞಾನವಾಪಿ ಮಸೀದಿಯ ಆವರಣದಲ್ಲಿರುವ ಕೊಳದ ಹತ್ತಿರ ಶಿವಲಿಂಗ ಪತ್ತೆಯಾಗಿದೆ ಎಂದು ಹಿಂದೂ ಕಕ್ಷಿದಾರರ ಪರ ವಕೀಲ ಮದನ್ ಮೋಹನ್ ಯಾದವ್ ಸೋಮವಾರ ಹೇಳಿದ್ದಾರೆ. ಆದರೆ, ಇದನ್ನು ಮಸೀದಿ ಆಡಳಿತ ಮಂಡಳಿಯ ವಕ್ತಾರ ಅಲ್ಲಗಳೆದಿದ್ದಾರೆ.

ನ್ಯಾಯಾಲಯದ ನಿರ್ದೇಶನದಂತೆ ನಡೆದ ವಿಡಿಯೊ ಚಿತ್ರೀಕರಣ ಸಹಿತ ಸಮೀಕ್ಷೆಯ ಸಂದರ್ಭದಲ್ಲಿ ಶಿವಲಿಂಗ ಸಿಕ್ಕಿತು ಎಂದು ಹಿಂದೂ ಕಕ್ಷಿದಾರರ ಪರ ವಕೀಲರು ಹೇಳಿದ್ದಾರೆ. ಹಾಗಾಗಿ, ಈ ಪ್ರದೇಶಕ್ಕೆ ಪ್ರವೇಶ ನಿರ್ಬಂಧಿಸಿ, ಅಗತ್ಯ ಭದ್ರತೆ ಒದಗಿಸುವಂತೆ ಸಿವಿಲ್ ನ್ಯಾಯಾಧೀಶ ರವಿ ಕುಮಾರ್ ದಿವಾಕರ್ ಆದೇಶಿಸಿದ್ದಾರೆ.

ಸಮೀಕ್ಷೆ ಸಂದರ್ಭದಲ್ಲಿ ಸಿಕ್ಕಿದ ವಸ್ತುವು ಕಾರಂಜಿಯ ಬಿಡಿಭಾಗ ಎಂದು ಮಸೀದಿಯ ಆಡಳಿತ ಮಂಡಳಿಯ ವಕ್ತಾರ ಸುದ್ದಿ ವಾಹಿನಿಯೊಂದಕ್ಕೆ ಹೇಳಿದ್ದಾರೆ. ಮಸೀದಿಯ ಪರ ವಕೀಲರ ವಾದವನ್ನು ಸಂಪೂರ್ಣವಾಗಿ ಆಲಿಸದೆಯೇ ಪ್ರವೇಶ ನಿರ್ಬಂಧ ಆದೇಶವನ್ನು ಹೊರಡಿಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಮಸೀದಿಗೆ ಬಂದ ಮುಸ್ಲಿಮರು ನಮಾಜ್‌ಗೆ ಮುನ್ನ ಶುದ್ಧೀಕರಣ ವಿಧಿಗಾಗಿ ಬಳಸುವ ಕೊಳದ ಸಮೀಪದಲ್ಲಿ ಶಿವಲಿಂಗ ಪತ್ತೆಯಾಯಿತು ಎಂದು ಹಿಂದೂ ಕಕ್ಷಿದಾರರ ವಕೀಲರು ಹೇಳಿದ್ದಾರೆ. ಸಮೀಕ್ಷೆಯ ಕೊನೆಯ ದಿನ ಶಿವಲಿಂಗ ಸಿಕ್ಕಿದೆ.

ಈಗಿನ ಬೆಳವಣಿಗೆಯು ತೃಪ್ತಿ ತಂದಿದೆ ಎಂದು ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಹೇಳಿದ್ದಾರೆ. ಬಾಬರಿ ಮಸೀದಿಯ ನಂತರ ಮತ್ತೊಂದು ಮಸೀದಿಯನ್ನು ಕಳೆದುಕೊಳ್ಳಲು ಮುಸ್ಲಿಮರು ಸಿದ್ಧರಿಲ್ಲ ಎಂದು ಎಐಎಂಐಎಂ ನಾಯಕ ಅಸಾದುದ್ದೀನ್ ಒವೈಸಿ ಹೇಳಿದ್ದಾರೆ.

6ನೇ ಪುಟ ನೋಡಿ

ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಇಂದು

ಜ್ಞಾನವಾಪಿ ಮಸೀದಿಯಲ್ಲಿನ ಸಮೀಕ್ಷೆಯನ್ನು ನಿಲ್ಲಿಸಬೇಕು ಎಂದು ಕೋರಿ ಅಂಜುಮಾನ್ ಎ ಇಂತೆಜಮಿಯಾ ಸಂಸ್ಥೆಯು ಸಲ್ಲಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಿಚಾರಣೆಗೆ ಎತ್ತಿಕೊಳ್ಳಲಿದೆ.

ಸಮೀಕ್ಷೆ ವಿಚಾರದಲ್ಲಿ ಮಧ್ಯಪ್ರವೇಶಿಸುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಪಿ.ಎಸ್. ನರಸಿಂಹ ಅವರ ಪೀಠವು ಅರ್ಜಿಯ ವಿಚಾರಣೆ ನಡೆಸಲಿದೆ.

ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ ನೀಡಲು ಸುಪ್ರೀಂ ಕೋರ್ಟ್ ಇದೇ 13ರಂದು ನಿರಾಕರಿಸಿತ್ತು. ಬದಲಿಗೆ, ಪ್ರಕರಣದ ವಿಚಾರಣೆ ನಡೆಸುವುದಾಗಿ ತಿಳಿಸಿತ್ತು.

'ದೇಗುಲ ಇದ್ದುದರ ಪುರಾವೆ'

ಜ್ಞಾನವಾಪಿ ಮಸೀದಿಯ ಸಮೀಪ ಶಿವಲಿಂಗ ಸಿಕ್ಕಿರುವುದು ಅಲ್ಲಿ ಹಿಂದೆ ದೇವಾಲಯ ಇತ್ತು ಎಂಬುದರ ಪುರಾವೆಯಾಗಿದೆ ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹೇಳಿದೆ.

'ಇದೊಂದು ಒಳ್ಳೆಯ ಸುದ್ದಿ. ಎರಡೂ ಕಡೆಯ ವಕೀಲರ ಸಮ್ಮುಖದಲ್ಲಿಯೇ ಶಿವಲಿಂಗ ಪತ್ತೆಯಾಗಿದೆ. ಶಿವಲಿಂಗ ಪತ್ತೆಯ ಹಿಂದಿನ ಕಾರಣ ಬಹಳ ಸ್ಪಷ್ಟ. ಶಿವಲಿಂಗ ಪತ್ತೆಯಾದ ಸ್ಥಳವು ಈಗಲೂ 1947ರಲ್ಲಿಯೂ ದೇವಾಲಯವೇ ಆಗಿದೆ ಎಂಬುದು ದೃಢಪಟ್ಟಿದೆ' ಎಂದು ವಿಶ್ವ ಹಿಂದೂ ಪರಿಷತ್ ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಲ್ ಹೇಳಿದ್ದಾರೆ.

'ಈ ದೇಶದ ಪ್ರತಿಯೊಬ್ಬರೂ ಈ ಪುರಾವೆಯನ್ನು ಒಪ್ಪಿ, ಮನ್ನಣೆ ನೀಡುತ್ತಾರೆ ಎಂಬ ಭರವಸೆ ಇದೆ. ಅತ್ಯಂತ ಸ್ಪಷ್ಟ ಫಲಿತಾಂಶದತ್ತ ದೇಶವು ಸಾಗಲಿದೆ' ಎಂದು ಅವರು ಹೇಳಿದ್ದಾರೆ.

ಬುದ್ಧ ಪೂರ್ಣಿಮೆ ಬೆಂಗಳೂರಿನ ಗಾಂಧಿನಗರದ ಮಹಾ ಬೋಧಿ ಸೊಸೈಟಿಯಲ್ಲಿ ವೈಶಾಖ ಬುದ್ಧ ಪೂರ್ಣಿಮೆ ಅಂಗವಾಗಿ ಸೋಮವಾರ ಬೌದ್ಧ ಬಿಕ್ಕುಗಳು ಬುದ್ಧನ ಮೂರ್ತಿ ಹಾಗೂ ಬೋಧಿ ವೃಕ್ಷಕ್ಕೆ ಪ್ರಾರ್ಥನೆ ಸಲ್ಲಿಸಿದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

19 ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್'

ಬೆಂಗಳೂರು: ರಾಜ್ಯದ ಒಳನಾಡು ಪ್ರದೇಶದಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿರುವುದರಿಂದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿ ಮೇ 17 ಮತ್ತು 18ರಂದು ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮೇಲ್ಮೈ ಸುಳಿಗಾಳಿಯು ಮಧ್ಯಪ್ರದೇಶದಿಂದ ಕರ್ನಾಟಕದ ಒಳನಾಡು ಮಾರ್ಗವಾಗಿ ತಮಿಳುನಾಡಿನತ್ತ ಚಲಿಸುತ್ತಿರುವ ಕಾರಣ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆಯಾಗುತ್ತಿದೆ. ಗಾಳಿ ಬೀಸುವ ದಿಕ್ಕಿನ ಬದಲಾವಣೆ ಜತೆಗೆ ಲಕ್ಷದ್ವೀಪ ಭಾಗದಲ್ಲಿ ಮತ್ತೊಂದು ಸುಳಿಗಾಳಿ ಇರುವುದರಿಂದ ಕರಾವಳಿ ಜಿಲ್ಲೆಗಳಲ್ಲೂ ಇದೇ 21ರವರೆಗೆ ಮಳೆ ಮುಂದುವರಿಯಲಿದೆ. ಕರಾವಳಿ ಜಿಲ್ಲೆಗಳಲ್ಲಿ ಮೇ 18ಕ್ಕೆ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಒಂದು ದಿನ 'ರೆಡ್ ಅಲರ್ಟ್' ಘೋಷಿಸಲಾಗಿದೆ. ಕರಾವಳಿಯಲ್ಲಿ ಗಂಟೆಗೆ ಗರಿಷ್ಠ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದೂ ಇಲಾಖೆ ಎಚ್ಚರಿಸಿದೆ.

'ಅಸನಿ ಚಂಡಮಾರುತದ ಪರಿಣಾಮ ರಾಜ್ಯದ ಹಲವೆಡೆ ಕಳೆದ ವಾರದಿಂದ ಮಳೆ ಸುರಿಯಿತು. ಈಗ ಅದರ ಪ್ರಭಾವ ತಗ್ಗಿದೆ. ಮೇಲ್ಮೈ ಸುಳಿಗಾಳಿ ಹಾಗೂ ಹವಾಮಾನ ವೈಪರೀತ್ಯಗಳಿಂದ ಮಳೆ ಮುಂದುವರಿಯಲಿದೆ. ಸದ್ಯ ದಕ್ಷಿಣ ಅಂಡಮಾನ್ ಸಮುದ್ರ ಭಾಗದಲ್ಲಿ ಮುಂಗಾರು ಪ್ರವೇಶವಾಗಿದೆ. ರಾಜ್ಯಕ್ಕೆ ಮೇ ಅಂತ್ಯದೊಳಗೆ ಮುಂಗಾರು ಪ್ರವೇಶಿಸುವ ಸಾಧ್ಯತೆ ಇದೆ' ಎಂದು ಹವಾಮಾನ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಇನ್ನೊಂದು ಸುದ್ದಿ 6

ಒಳ ಪುಟ
'ಅಂತರರಾಷ್ಟ್ರೀಯ ಗಡಿಯಲ್ಲಿ ಪಿಎಲ್‌ಎಯಿಂದ ಅಭಿವೃದ್ಧಿ' 6

ಚಿನಕುರಳಿ
ಪ್ರಕಾಶ್ ಶೆಟ್ಟಿ



ಶಸ್ತ್ರಾಸ್ತ್ರ ತರಬೇತಿ: ಸಾಯಿ ಶಂಕರ ಶಾಲೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಭೇಟಿ

ಕೊಡಗಿನ ಶಾಸಕರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಬಜರಂಗದಳದ ಕಾರ್ಯಕರ್ತರಿಗೆ ತ್ರಿಶೂಲ ದೀಕ್ಷೆ ಹಾಗೂ ಶಸ್ತ್ರಾಸ್ತ್ರ ತರಬೇತಿ ನಡೆದ ಪೊನ್ನಂಪೇಟೆಯ ಸಾಯಿ ಶಂಕರ ವಿದ್ಯಾಸಂಸ್ಥೆಗೆ ವಿರಾಜಪೇಟೆಯ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಬಿಳಗಿ ಸೋಮವಾರ ಭೇಟಿ ನೀಡಿ ಆಡಳಿತ ಮಂಡಳಿಯಿಂದ ವಿವರಣೆ ಪಡೆದುಕೊಂಡಿದ್ದಾರೆ.

ಈ ನಡುವೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸದಸ್ಯರು, ತರಬೇತಿಯಲ್ಲಿ ಭಾಗಿಯಾದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪೊಲೀಸರಿಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿಲ್ಲ.

'ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಶಾಲಾ ಆವರಣ ನೀಡುವಂತೆ ಬಜರಂಗದಳದ ಮುಖಂಡರು ಮನವಿ ಮಾಡಿದ್ದರು. ಅದರಂತೆ ಶಾಲೆ ಆವರಣ ಬಿಟ್ಟು ಕೊಡಲಾಗಿತ್ತು. ಅಷ್ಟು ಮಾಹಿತಿ ಮಾತ್ರ ನಮ್ಮಲಿದೆ. ಶಾಲೆಯ ಶಿಕ್ಷಕರಾಗಲಿ, ಆಡಳಿತ ಮಂಡಳಿ ಸದಸ್ಯರಾಗಲಿ ಶಿಬಿರದಲ್ಲಿ ಭಾಗಿಯಾಗಿಲ್ಲ' ಎಂದು ಆಡಳಿತ ಮಂಡಳಿ ಸದಸ್ಯರು ಶಿಕ್ಷಣಾಧಿಕಾರಿಗೆ ವಿವರಣೆ ನೀಡಿದ್ದಾರೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಮೇ 5ರಿಂದ 13ರ ತನಕ ಸಾಯಿ ಶಂಕರ ಶಾಲೆಯಲ್ಲಿ ನಡೆದ ಪ್ರಶಿಕ್ಷಣ ವರ್ಗದಲ್ಲಿ ಆರ್‌ಎಸ್‌ಎಸ್, ಬಜರಂಗದಳ, ವಿಎಚ್‌ಪಿ ಕಾರ್ಯಕರ್ತರಿಗೆ ಬಂದೂಕು ತರಬೇತಿ, ತ್ರಿಶೂಲ ವಿತರಣೆ ಮಾಡಿರುವ ಮಾಹಿತಿ ಗಮನಕ್ಕೆ ಬಂದಿದೆ. ವಿಎಚ್‌ಪಿ ಜಿಲ್ಲಾ ಅಧ್ಯಕ್ಷ ಪಿ. ಕೃಷ್ಣಮೂರ್ತಿ, ರಘು ಸಕಲೇಶಪುರ ಹಾಗೂ ಸಾಯಿ ಶಂಕರ ವಿದ್ಯಾಸಂಸ್ಥೆಯ ಅಧ್ಯಕ್ಷ ಜರು ಗಣಪತಿ ಶಿಬಿರ ಆಯೋಜಿಸಿದ್ದಾರೆ. ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಸೇರಿ 120 ಮಂದಿ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಕೊಡಗು ಶಾಂತಿ, ಸಹಬಾಳ್ವೆಗೆ ಹೆಸರಾದ ಜಿಲ್ಲೆ. ಆತಂಕಕಾರಿ ತರಬೇತಿ ಶಿಬಿರದಿಂದ ಭವಿಷ್ಯದಲ್ಲಿ ಜಿಲ್ಲೆಯನ್ನು ಕೇಸರಿ ಭಯೋತ್ಪಾದನೆ ತಾಣವಾಗಿಸಲು ಹೊರಟಂತೆ ಕಾಣಿಸುತ್ತಿದ್ದು, ಆಯೋಜಕರು ಹಾಗೂ ಉತ್ತೇಜನ ನೀಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ, ಪಿಎಫ್‌ಐ ಸದಸ್ಯ ಕೆ.ಎಚ್. ಇಬ್ರಾಹಿಂ ಪೊನ್ನಂಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ರಜೆಯಿದ್ದ ಕಾರಣ ಶಾಲಾ ಆವರಣ ಬಳಕೆ'

ಕಲಬುರಗಿ: 'ಶಾಲೆಗೆ ರಜೆ ಇದ್ದ ಕಾರಣ ಕೊಡಗು ಜಿಲ್ಲೆ ಪೊನ್ನಂಪೇಟೆಯ ಶಾಲೆಯನ್ನು ಬಜರಂಗದಳ ಕಾರ್ಯಕರ್ತರಿಗೆ ತರಬೇತಿ ನೀಡಲು ಬಳಸಲಾಯಿತು. ತರಬೇತಿ ವೇಳೆ ಚಾಕುವಿಗಿಂತ ಸಣ್ಣ ಗಾತ್ರದ ತ್ರಿಶೂಲ ನೀಡುವ ರೂಢಿ ಇದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಿಳಿಸಿದರು.

ಕೊಡಗು ಜಿಲ್ಲೆಯಲ್ಲಿ ಹಿಂದೂ ಕಾರ್ಯಕರ್ತರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಿರುವ ವಿಚಾರ ಗೊತ್ತಿಲ್ಲ. ಕಾನೂನು ಬಾಹಿರ ಚಟುವಟಿಕೆ ನಡೆಸಲು ಅವಕಾಶ ಕೊಡುವುದಿಲ್ಲ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಬಜರಂಗದಳದ ಕಾರ್ಯಕರ್ತರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಿರುವುದು ಸಂಪೂರ್ಣ ಸುಳ್ಳು. ಅಂಥದ್ದು ನಡೆಯುತ್ತಾ?
ಡಾ.ಸಿ.ಎನ್.ಅಶ್ವತ್ಥನಾರಾಯಣ
ಉನ್ನತ ಶಿಕ್ಷಣ ಸಚಿವ



ಜಯಮಹಲ್ ರಸ್ತೆ, ಬಳ್ಳಾರಿ ರಸ್ತೆ ಅಭಿವೃದ್ಧಿಗೆ ಅರಮನೆ ಜಾಗ ಸ್ವಾಧೀನ ಪ್ರಕರಣ: ಇಂದು ವಿಚಾರಣೆ

ಟಿಡಿಆರ್ ನೀಡದ ನಿರ್ಧಾರಕ್ಕೆ ಬದ್ಧ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯಮಹಲ್ ರಸ್ತೆ ಹಾಗೂ ಬಳ್ಳಾರಿ ರಸ್ತೆಗಳನ್ನು ವಿಸ್ತರಿಸುವುದಕ್ಕೆ ಅರಮನೆ ಮೈದಾನದ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ವ್ಯಾಜ್ಯದ ವಿಚಾರಣೆ ಇದೇ ಮಂಗಳವಾರ (ಮೇ 17) ಸುಪ್ರೀಂ ಕೋರ್ಟ್‌ನಲ್ಲಿ ನಡೆಯಲಿದೆ. ಈ ರಸ್ತೆಗಳ ವಿಸ್ತರಣೆಗೆ ಅರಮನೆ ಮೈದಾನದ ಜಾಗವನ್ನು ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ನೀಡಿ ಸ್ವಾಧೀನ ಪಡಿಸಿಕೊಳ್ಳಲು ಒಪ್ಪದಿರುವ ತನ್ನ ನಿಲುವಿಗೆ ಬದ್ಧವಾಗಿರಲು ಸರ್ಕಾರ ನಿರ್ಧರಿಸಿದೆ.

ಈ ರಸ್ತೆ ವಿಸ್ತರಣೆಗೆ ಟಿಡಿಆರ್ ನೀಡಲು ಮೊದಲು ಸರ್ಕಾರ ಒಪ್ಪಿತ್ತು. ಈ ಪ್ರಕರಣದಲ್ಲಿ ಟಿಡಿಆರ್ ನೀಡುವುದಕ್ಕೆ ತಾಂತ್ರಿಕ ಅಡಚಣೆಗಳಿವೆ ಎಂಬ ಕಾರಣಕ್ಕೆ ಈ ನಿರ್ಧಾರದಿಂದ ಸರ್ಕಾರ ಹಿಂದೆ ಸರಿದಿತ್ತು. ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಅವರೂ ಈ ರಸ್ತೆಗಳ ವಿಸ್ತರಣೆಗೆ ಟಿಡಿಆರ್ ನೀಡುವುದು ಸರಿಯಲ್ಲ ಎಂಬ ಅಭಿಪ್ರಾಯ ನೀಡಿದ್ದಾರೆ ಎಂದು ಗೊತ್ತಾಗಿದೆ.

ಜಯಮಹಲ್ ರಸ್ತೆಯನ್ನು ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣದವರೆಗೆ ಹಾಗೂ ಬಳ್ಳಾರಿ ರಸ್ತೆಯನ್ನು ಬಿಡಿಎ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ವಿಸ್ತರಿಸಲು ಬಿಬಿಎಂಪಿ 2009ರಲ್ಲೇ ಯೋಜನೆ ರೂಪಿಸಿತ್ತು. ಈ ಕಾಮಗಾರಿಗಳಿಗೆ ಅರಮನೆ ಮೈದಾನದ ಆಸ್ತಿಯಲ್ಲಿ 15 ಎಕರೆ 39 ಗುಂಟೆ ಜಾಗದ ಅವಶ್ಯಕತೆ ಇದೆ.

ಈ ಕಾಮಗಾರಿಗಾಗಿ ಸ್ವಾಧೀನ-ಪಡಿಸಿಕೊಳ್ಳಲು ಟಿಡಿಆರ್ ನೀಡುವ ಪ್ರಸ್ತಾಪವನ್ನು ಬಿಬಿಎಂಪಿಯ ಹಿಂದಿನ ಆಯುಕ್ತರೊಬ್ಬರು ಅರಮನೆಯ ಮಾಲೀಕತ್ವದ ಕುರಿತಂತೆ ಹೈಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದ ಮೈಸೂರು ರಾಜವಂಶಸ್ಥರ ಮುಂದಿಟ್ಟಿದ್ದರು. ಎರಡೂ ಕಡೆಯವರು ಒಪ್ಪಿದ್ದರಿಂದ ರಸ್ತೆ ವಿಸ್ತರಣೆಗೆ ಬೇಕಾದ ಜಾಗವನ್ನು ಟಿಡಿಆರ್ ನೀಡಿ ಸ್ವಾಧೀ-ನಪಡಿಸಿಕೊಳ್ಳಲು ಸುಪ್ರೀಂ ಕೋರ್ಟ್ ಸಮ್ಮತಿ ನೀಡಿತ್ತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಟಿಡಿಆರ್ ನೀಡಿ ರಸ್ತೆ ವಿಸ್ತರಣೆ ಕಾಮಗಾರಿಗೆ ಅಗತ್ಯವಿರುವ ಜಾಗ ಸ್ವಾಧೀನಪಡಿಸಿ-ಕೊಳ್ಳಲು ರಾಜ್ಯ ಸಚಿವ ಸಂಪುಟವು 2019ರಲ್ಲಿ ಹಸಿರು ನಿಶಾನೆಯನ್ನೂ ತೋರಿಸಿತ್ತು.

ಟಿಡಿಆರ್ ನೀಡಿ ಜಾಗ ಸ್ವಾಧೀನ-ಪಡಿಸಿಕೊಳ್ಳುವುದು ಸರ್ಕಾರದ ಹಿತಾಸಕ್ತಿಯಿಂದ ಒಳ್ಳೆಯದಲ್ಲ. ಇದು ಅನೇಕ ತಾಂತ್ರಿಕ ಸಮಸ್ಯೆಗಳನ್ನು ತಂದೊಡ್ಡಲಿದೆ ಎಂದು 2021ರ ಫೆ. 15ರಂದು ಆಗಿನ ಬಿಬಿಎಂಪಿಯ ಆಯುಕ್ತರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ವಿವರವಾದ ಪತ್ರ ಬರೆದಿದ್ದರು. ಬಳಿಕ ಭೂಸ್ವಾಧೀನ ನಡೆಸಲು ಟಿಡಿಆರ್ ನೀಡುವ ನಿರ್ಧಾರದಿಂದ ಸರ್ಕಾರ ಹಿಂದೆ ಸರಿದಿತ್ತು.

ಟಿಡಿಆರ್ ನೀಡಲು ತಾಂತ್ರಿಕ ಅಡಚಣೆ ಏನು?

ರಾಜ್ಯ ಸರ್ಕಾರವು 1996ರಲ್ಲಿ ಬೆಂಗಳೂರು ಅರಮನೆ (ಸ್ವಾಧೀನ ಮತ್ತು ಹಸ್ತಾಂತರ) ಕಾಯ್ದೆಯನ್ನು ಅಂಗೀಕರಿಸಿದ್ದು, ಅದರ ಪ್ರಕಾರ ಅರಮನೆ ಮೈದಾನದ 472.16 ಎಕರೆ ರಾಜ್ಯ ಸರ್ಕಾರದ ಸ್ವತ್ತು. ಇದಕ್ಕೆ ಸರ್ಕಾರ ₹ 11 ಕೋಟಿ ಪರಿಹಾರ ನಿಗದಿಪಡಿಸಿತ್ತು. ಈ ಕಾಯ್ದೆಯನ್ನು ಮೈಸೂರು ರಾಜವಂಶಸ್ಥ ದಿವಂಗತ ಶ್ರೀಕಂಠದತ್ತ ಒಡೆಯರ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಕಾಯ್ದೆಯನ್ನು ಎತ್ತಿಹಿಡಿದ ಹೈಕೋರ್ಟ್ ಆದೇಶದ ವಿರುದ್ಧ ರಾಜವಂಶಸ್ಥರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಇದಕ್ಕೆ ತಡೆಯಾಜ್ಞೆ ನೀಡಿದೆ. ಹಾಗಾಗಿ ಭೂಮಿ ಬಳಸಿಕೊಳ್ಳಲು ರಾಜವಂಶಸ್ಥರಿಗೆ ಏನೇ ಪರಿಹಾರ ನೀಡುವುದಿದ್ದರೂ ಈ ಪರಿಹಾರದ ಚೌಕಟ್ಟಿನಲ್ಲೇ ಇರಬೇ-ಕಾಗುತ್ತದೆ.

ಈ ಜಾಗಕ್ಕೆ ಟಿಡಿಆರ್ ರೂಪದಲ್ಲಿ ಪರಿಹಾರ ನೀಡಿದರೆ ಸರ್ಕಾರ ಚದರ ಮೀಟರ್ ಭೂಮಿಗೆ ನಿವೇಶನ ಮೌಲ್ಯದ 0.4 ಪಟ್ಟು ಸಗಟು ಮೌಲ್ಯ ನೀಡಬೇಕಾಗುತ್ತದೆ. ಇಲ್ಲಿನ ಜಾಗಕ್ಕೆ ಪ್ರತಿ ಚದರ ಮೀಟರ್‌ಗೆ ₹ 2.70 ಲಕ್ಷ ಸಗಟು ಮೌಲ್ಯವಿದೆ. ಅದರ ಪ್ರಕಾರ ಚದರ ಮೀಟರ್ ಭೂಮಿಗೆ ₹ 1.08 ಲಕ್ಷ ನೀಡಬೇಕಾಗುತ್ತದೆ. ಅಂದರೆ, 15 ಎಕರೆ 39 ಗುಂಟೆಯ ಟಿಡಿಆರ್ ಮೌಲ್ಯ ₹ 1,396 ಕೋಟಿ ಆಗಲಿದೆ. ಆದರೆ, 1996ರ ಅರಮನೆ ಸ್ವಾಧೀನ ಕಾಯ್ದೆ ಪ್ರಕಾರ ಇಷ್ಟು ಜಾಗಕ್ಕೆ ₹ 37.28 ಲಕ್ಷ ಪರಿಹಾರವನ್ನು ಮಾತ್ರ ನೀಡಿದರೆ ಸಾಕು.

ಟಿಡಿಆರ್ ನೀಡಿದರೆ ಅದನ್ನು ರಾಜ ವಂಶಸ್ಥರು ಮಾರಾಟ ಮಾಡಬಹುದು. ಖರೀದಿಸಿದವರು ಅವುಗಳನ್ನು ಬಳಸಿಕೊಳ್ಳಬಹುದು. ಅರಮನೆ ಮೈದಾನದ ಮಾಲೀಕತ್ವದ ವ್ಯಾಜ್ಯದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ರಾಜ್ಯ ಸರ್ಕಾರದ ಪರವಾಗಿ ಬಂದರೆ, ಆಗ ಟಿಡಿಆರ್‌ಗಳನ್ನು ಹಿಂಪಡೆಯಲು ಸಾಧ್ಯವಿಲ್ಲ. ಇಷ್ಟೊಂದು ಪ್ರಮಾಣದ ಟಿಡಿಆರ್ ನಗರದಲ್ಲಿ ಭಾರಿ ಪ್ರಮಾಣದಲ್ಲಿ ಕಾಂಕ್ರೀಟ್ ಕಟ್ಟಡಗಳು ತಲೆಎತ್ತಲು ಕಾರಣವಾಗುತ್ತದೆ ಎಂಬುದು ಬಿಬಿಎಂಪಿ ಆಕ್ಷೇಪ.

ಸೊಳ್ಳೆ ನಿಯಂತ್ರಣ: ಕಾರ್ಯಕರ್ತರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೊಳ್ಳೆಗಳ ಸಂತಾನೋತ್ಪತ್ತಿ ತಾಣಗಳ ನಿರ್ಮೂಲನೆ ಕಾರ್ಯದಲ್ಲಿ ಗಮನಾರ್ಹ ಸಾಧನೆ ಮಾಡಿದ ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಇಬ್ಬರು ಆರೋಗ್ಯ ಕಾರ್ಯಕರ್ತರು ಹಾಗೂ 5 ಖಾಸಗಿ ಸಂಸ್ಥೆ, ಆಸ್ಪತ್ರೆ ಹಾಗೂ ಪ್ರಯೋಗಾ-ಲಯಗಳಿಗೆ ಬಿಬಿಎಂಪಿ ವತಿಯಿಂದ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಾಷ್ಟ್ರೀಯ ಡೆಂಗಿ ದಿನಾಚರಣೆ ಅಂಗವಾಗಿ ಬಿಬಿಎಂಪಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಡೆಂಗಿ ದಿನಾಚರಣೆ' ಕಾರ್ಯಕ್ರ-ಮದಲ್ಲಿ ಇಲಾಖೆಯ ಆಯುಕ್ತ ಡಿ.ರಂದೀಪ್ ಹಾಗೂ ಪಾಲಿಕೆ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬೆಂಗಳೂರು ನಗರ ಪ್ರದೇಶ ಜನರಿಗೆ ಡೆಂಗಿ ಸಾಂಕ್ರಾಮಿಕ ರೋಗದ ಹರಡುವಿಕೆ ಹಾಗೂ ನಿಯಂತ್ರಣ ಬಗ್ಗೆ ಅರಿವು ಮೂಡಿಸಲು ಎಂ.ಜಿ.ರಸ್ತೆಯ ಗಾಂಧಿ ಉದ್ಯಾನದಿಂದ ಪಾಲಿಕೆಯ ಕೇಂದ್ರ ಕಚೇರಿ ಆವರಣದವರೆಗೆ ಜಾಥಾ ನಡೆಯಿತು. ಪಾಲಿಕೆಯ ಅಧಿಕಾರಿಗಳು, ವೈದ್ಯರು, ಕಿರಿಯ ಆರೋಗ್ಯ ಸಹಾಯಕಿಯರು, ಆಶಾ ಕಾರ್ಯಕರ್ತೆಯರು ಮತ್ತು ಸ್ಥಳೀಯ ಸ್ವಯಂ ಸೇವಾ ಸಂಸ್ಥೆ ಪದಾಧಿಕಾರಿಗಳು ಸೇರಿದಂತೆ 800ಕ್ಕೂ ಹೆಚ್ಚು ಮಂದಿ ಭಾಗವ-ಹಿಸಿದ್ದರು.

ಕಾರ್ಯಕ್ರಮದಲ್ಲಿ ಭಾರತೀಯ ಸರ್ಕಾರ ಹಿರಿಯ ಪ್ರಾಂತೀಯ ನಿರ್ದೇಶಕ ಡಾ.ರವಿಕುಮಾರ್. ಕೆ, ಆರೋಗ್ಯ ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರಾದ ಡಾ. ಎಂ.ಇಂದುಮತಿ, ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ಉಪಸ್ಥಿತರಿದ್ದರು.

ವಾರ್ಡ್ ಸಮಿತಿ ಸಭೆ ಕಡ್ಡಾಯ: ಮುಖ್ಯ ಆಯುಕ್ತ

ಬೆಂಗಳೂರು: 'ಪಾಲಿಕೆಯ ಎಲ್ಲ ವಾರ್ಡ್‌ಗಳಲ್ಲಿಯೂ ವಾರ್ಡ್ ಸಮಿತಿ ಸಭೆಯನ್ನು ಪ್ರತಿ ತಿಂಗಳೂ ಕಡ್ಡಾಯವಾಗಿ ನಡೆಸಬೇಕು. ಈ ಸಭೆಯು ಇನ್ನೂ ಹೆಚ್ಚು ಪರಿಣಾಮಕಾರಿಯಾಗಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ ನೀಡಿದ್ದಾರೆ.

ಈ ಸೂಚನೆಯನ್ನು ಉಲ್ಲಂಘಿಸುವ ನೋಡಲ್ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ.

ಬಿಬಿಎಂಪಿ ಸದಸ್ಯರ ಅಧಿಕಾರಾವಧಿಯು 2020ರ ಸೆ.10ರಂದು ಮುಕ್ತಾಯಗೊಂಡಿದ್ದು, ತದನಂತರ ಎಲ್ಲಾ 198 ವಾರ್ಡ್‌ಗಳ ವಾರ್ಡ್ ಸಮಿತಿಗಳಿಗೂ ಪಾಲಿಕೆಯ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಕೆಲವು ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ಸಭೆಗಳು ವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಕೆಲವು ನೋಡಲ್ ಅಧಿಕಾರಿಗಳು ಕಾಟಾಚಾರಕ್ಕೆ ಸಭೆ ನಡೆಸುತ್ತಾರೆ. ಸ್ಥಳೀಯರ ಸಮಸ್ಯೆಗಳಿಗೆ ಈ ಸಭೆಗಳಲ್ಲಿ ಸ್ಪಂದನೆ ಸಿಗುತ್ತಿಲ್ಲ ಎಂಬ ದೂರುಗಳಿವೆ.

ಕಮಲ್ ಪಂತ್ ದಿಢೀರ್ ವರ್ಗ: ಪ್ರತಾಪ್ ರೆಡ್ಡಿ ನೇಮಕ

ಒಂದನೇ ಪುಟದಿಂದ

'ಲಾಕ್‌ಡೌನ್ ವೇಳೆ ಅಗತ್ಯ ಸೇವೆಗಳಿಗೆ ಪಾಸ್ ವಿತರಿಸುವ ವಿಚಾರವಾಗಿ ರಾಜಕೀಯ ಮುಖಂಡರ ಜೊತೆ ಜಟಾಪಟಿ ನಡೆಸಿದ್ದರು' ಎನ್ನಲಾದ ನಗರದ 35ನೇ ಕಮಿಷನರ್ ಭಾಸ್ಕರ್ ರಾವ್ ಅವರನ್ನು ಸಹ ದಿಢೀರ್ ಬದಲಾವಣೆ ಮಾಡಲಾಗಿತ್ತು. ಅವರ ಜಾಗಕ್ಕೆ ಬಂದಿದ್ದ ಕಮಲ್ ಪಂತ್, 653 ದಿನ ಅಧಿಕಾರ ಚಲಾಯಿಸಿದ್ದರು.

ಜಗಜೀವನ್‌ರಾಮ್ ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಚಂದ್ರು (22) ಕೊಲೆ ಪ್ರಕರಣದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ, 'ಉರ್ದು ಮಾತನಾ-ಡಿದ್ದಕ್ಕೆ ಕೊಲೆ ಆಗಿದೆ' ಎಂದಿದ್ದರು. ಹೇಳಿಕೆ ತಳ್ಳಿಹಾಕಿದ್ದ ಕಮಿಷನರ್ ಕಮಲ್ ಪಂತ್, 'ಬೈಕ್‌ಗಳು ಪರಸ್ಪರ ತಗುಲಿದ್ದ ಕಾರಣಕ್ಕೆ ಗಲಾಟೆಯಾಗಿ ಚಂದ್ರಶೇಖರ್ ಕೊಲೆ ಆಗಿದೆ. ಉರ್ದು ಮಾತನಾಡಿದ್ದಕ್ಕಲ್ಲ' ಎಂದಿದ್ದರು. ಇದು ರಾಜ್ಯ ಸರ್ಕಾರದ ಮುಜುಗರಕ್ಕೆ ಕಾರಣವಾಗಿತ್ತು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ರವಿಕುಮಾರ್, 'ಉರ್ದು ಮಾತನಾಡದಿದ್ದಕ್ಕೆ ಕೊಲೆಯಾಗಿದೆ' ಎಂದು ಪುನಃ ಹೇಳಿದ್ದರು. ಕಮಿಷನರ್ ಹೇಳಿಕೆಯೇ ಸುಳ್ಳು ಎಂಬುದಾಗಿ ಆಕ್ರೋಶ ವ್ಯಕ್ತಪಡಿಸಿದ್ದರು.

ಈ ಜಟಾಪಟಿ ನಡುವೆಯೇ ಕಮಿಷನರ್ ಬದಲಾವಣೆ ಮಾತುಗಳು ಕೇಳಿಬಂದಿದ್ದವು. ಇದೀಗ ಅಧಿಕೃತ ಆದೇಶ ಹೊರಬಿದ್ದಿದ್ದು, ಕಮಲ್ ಪಂತ್ ಕಮಿಷನರ್ ಹುದ್ದೆಯಿಂದ ನಿರ್ಗಮಿಸು-ತ್ತಿದ್ದಾರೆ.

ವರ್ಗಾವಣೆ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಕಮಲ್ ಪಂತ್, 'ನನಗೆ ಸಿಕ್ಕ ಅವಕಾಶವನ್ನು ಬಳಸಿಕೊಂಡು ಬೆಂಗಳೂರಿನ ರಕ್ಷಣೆಗೆ ಶ್ರಮಿಸಿದ್ದೇನೆ. ಎಲ್ಲರಿಗೂ ಧನ್ಯವಾದಗಳು' ಎಂದರು.

ಬಡ್ತಿ ಹೊಂದಿದ್ದ ಕಮಲ್ ಪಂತ್: ಎಡಿಜಿಪಿ ಆಗಿದ್ದ ಕಮಲ್ ಪಂತ್ ಅವರಿಗೆ ಕೆಲ ತಿಂಗಳ ಹಿಂದೆಯೇ ಡಿಜಿಪಿ ಹುದ್ದೆಗೆ ಬಡ್ತಿ ನೀಡಲಾಗಿತ್ತು. ಆದರೆ, ರಾಜ್ಯದಲ್ಲಿ ಯಾವುದೇ ಡಿಜಿಪಿ ಹುದ್ದೆಗಳು ಖಾಲಿ ಇರಲಿಲ್ಲ. ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಹುದ್ದೆಯನ್ನೇ ಡಿಜಿಪಿ ಹುದ್ದೆಗೆ ಉನ್ನತೀಕರಿಸಲಾಗಿದ್ದು, ಅದೇ ಜಾಗಕ್ಕೆ ಕಮಲ್ ಪಂತ್ ಅವರನ್ನು ವರ್ಗಾಯಿಸಲಾಗಿದೆ.

'ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಎಡಿಜಿಪಿ ಅಮ್ರಿತ್ ಪೌಲ್ ಭಾಗಿಯಾಗಿರುವ ಮಾಹಿತಿ ಇದ್ದು, ಅದಕ್ಕಾಗಿ ಸಿಐಡಿ ಅಧಿಕಾರಿಗಳು ಪುರಾವೆಗಳನ್ನು ಹುಡುಕುತ್ತಿದ್ದಾರೆ. ಮುಂಬರುವ ನೇಮಕಾತಿಗಳಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳುವ ಉದ್ದೇಶದಿಂದಲೇ ಎಡಿಜಿಪಿ ಹುದ್ದೆಯನ್ನು ತೆಗೆದು ಡಿಜಿಪಿ ಹುದ್ದೆ ಸೃಜಿಸಲಾಗಿದೆ' ಎಂದೂ ಹೇಳಲಾಗುತ್ತಿದೆ.

ಅಧಿಕಾರ ಸ್ವೀಕಾರ ಇಂದು

ಆಂಧ್ರಪ್ರದೇಶದ ಗುಂಟೂರಿನ ಪ್ರತಾಪ್ ರೆಡ್ಡಿ, 1991ನೇ ಐಪಿಎಸ್ ಬ್ಯಾಚ್ ಅಧಿಕಾರಿ. ಬೆಂಗಳೂರಿನ 37ನೇ ಕಮಿಷನರ್ ಆಗಿ ಅವರು ಮಂಗಳವಾರ ಬೆಳಿಗ್ಗೆ ಅಧಿಕಾರ ವಹಿಸಿಕೊಳ್ಳ-ಲಿದ್ದಾರೆ.

ಸೋಮವಾರ ಸಂಜೆ ಆದೇಶ ಹೊರಬೀಳುತ್ತಿದ್ದಂತೆ ಪ್ರತಾಪ್ ರೆಡ್ಡಿ ಅವರು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನು ಭೇಟಿಯಾಗಿ, ಕೃತಜ್ಞತೆ ಸಲ್ಲಿಸಿದರು.

ಅಲೋಕ್ ಕುಮಾರ್ ವರ್ಗ

ಕೆಎಸ್‌ಆರ್‌ಪಿ ಎಡಿಜಿಪಿ ಆಗಿದ್ದ ಅಲೋಕ್‌ಕುಮಾರ್ ಅವರನ್ನು ರಾಜ್ಯದ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ. ಅವರ ಜಾಗಕ್ಕೆ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ (ಪ್ರಭಾರ) ಆಗಿದ್ದ ಆರ್. ಹಿತೇಂದ್ರ ಅವರನ್ನು ವರ್ಗಾಯಿಸಲಾಗಿದೆ.

ಬೆಂಗಳೂರು ಕೇಂದ್ರ ವಿಭಾಗದ ಡಿಪಿಪಿ ಎಂ.ಎನ್. ಅನುಚೇತ್ ಅವರನ್ನು ಸಿಐಡಿಗೆ ವರ್ಗಾಯಿಸಲಾಗಿ-ದ್ದು, ಅವರ ಜಾಗಕ್ಕೆ ಇನ್ನೂ ಯಾರನ್ನೂ ವರ್ಗಾವಣೆ ಮಾಡಿಲ್ಲ.

ಮತ್ತೆ ಶಾಲೆಗೆ...

ಬೆಂಗಳೂರಿನ ಹನುಮಂತನಗರದ ಸುಂಕೇನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಆರಂಭದ ದಿನವಾದ ಸೋಮವಾರ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡಿದರು

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಗ್ರಾಮ ಪಂಚಾಯಿತಿ: 314 ಸ್ಥಾನಗಳಿಗೆ ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಜುಲೈ ಒಳಗೆ ಅವಧಿ ಮುಕ್ತಾಯವಾಗುವ ನಾಲ್ಕು ಗ್ರಾಮ ಪಂಚಾಯಿತಿಗಳ 105 ಸ್ಥಾನಗಳು ಮತ್ತು ರಾಜ್ಯದ ಹಲವು ಗ್ರಾಮ ಪಂಚಾಯಿ-ತಿಗಳಲ್ಲಿ ವಿವಿಧ ಕಾರಣಗಳಿಗೆ ತೆರವಾಗಿರುವ 209 ಸದಸ್ಯ ಸ್ಥಾನಗಳಿಗೆ ಮೇ 20 ರಂದು ಚುನಾವಣೆ ನಡೆಯಲಿದ್ದು, ಈ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆ.

ಧಾರವಾಡ ಜಿಲ್ಲೆಯ ಚಾಕಲಬ್ಬಿ, ಬೆಂಗಳೂರು ನಗರ ಜಿಲ್ಲೆಯ ಕಗ್ಗಲೀಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತ್ಯಾಮಗೊಂಡ್ಲು, ಬಾಗಲಕೋಟೆ ಜಿಲ್ಲೆ ಸಾವಳಗಿ ಗ್ರಾಮ ಪಂಚಾಯಿತಿಗಳ 105 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಅಲ್ಲದೆ, ತುಮಕೂರು ಜಿಲ್ಲೆ ಶಿರಾ ನಗರಸಭೆಯ 21ನೇ ವಾರ್ಡ್‌ಗೆ ಚುನಾವಣೆ ನಡೆಯಲಿದೆ.

ದಾವಣಗೆರೆ ಮಹಾ-ನಗರಪಾಲಿಕೆಯ 2 ಚನ್ನಗಿರಿ ಪುರಸಭೆಯ 1,ಆನೆಕಲ್ ಪುರಸಭೆಯ 3, ಹೊಳೆನರಸೀಪುರ, ಜೇವರ್ಗಿ ಮತ್ತು ಸಂಕೇಶ್ವರ ಪುರಸಭೆಯ ತಲಾ 1 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
ಸಿಂಡಿಕೇಟ್ Syndicate
ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ
ನಂ.86, ಎಂ.ಜಿ.ರಸ್ತೆ, ಬೆಂಗಳೂರು – 560001. ಫೋ : 25310039
ಕಟ್ಟಡ ಆವರಣ ಬೇಕಾಗಿದೆ
ಕೆಳಗಿನ ಸ್ಥಳದ ಪ್ರಮುಖ ವಾಣಿಜ್ಯ ಸ್ಥಳಗಳಲ್ಲಿ, ಬ್ಯಾಂಕಿನ ಶಾಖೆಗಾಗಿ ನೆಲಮಹಡಿಯಲ್ಲಿ ಇರುವ, ಸ್ವಾಧೀನಕ್ಕೆ ಸಿದ್ಧವಾಗಿರುವ, 25ಕೆಡಬ್ಲ್ಯು ವಿದ್ಯುತ್ ಪೂರೈಕೆಯೊಂದಿಗೆ ಸೂಕ್ತವಾದ ವಾಣಿಜ್ಯ ಸ್ಥಳಾವಕಾಶವನ್ನು ಹೊಂದಿರುವ ಮಾಲೀಕರಿಂದ ಎರಡು ಬಿಡ್ ವ್ಯವಸ್ಥೆಯ ಅಡಿಯಲ್ಲಿ ಮೊಹರಾದ ಲಕೋಟೆಯಲ್ಲಿ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

ಸ್ಥಳ	ಜಿಲ್ಲೆ	ಅಂದಾಜು ಕಾರ್ಪೆಟ್ ಏರಿಯಾ ಚ.ಅಡಿಗಳಲ್ಲಿ
ಹಾರೋಹಳ್ಳಿ	ಮಂಡ್ಯ	2200 ಚ.ಅ.ಗಳು – 2500 ಚ.ಅ.ಗಳು

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಿದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್ ನಿಂದ Announcement → Tenders ಅಡಿಯಲ್ಲಿ ಡೌನ್‌ಲೋಡ್ ಮಾಡಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 06–06–2022ರಂದು ಸಂಜೆ 3.00 ಗಂಟೆ. ಯಾವುದೇ ಕಾರಣಗಳನ್ನು ನೀಡದೇ, ಯಾವುದೇ ಅಥವಾ ಎಲ್ಲಾ ಪ್ರಸ್ತಾವನೆಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಅಪೂರ್ಣವಾದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"
ಸ್ಥಳ : ಬೆಂಗಳೂರು ಸಹಿ/–
ದಿನಾಂಕ : 17–05–2022 ಸಹಾಯಕ ಮಹಾ ಪ್ರಬಂಧಕರು

ಹುಟ್ಟು ಹಬ್ಬದ ಶುಭಾಶಯಗಳು
ಶ್ರೀ ಜೆ. ರವಿಪ್ರಕಾಶ್ ಅವರಿಗೆ
(Ex - Councilor)
ಜನ್ಮ ದಿನದ ಶುಭಾಶಯಗಳು
ಇಂತಿ ಶುಭಕೋರುವವರು
ನಾಗಸಂದ್ರ ಮತ್ತು ಚೆಲ್ಲಘಟ್ಟ ಗ್ರಾಮಸ್ಥರು

ನಗರದಲ್ಲಿ ಇಂದು

'ಕರ್ನಾಟಕ ಕೆರೆಗಳ, ಕಾಲುವೆಗಳ ಮತ್ತು ಸಾಮೂಹಿಕ ನೀರಿನ ನೆಲೆಗಳ ವಿಕೇಂದ್ರೀಕೃತ, ಸಾಮಾಜಿಕವಾಗಿ ಒಳಗೊಳ್ಳುವ ಮತ್ತು ಪರಿಸರ ವಿವೇಕದ ರಕ್ಷಣೆ ಮತ್ತು ಪುನರ್ವಸತಿ' ವಿಚಾರ ಸಂಕಿರಣ: ಭಾಷಣ–ಬಿ.ವೀರಪ್ಪ, ಎನ್. ಕೆ.ಪಾಟೀಲ, ಆಯೋಜನೆ–ಎನ್ವಿರಾನ್ಮೆಂಟ್ ಸಪೋರ್ಟ್ ಗ್ರೂಪ್, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಸ್ಥಳ–ಮಹಾದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 9.30

'ಎಕ್ಸ್‌ಕಾನ್' ನಿರ್ಮಾಣ ಉಪಕರಣಗಳ ಪ್ರದರ್ಶನ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ವಿ.ಕೆ.ಸಿಂಗ್, ಆಯೋಜನೆ–ಭಾರತೀಯ ಉದ್ಯಮದ ಒಕ್ಕೂಟ, ಭಾರತೀಯ ನಿರ್ಮಾಣ ಉಪಕರಣಗಳ ಉತ್ಪಾದಕರ ಸಂಘ, ಸ್ಥಳ–ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ (ಬಿಐಇಸಿ), ತುಮಕೂರು ರಸ್ತೆ, ಬೆಳಿಗ್ಗೆ 10.30

ಸಂಸ್ಥಾಪಕರ ದಿನ ಮತ್ತು ಎಸ್.ಆರ್. ಸಿ.ಸ್ಮಾರಕ ಪ್ರಶಸ್ತಿ ಪ್ರದಾನ: ಅತಿಥಿಗಳು–ರಾಜ್ಯಪಾಲ ಥಾವರಚಂದ್ ಗೆಹಲೋತ್, ಎಸ್.ಚಂದ್ರಶೇಖರ್ ಶೆಟ್ಟಿ, ಪಂಕಜ್ ಮರು, ಅಧ್ಯಕ್ಷತೆ–ವಿ.ವಿ.ಕೃಷ್ಣರೆಡ್ಡಿ, ಆಯೋಜನೆ–ಎಸ್.ಆರ್.ಚಂದ್ರಶೇಖರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್, ಸ್ಥಳ–ಇಂಡಿಯಾ ಕ್ಯಾಂಪಸ್ ಕ್ರುಸೇಡ್ ಫಾರ್ ಕ್ರೈಸ್ಟ್, ಹೆಣ್ಣೂರು ಮುಖ್ಯರಸ್ತೆ, ಸೇಂಟ್ ಥಾಮಸ್ ಟೌನ್, ಲಿಂಗರಾಜಪುರ, ಬೆಳಿಗ್ಗೆ 10.30

ಮಕ್ಕಳ ಅಣಕು ನ್ಯಾಯಾಲಯ: ಕಟಕಟೆಯಲ್ಲಿ–ಕವಿ ಬಿ.ಆರ್. ಲಕ್ಷ್ಮಣರಾವ್, ಉದ್ಘಾಟನೆ–ವಿ.ಕೃಷ್ಣಮೂರ್ತಿ, ಅತಿಥಿಗಳು–ಕೆ.ಎಚ್.ಕುಮಾರ್, ಹೊನ್ನು ಸಿದ್ದಾರ್ಥ, ಕೆ.ಕೆ.ಪೂರ್ಣ, ಸಿ.ಎಚ್.ನಾಯಕ್, ಆಯೋಜನೆ–ರಂಗೋತ್ರಿ, ಸ್ಥಳ–ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್, ಮಾಗಡಿ ರಸ್ತೆ, ಬೆಳಿಗ್ಗೆ 11

ಬಿ.ಆರ್. ಲಕ್ಷ್ಮಣರಾವ್

ಮಕ್ಕಳ ರಂಗ ಶಿಬಿರ: ಮಕ್ಕಳಿಂದ ಸಂತೆ ಮತ್ತು ರಥಯಾತ್ರೆ, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗ, ಸ್ಥಳ–ಕಲಾಭವನ, ಪ್ರದರ್ಶನ ಕಲಾ ವಿಭಾಗದ ಮುಂಭಾಗ, ವಿ.ವಿ.ಆವರಣ, ಜ್ಞಾನಭಾರತಿ, ಮಧ್ಯಾಹ್ನ 2.30

ಸದಸ್ಯರ ದಿನ: ಅತಿಥಿಗಳು–ಸಚಿವ ಬಿ.ಸಿ. ಪಾಟೀಲ, ಸಂಸದ ತೇಜಸ್ವಿ ಸೂರ್ಯ, ಆಯೋಜನೆ ಮತ್ತು ಸ್ಥಳ–ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಸಂಜೆ 4.30

ಕೃಷ್ಣಯಜುರ್ವೇದ ಕನ್ನಡ ಪ್ರಕಾಶನ 13ನೇ ಸಂಪುಟದ ಬಿಡುಗಡೆ: ವಿಧುಶೇಖರಭಾರತೀ ಸನ್ನಿಧಾನಂಗಳ, ಅತಿಥಿಗಳು–ವಿ.ಆರ್.ಗೌರಿಶಂಕರ್, ಅಶೋಕ್ ಹಾರನಹಳ್ಳಿ, ಸೋ.ತಿ. ನಾಗರಾಜ, ಆಯೋಜನೆ–ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ–ಶೃಂಗೇರಿ ಶಂಕರ ಮಠದ ಆವರಣ, ಬಸವನಗುಡಿ, ಸಂಜೆ 5

ಇ-ಕನ್ನಡ ಯೋಜನೆ ಲೋಕಾರ್ಪಣೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಟಿ.ಎಸ್.ನಾಗಾಭರಣ, ಬೇಳೂರು ಸುದರ್ಶನ, ಪೊನ್ನುರಾಜ್, ಸ್ಥಳ–ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾ, ಸಂಜೆ 5

ದಿವಾಕರ ಹೆಗಡೆ ಅವರಿಂದ ಏಕವ್ಯಕ್ತಿ ತಾಳಮದ್ದಳೆ ಕಾರ್ಯಕ್ರಮ: ಪ್ರಸಂಗ–ಕೌಶಿಕ ಸಾತ್ತ್ವಿಕ, ಆಯೋಜನೆ ಮತ್ತು ಸ್ಥಳ–ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಎನ್.ಆರ್.ಕಾಲೊನಿ, ಸಂಜೆ 6

ನಿಧನ ವಾರ್ತೆ

ಸಾಂಬಮೂರ್ತಿ

ಬೆಂಗಳೂರು: ನಗರದ ಖ್ಯಾತ ಆಯುರ್ವೇದ ವೈದ್ಯ ಡಾ. ಜಿ. ಜಿ. ಸಾಂಬಮೂರ್ತಿ (57) ಸೋಮವಾರ ಸಂಜೆ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿಯವರಾದ ಅವರು ಸಮೀಕ್ಷಾ ಆಯುರ್ವೇದಾಲಯದ ಮೂಲಕ ಆರೋಗ್ಯ ಸೇವೆಯಲ್ಲಿ ತೊಡಗಿಕೊಂಡಿದ್ದರು. ಆಯುರ್ವೇದ ಅಕಾಡೆಮಿ ಮೂಲಕ ಬಡವರಿಗೆ ಉಚಿತ ಚಿಕಿತ್ಸೆಯನ್ನೂ ನೀಡುತ್ತಿದ್ದರು.

ಉತ್ತರಹಳ್ಳಿಯ (ಜಯನಗರ ಹೌಸಿಂಗ್ ಸೊಸೈಟಿ) ಅವರ ಮನೆಯಲ್ಲಿ ಮಂಗಳವಾರ ಬೆಳಿಗ್ಗೆ 9ರವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಚಾಮರಾಜಪೇಟೆಯ ಚಿತಾಗಾರದಲ್ಲಿ ಅಂತ್ಯ ಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಚಂದ್ರಶೇಖರ ಉಪಾಧ್ಯ

ಬೆಂಗಳೂರು: ಪತ್ರಕರ್ತ ಪಾರಂಪಳ್ಳಿ ಚಂದ್ರಶೇಖರ ಉಪಾಧ್ಯ (92) ಸೋಮವಾರ ಹೃದಯಾಘಾತದಿಂದ ನಿಧನರಾದರು.



ಕನ್ನಡ ಮತ್ತು ಹಿಂದಿ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದ ಅವರು ಮುಂಬೈನಲ್ಲಿ ಹಿಂದಿ ಭಾಷೆಯ 'ನವಭಾರತ್ ಟೈಮ್ಸ್', 'ಧೀರ್', 'ವೃಷಭ್ ವೀರ್', 'ಸಮಾಚಾರ್ ಭಾರತಿ', 'ರಾಜಸ್ಥಾನ್ ಪತ್ರಿಕಾ'ದಲ್ಲಿ ವರದಿಗಾರರಾಗಿದ್ದರು. ಕನ್ನಡದಲ್ಲಿ 'ವಾರಪತ್ರಿಕೆ'ಯಲ್ಲೂ ಕಾರ್ಯನಿರ್ವಹಿಸಿದ್ದರು. 'ಗೋವಾ ವಿಮೋಚನೆ' ಮತ್ತು 'ಮೈಸೂರು ಚಲೋ' ಆಂದೋಲನಗಳಲ್ಲಿ ಪಾಲ್ಗೊಂಡಿದ್ದರು.

ಹಿಂದಿ ಸಾಹಿತ್ಯ ಮತ್ತು ಪತ್ರಿಕೋದ್ಯಮಕ್ಕಾಗಿ ಸಲ್ಲಿಸಿದ ಕೊಡುಗೆಯನ್ನು ಪರಿಗಣಿಸಿ 2001 ರಲ್ಲಿ ಅಂದಿನ ರಾಷ್ಟ್ರಪತಿ ಕೆ.ಆರ್.ನಾರಾಯಣ ಅವರು 'ಗಣೇಶ ಶಂಕರ್ ವಿದ್ಯಾರ್ಥಿ ಪುರಸ್ಕಾರ್' ಪ್ರಶಸ್ತಿಯನ್ನು ಪ್ರದಾನ ಮಾಡಿದ್ದರು. ಕರ್ನಾಟಕ ಮಾಧ್ಯಮ ಅಕಾಡೆಮಿಯ ಪ್ರಶಸ್ತಿಗೂ ಪಾತ್ರರಾಗಿದ್ದರು. ಮೃತರ ಅಂತ್ಯಕ್ರಿಯೆ ನಗರದಲ್ಲಿ ಸೋಮವಾರ ನಡೆಯಿತು.

ಮಹಿಳೆಯರ ಆರೈಕೆಯಲ್ಲಿ 'ಲವಣ ತೈಲಂ'
ಕಠಿಣ ವ್ಯಾಯಾಮಗಳಿಲ್ಲದೆ ಮತ್ತು ಪಥ್ಯದ ಆಹಾರಕ್ರಮವಿಲ್ಲದೆ
ಆಯುರ್ವೇದೀಯ ಪರಿಹಾರ
ಆಯು:ಕೇರ್
ಲವಣ ತೈಲಂ
ಆಯುರ್ವೇದಿಕ್ ಫಿಗರ್ ಕೇರ್
AYU CARE Ayurvedic Tummy Fit Massage Oil Lavana Tailam
1999ರಿಂದಲೂ ಕೇರಳಾದ್ಯಂತ ಆಯುರ್‌ಕೇರ್ ಕೇಂದ್ರಗಳ ಮೂಲಕ ಬಹಳಷ್ಟು ಜನರಲ್ಲಿ ಇದು ಪರಿಣಾಮಕಾರಿ ಎಂದು ಸಾಬೀತಾಗಿದೆ.
ಲವಣ ತೈಲಂನಲ್ಲಿರುವ ಪ್ರಮುಖ ಪದಾರ್ಥವಾದ ಕಲ್ಲುಪ್ಪು, ಹೆಚ್ಚುವರಿ ಹೊರಾಂಗಣ ಜಲಾಂಶವನ್ನು ಹೀರಿ ಸ್ನಾಯುಗಳನ್ನು ಬಲಪಡಿಸುತ್ತದೆ. ಚರ್ಮದ ಕೆಳಗಿರುವ ಕೊಬ್ಬಿನ ಪದರವನ್ನು ತೆಳ್ಳಗಾಗಿಸಿ ಕಳೆದುಹೋದ ಆಕಾರವನ್ನು ಮರುಪಡೆಯಲು ಸಹಾಯ ಮಾಡುತ್ತದೆ. ಇದನ್ನು ನಿಯಮಿತವಾಗಿ ಬಳಸುವುದರಿಂದ ಅಧಿಕ ಮೈಭಾರವನ್ನು ಇಳಿಸಿಕೊಳ್ಳಬಹುದು.
ಅತಿಯಾದ ಹೊಟ್ಟೆಯ ಆಕಾರ ಮತ್ತು ಸೌಂದರ್ಯ ಕಾಪಾಡಿಕೊಳ್ಳಲು ದಿನಾಲೂ ಲವಣ ತೈಲದಿಂದ ಮಸಾಜ್ ಮಾಡಿ. ಹೆರಿಗೆಯ ನಂತರ ಹೊಟ್ಟೆಯನ್ನು ತಗ್ಗಿಸಲು ಇದು ಉತ್ತಮವಾಗಿದೆ.
ಉಪಯೋಗಿಸುವ ಕ್ರಮ : ತೈಲವನ್ನು ಕೈಗೆ ಸುರಿದುಕೊಂಡು ಹೊಟ್ಟೆಯ ಮೇಲೆ ಕೋಮಲವಾಗಿ ತೀಡಿ. ಕನಿಷ್ಠ 15 ನಿಮಿಷಗಳ ಬಳಿಕ ಬೆಚ್ಚಗಿನ ನೀರಿನ ಶಾಖ ಅಥವಾ ಬೆಚ್ಚಗಿನ ನೀರಿನಿಂದ ತೊಳೆಯಿರಿ. ಇದನ್ನು ಪುರುಷರು ಸಹ ಬಳಸಬಹುದು.
ಎಲ್ಲಾ ಆಲೋಪಥಿಕ್–ಆಯುರ್ವೇದಿಕ್ ಮೆಡಿಕಲ್ ಸ್ಟೋರ್, ಸೂಪರ್ ಮಾರ್ಕೆಟ್ ಹಾಗೂ ಲೇಡೀಸ್ ಸ್ಟೋರ್ಸ್‌ನಲ್ಲಿ ಲಭ್ಯವಿದೆ.
ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ
A & J Health Care, Bangalore
For a Healthy Society
Ph: 8762226000, 9243112373.

IMTEX 1946-2021
Make it possible
Block Your Dates
IMTEX FORMING 2022
International Forming Technology Exhibition
Concurrent shows
Tooltech 2022 International Exhibition of Dies & Moulds, Forming Tools, Machine Accessories, Metrology and CAD / CAM
DIGITAL MANUFACTURING International Exhibition on Industry 4.0 & Additive Manufacturing
16 - 21 June 2022, Bengaluru
▶ 33,000 Sq.mts of exhibition space
▶ Over 16 Country Participation
▶ Witness live technologies
▶ 3 Exhibition halls
▶ 350+ Exhibitors
▶ Academia Pavilion
Entry for only Fully Vaccinated (2 Doses)
REGISTER TODAY
Wearing Mask Mandatory | Sanitize Hands Regularly | Maintain Social Distance
Organiser: Indian Machine Tool Manufacturers' Association
Venue: BIEC Bangalore International Exhibition Centre
ufi Approved International Event
Exhibition Timings: 10:00 hrs to 18:00 hrs | Visitors below 18 years of age are not allowed
www.imtex.in
Follow us on

ಆತ್ಮಹತ್ಯೆ ಪ್ರಕರಣಕ್ಕೆ ತಿರುವು: ದೂರು ಕೊಟ್ಟ ಪತ್ನಿ

ಹನಿಟ್ರ್ಯಾಪ್ ಜಾಲಕ್ಕೆ ಬಿಜೆಪಿ ಮುಖಂಡ

ಪ್ರಜಾವಾಣಿ ವಾರ್ತೆ

ಬಿ.ಪಿ. ಅನಂತರಾಜು

ಬೆಂಗಳೂರು: ಹೆರೋಹಳ್ಳಿ ವಾರ್ಡ್‌ನ ಬಿಜೆಪಿ ಮುಖಂಡ ಬಿ.ಪಿ. ಅನಂತರಾಜು (46) ಆತ್ಮಹತ್ಯೆ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದ್ದು, 'ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿ ಪತಿ ಅನಂತರಾಜು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿ ಪತ್ನಿ ಪೊಲೀಸರಿಗೆ ದೂರು ನೀಡಿದ್ದಾರೆ.

'ಉದ್ಯಮಿಯೂ ಆಗಿದ್ದ ಅನಂತರಾಜು, ಮೇ 12ರಂದು ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಕಳೆದ ಬಾರಿ ಬಿಬಿಎಂಪಿ ಚುನಾವಣೆಗೂ ಸ್ಪರ್ಧಿಸಿ ಪರಾಭವಗೊಂಡಿದ್ದರು. ಈ ಬಾರಿ ಪುನಃ ಸ್ಪರ್ಧಿಸಲು ತಯಾರಿ ನಡೆಸುತ್ತಿದ್ದರು. ಅವರ ಆತ್ಮಹತ್ಯೆಗೆ ನಿಖರ ಕಾರಣವೇನು ಎಂಬುದು ಗೊತ್ತಾಗಿರಲಿಲ್ಲ' ಎಂದು ಬ್ಯಾಡರಹಳ್ಳಿ ಪೊಲೀಸ್ ಠಾಣೆ ಮೂಲಗಳು ತಿಳಿಸಿವೆ.

'ಅನಂತರಾಜು ಮನೆಯಲ್ಲಿ ಮರಣ ಪತ್ರ ಸಿಕ್ಕಿದ್ದು, ಅದನ್ನು ಆಧರಿಸಿ ಪತ್ನಿ ದೂರು ನೀಡಿದ್ದಾರೆ. ಕೆ.ಆರ್. ಪುರದ ಇಬ್ಬರು ಯುವತಿಯರು ಸೇರಿ ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಮೂಲಗಳು ಹೇಳಿವೆ.

ಫೇಸ್‌ಬುಕ್ ಮೂಲಕ ಪರಿಚಯ: 'ಕೆ.ಆರ್.ಪುರ ನಿವಾಸಿಯಾದ ಯುವತಿ, ಫೇಸ್‌ಬುಕ್ ಮೂಲಕ ಪತಿ ಅನಂತರಾಜು ಅವರನ್ನು ಪರಿಚಯ ಮಾಡಿಕೊಂಡಿದ್ದರು. ಸಲುಗೆ ಸಹ ಬೆಳೆಸಿಕೊಂಡಿದ್ದಳು. ನಂತರ, ತನ್ನ ಪತಿ ಹಾಗೂ ಸ್ನೇಹಿತೆ ಜೊತೆ ಸೇರಿ ಹನಿಟ್ರ್ಯಾಪ್ ಸಂಚು ರೂಪಿಸಿದ್ದಳು' ಎಂದು ಪತ್ನಿ ದೂರಿನಲ್ಲಿ ತಿಳಿಸಿದ್ದಾರೆ.

'ಪತಿ ಜೊತೆಗೆ ಖಾಸಗಿ ಕ್ಷಣಗಳನ್ನು ಕಳೆದಿದ್ದ ಯುವತಿ, ಅದರ ವಿಡಿಯೊ ಹಾಗೂ ಫೋಟೊ ತೆಗೆದಿಟ್ಟುಕೊಂಡಿದ್ದಳು. ಅವುಗಳನ್ನೇ ಪತಿಗೆ ಕಳುಹಿಸಿ ಹಣಕ್ಕಾಗಿ ಪೀಡಿಸುತ್ತಿದ್ದಳು. ಹಣ ನೀಡದಿದ್ದರೆ ವಿಡಿಯೊ, ಫೋಟೊಗಳನ್ನು ಮಾಧ್ಯಮಗಳು ಹಾಗೂ ರಾಜಕೀಯ ಮುಖಂಡರಿಗೆ ಕಳುಹಿಸುವುದಾಗಿ ಬೆದರಿಸುತ್ತಿದ್ದಳು.'

'ಮರ್ಯಾದೆಗೆ ಅಂಜಿದ್ದ ಪತಿ, ಯುವತಿ ಹಾಗೂ ಇತರೆ ಆರೋಪಿಗಳಿಗೆ ಹಣ ನೀಡಿದ್ದರು. ಅಷ್ಟಾದರೂ ಆರೋಪಿಗಳು, ಪದೇ ಪದೇ ಹಣಕ್ಕೆ ಪೀಡಿಸುತ್ತಿದ್ದರು. ಇದರಿಂದ ಬೇಸತ್ತ ಪತಿ, ಮರಣ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಕೆ.ಆರ್.ಪುರ ಯುವತಿ ಮೋಸದ ಜಾಲಕ್ಕೆ ಸಿಲುಕಿ ಹಣ ಕಳೆದುಕೊಂಡೆ. ಮಾನಸಿಕ ಹಿಂಸೆ ಅನುಭವಿಸಿದೆ' ಎಂದೂ ಮರಣಪತ್ರದಲ್ಲಿ ಬರೆದಿದ್ದಾರೆ' ಎಂದೂ ಪತ್ನಿ ತಿಳಿಸಿದ್ದಾರೆ.

ಬೈಕ್ ಚಾಲನೆ ಕಲಿಯಲು ಹೋಗಿ ವಿದ್ಯಾರ್ಥಿ ಸಾವು

ಬೆಂಗಳೂರು: ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಉರುಳಿ ಬಿದ್ದು, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಸಂತೋಷ್‌ಕುಮಾರ್ (15) ಮೃತಪಟ್ಟಿದ್ದಾನೆ.

'ವಿದ್ಯಾರಣ್ಯಪುರದ ಸಂತೋಷ್ ಕುಮಾರ್, ಬೈಕ್ ಚಾಲನೆ ಕಲಿಯಲೆಂದು ರಸ್ತೆಗೆ ಬಂದಿದ್ದಾಗ ಈ ಅವಘಡ ಸಂಭವಿಸಿದೆ. ಅತಿ ವೇಗ ಹಾಗೂ ಅಜಾಗರೂಕತೆ ಚಾಲನೆ ಮಾಡಿದ್ದಕ್ಕಾಗಿ ಆತನ ವಿರುದ್ಧವೇ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಯಲಹಂಕ ಸಂಚಾರ ಪೊಲೀಸರು ಹೇಳಿದರು.

ಗೊರುಚ ದತ್ತಿ ನಿಧಿ ಪ್ರಶಸ್ತಿ ಪ್ರದಾನ ನಾಳೆ

ಪ್ರಜಾವಾಣಿ ವಾರ್ತೆ

ವಿಜಯಾ ದೇವಿ

ಜಿ.ಎ. ಶಿವಲಿಂಗಯ್ಯ

ಎನ್.ಎನ್. ಚಿಕ್ಕಮಾದು

ಜೀನಹಳ್ಳಿ ಸಿದ್ಧಲಿಂಗಪ್ಪ

ಬೆಂಗಳೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ವತಿಯಿಂದ 'ಗೊರುಚ ದತ್ತಿ ನಿಧಿ ಪ್ರಶಸ್ತಿ'ಗಳ ಪ್ರದಾನ ಕಾರ್ಯಕ್ರಮವನ್ನು ಮೇ 18ರಂದು ಬೆಳಿಗ್ಗೆ 11 ಗಂಟೆಗೆ ಚಿತ್ರದುರ್ಗದ ಮದಕರಿ ನಾಯಕ ವೃತ್ತದಲ್ಲಿರುವ ತ.ರಾ.ಸು. ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಪರಿಷತ್ತಿನ ಪ್ರದಾನ ಕಾರ್ಯದರ್ಶಿ ಎಸ್.ಬಿ. ಅಂಗಡಿ,'2021ನೇ ಸಾಲಿನ ಪ್ರಶಸ್ತಿಗಳಿಗೆ ನಿವೃತ್ತ ಅಧ್ಯಾಪಕ ಜಿ.ಎ.ಶಿವಲಿಂಗಯ್ಯ (ಗೊರುಚ ಶರಣ ಪ್ರಶಸ್ತಿ), ಪತ್ರಾಂಕಿತ ನಿವೃತ್ತ ವ್ಯವಸ್ಥಾಪಕ ಜೀನಹಳ್ಳಿ ಸಿದ್ಧಲಿಂಗಪ್ಪ (ಗೊರುಚ ಜಾನಪದ ಪ್ರಶಸ್ತಿ), ನಿವೃತ್ತ ಅಧ್ಯಾಪಕಿ ವಿಜಯಾದೇವಿ (ಗೊರುಚ ಶರಣ ಸಾಹಿತ್ಯ ಗ್ರಂಥ ಪ್ರಶಸ್ತಿ) ಹಾಗೂ ಉಪನ್ಯಾಸಕ ಎನ್.ಎನ್.ಚಿಕ್ಕಮಾದು (ಜನಪದ ಸಾಹಿತ್ಯ ಗ್ರಂಥ ಪ್ರಶಸ್ತಿ) ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ಅವರು ತಿಳಿಸಿದರು.

'ಶರಣ ಮತ್ತು ಜಾನಪದ ಪ್ರಶಸ್ತಿಗಳು ತಲಾ ₹25 ಸಾವಿರ ನಗದು ಹಾಗೂ ಗ್ರಂಥ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿವೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ಅತಿ ಹೆಚ್ಚು ಅಂಕ ಪಡೆದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಯೊಬ್ಬರಿಗೆ ₹5 ಸಾವಿರ ನಗದು ಬಹುಮಾನ ನೀಡಲಾಗುವುದು' ಎಂದು ಅವರು ಹೇಳಿದರು.

ಸಿಸಿಬಿ ಹೆಸರಿನಲ್ಲಿ ಹಣ ವಸೂಲಿ ಆರೋಪ

'ಬಿಟ್ ಕಾಯಿನ್' ದೂರು ಕೊಟ್ಟಿದ್ದ ಅಡಿಗ ಬಂಧನ

ಪ್ರಜಾವಾಣಿ ವಾರ್ತೆ

ಅಶೋಕ್ ಕುಮಾರ್ ಅಡಿಗ

ಬೆಂಗಳೂರು: 'ಅಂತರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಮೂಲಕ ನಡೆದಿದೆ' ಎನ್ನಲಾದ ಬಿಟ್ ಕಾಯಿನ್ ಹಗರಣದ ಬಗ್ಗೆ ದೂರು ನೀಡಿದ್ದ ಆರ್‌ಟಿಐ ಕಾರ್ಯಕರ್ತ ಎ.ಆರ್. ಅಶೋಕ್ ಕುಮಾರ್ ಅಡಿಗ ಅವರನ್ನು, ಸಿಸಿಬಿ ಹೆಸರಿನಲ್ಲಿ ಹಣ ವಸೂಲಿ ಮಾಡಿದ್ದ ಆರೋಪದಡಿ ಸೋಮವಾರ ಬಂಧಿಸಲಾಗಿದೆ.

'ಬಸವೇಶ್ವರನಗರ ನಿವಾಸಿ ಅಶೋಕ್ ಕುಮಾರ್ ಅಡಿಗ, ಕ್ಲಬ್‌ಗಳಲ್ಲಿ ಜೂಜಾಟವಾಡಲು ನೆರವು ನೀಡುವ ಆಮಿಷವೊಡ್ಡಿ ಸಿಸಿಬಿ ಹೆಸರಿನಲ್ಲಿ ಹಣ ಪಡೆದಿದ್ದ. ಕ್ಲಬ್ ಮಾಲೀಕರು ನೀಡಿದ್ದ ದೂರಿನನ್ವಯ ದಾಖಲಾಗಿದ್ದ ಪ್ರಕರಣದಲ್ಲಿ ಅಶೋಕ್‌ಕುಮಾರ್‌ನನ್ನು ಬಂಧಿಸಲಾಗಿದ್ದು, 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ನಿಯಮ ಉಲ್ಲಂಘಿಸಿದ್ದ ಕೆಲ ಕ್ಲಬ್‌ಗಳನ್ನು ಬಂದ್ ಮಾಡಿಸಲಾಗಿದೆ. ಕೆಲ ಕ್ಲಬ್ ಮಾಲೀಕರ ಸಂಪರ್ಕಿಸಿದ್ದ ಅಶೋಕ್‌ಕುಮಾರ್, ಮಾಗಡಿ ರಸ್ತೆಯಲ್ಲಿರುವ ಕ್ಲಬ್‌ವೊಂದರಲ್ಲಿ ಸಭೆ ಮಾಡಿದ್ದ. 'ಸಿಸಿಬಿ ಅಧಿಕಾರಿಗಳು ನನಗೆ ಪರಿಚಯ. ಪ್ರತಿ ಕ್ಲಬ್‌ನಿಂದ ತಿಂಗಳಿಗೆ ₹ 50 ಸಾವಿರ ನೀಡಿದರೆ, ದಾಳಿ ಆಗದಂತೆ ನೋಡಿಕೊಳ್ಳುತ್ತೇನೆ' ಎಂದಿದ್ದ. ಹಣ ನೀಡದಿದ್ದರೆ ದಾಳಿ ಮಾಡಿಸುವ ಬೆದರಿಕೆ ಸಹ ಹಾಕಿದ್ದ. ಹೆದರಿದ್ದ ಮಾಲೀಕ ಶ್ರೀನಿವಾಸ್, ₹50 ಸಾವಿರ ಕೊಟ್ಟಿದ್ದರು.'

'ಆರೋಪಿ ಪುನಃ ಹಣ ಕೇಳಿದ್ದರಿಂದ ಬೇಸತ್ತ ಶ್ರೀನಿವಾಸ್ ಹಾಗೂ ರಮೇಶ್, ಮಾಗಡಿ ರಸ್ತೆ ಠಾಣೆಗೆ ದೂರು ನೀಡಿದ್ದರು. ಆಡಿಯೊ ಸಂಭಾಷಣೆಯನ್ನೂ ಪುರಾವೆಯಾಗಿ ನೀಡಿದ್ದರು' ಎಂದೂ ಹೇಳಿವೆ.

12,900 ಬಿಟ್ ಕಾಯಿನ್ ಹಗರಣ: 'ಶ್ರೀಕೃಷ್ಣ ಹ್ಯಾಕ್ ಮಾಡಿದ್ದ 12,900 ಬಿಟ್ ಕಾಯಿನ್‌ಗಳನ್ನು (ಮೇ 5ರ ಮಾರುಕಟ್ಟೆ ಮೌಲ್ಯ ₹ 2971.33 ಕೋಟಿ) ಪೊಲೀಸ್ ಅಧಿಕಾರಿಗಳು ಹಾಗೂ ರಾಜಕೀಯ ಪ್ರಭಾವಿಗಳು ತಮ್ಮದಾಗಿಸಿಕೊಂಡಿದ್ದಾರೆ. ಇದೊಂದು ದೊಡ್ಡ ಹಗರಣ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಅಶೋಕ್ ಕುಮಾರ್ ಅಡಿಗ 2021ರ ಏಪ್ರಿಲ್ 26ರಂದು ಕಮಿಷನರ್ ಕಮಲ್ ಪಂತ್ ಹಾಗೂ ಇತರರಿಗೆ ದೂರು ನೀಡಿದ್ದರು. . ಇದೀಗ ಅಶೋಕ್‌ಕುಮಾರ್ ಅವರನ್ನೇ ವಂಚನೆ ಪ್ರಕರಣದಲ್ಲಿ ಸಿಸಿಬಿ ಪೊಲೀಸರು ಬಂಧಿಸಿದ್ದು, ಹಲವು ಅನುಮಾನಕ್ಕೆ ಕಾರಣವಾಗಿದೆ. ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಪಟ್ಟಂತೆ ಅಶೋಕ್‌ಕುಮಾರ್ ಬಳಿ ಇರುವ ದಾಖಲೆಗಳನ್ನು ನಾಶಪಡಿಸಲು ಯತ್ನ ನಡೆಯುತ್ತಿರುವ ಸಂಶಯವೂ ಇದೆ ಎಂದೂ ಹೇಳಲಾಗಿದೆ.

ವಜ್ರ ಪರೀಕ್ಷೆ ನಕಲಿ ಪ್ರಮಾಣ ಪತ್ರ: ಜಾಮೀನು

ಬೆಂಗಳೂರು: ವಜ್ರದ ಆಭರಣಗಳ ಶುದ್ಧತೆಯ ಪರೀಕ್ಷಾ ಪ್ರಮಾಣಪತ್ರ ನೀಡುವ ಖಾಸಗಿ ಸಂಸ್ಥೆಯೊಂದರ ಹೆಸರಿನಲ್ಲಿ ನಕಲಿ ಪ್ರಮಾಣ ಪತ್ರ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನದ ಭೀತಿ ಎದುರಿಸುತ್ತಿದ್ದ ಇಬ್ಬರು ಮಹಿಳೆಯರಿಗೆ ಹೈಕೋರ್ಟ್ ಷರತ್ತುಬದ್ಧ ನಿರೀಕ್ಷಣಾ ಜಾಮೀನು ನೀಡಿದೆ. ನಿರೀಕ್ಷಣಾ ಜಾಮೀನು ಕೋರಿ ಆರೋಪಿಗಳಾದ ಪ್ರತಿಕಾ ರೈ ಬೆಳ್ಯಾ ಮತ್ತು ಹರಿಣಿ ಶೆಟ್ಟಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಜೈಲಿನ ಶೌಚಾಲಯದಲ್ಲಿ ಆತ್ಮಹತ್ಯೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿ ಮನೋಜ್ ಅಲಿಯಾಸ್ ಹೂವು (23) ಎಂಬಾತ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಪ್ರಕರಣ ದಾಖಲಾಗಿದೆ.

'ಅಪರಾಧ ಹಿನ್ನೆಲೆಯುಳ್ಳ ಮನೋಜ್‌ನನ್ನು ಇತ್ತೀಚೆಗಷ್ಟೇ ಬಂಧಿಸಿದ್ದ ಚಾಮರಾಜಪೇಟೆ ಪೊಲೀಸರು, ಮೇ 1ರಂದು ಕಾರಾಗೃಹಕ್ಕೆ ಬಿಟ್ಟಿದ್ದರು. ಜೈಲಿನ ಬ್ಯಾರಕ್‌ನಲ್ಲಿರುವ ಶೌಚಾಲಯದಲ್ಲಿ ಶನಿವಾರ ಮನೋಜ್ ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಕಾರಾಗೃಹ ಮೂಲಗಳು ಹೇಳಿವೆ.

'ರಾತ್ರಿ ಸಮಯದಲ್ಲಿ ಧರಿಸಲೆಂದು ಮನೋಜ್‌ಗೆ ಪ್ಯಾಂಟ್ ನೀಡಲಾಗಿತ್ತು ಅದರ ದಾರದಿಂದಲೇ ಆತ, ಶೌಚಾಲಯದಲ್ಲಿರುವ ಹುಕ್‌ಗೆ ನೇಣು ಹಾಕಿಕೊಂಡಿದ್ದ. ಶೌಚಾಲಯಕ್ಕೆ ಹೋಗಿದ್ದ ಸಹ ಕೈದಿಗಳು, ಮನೋಜ್‌ನನ್ನು ನೋಡಿ ಸಿಬ್ಬಂದಿ ಮಾಹಿತಿ ನೀಡಿದ್ದರು' ಎಂದೂ ತಿಳಿಸಿವೆ.

ಐದನೇ ಬಾರಿ ಜೈಲಿಗೆ: 'ಸುಲಿಗೆ ಹಾಗೂ ಇತರೆ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮನೋಜ್, ಮೇ 1ರಂದು ಐದನೇ ಬಾರಿ ಜೈಲಿಗೆ ಬಂದಿದ್ದ. ನಾಲ್ಕು ಬಾರಿ ಜಾಮೀನು ಕೊಡಿಸಿದ್ದ ಸಂಬಂಧಿಕರು, ಪುನಃ ಜಾಮೀನು ಕೊಡಿಸಲು ಸಹಾಯ ಮಾಡಿರಲಿಲ್ಲ. ಇದರಿಂದ ಮನೋಜ್ ನೊಂದಿದ್ದನೆಂದು ಗೊತ್ತಾಗಿದೆ' ಎಂದು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ ಮೂಲಗಳು ಹೇಳಿವೆ.

'ಪ್ರಕರಣದ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಮನೋಜ್‌ನ ತಾಯಿ, ಪೊಲೀಸರು ತಮಗೆ ನಿರಂತರವಾಗಿ ಕಿರುಕುಳ ನೀಡುತ್ತಿರುವುದಾಗಿ ಆರೋಪಿಸಿದ್ದರು. ತಾಯಿ, ಪೊಲೀಸ್ ಠಾಣೆ ಹಾಗೂ ನ್ಯಾಯಾಲಯಕ್ಕೆ ಪದೇ ಪದೇ ಅಲೆದಾಡುತ್ತಿದ್ದುದ್ದು ಮನೋಜ್‌ಗೆ ನೋವನ್ನುಂಟು ಮಾಡಿತ್ತು' ಎಂದೂ ತಿಳಿಸಿವೆ.

ಮಿದುಳು ನಿಷ್ಕ್ರಿಯ: ಐವರಿಗೆ ನೆರವಾದ ಯುವಕ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡಿದ್ದ 32 ವರ್ಷದ ವ್ಯಕ್ತಿಯೊಬ್ಬರು ಅಂಗಾಂಗಗಳ ದಾನದ ಮೂಲಕ ಐವರಿಗೆ ನೆರವಾಗಿದ್ದಾರೆ.

ಬಿಡದಿಯ ಚಂದ್ರಶೇಖರ್ ಎನ್ನುವವರು ಹೃದಯ, ಯಕೃತ್ತು, ಮೂತ್ರಪಿಂಡಗಳು ಮತ್ತು ಕಣ್ಣುಗಳನ್ನು ದಾನ ಮಾಡಿದ್ದಾರೆ. ಮೇ 8 ರಂದು ರಸ್ತೆ ಅಪಘಾತಕ್ಕೆ ಒಳಗಾದ ಅವರು, ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಆರ್.ಆರ್. ನಗರದಲ್ಲಿರುವ ಎಸ್‌ಎಸ್ ಸ್ಪರ್ಶ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮಿದುಳು ನಿಷ್ಕ್ರಿಯಗೊಂಡಿದ್ದರಿಂದ ಕುಟುಂಬದವರು ಅಂಗಾಂಗ ದಾನಕ್ಕೆ ಸಮ್ಮತಿಸಿದರು.

ಚಂದ್ರಶೇಖರ್ ಅವರ ಯಕೃತ್ತು ಮತ್ತು ಒಂದು ಮೂತ್ರಪಿಂಡವನ್ನು ಎಸ್‌ಎಸ್ ಸ್ಪರ್ಶ್ ಆಸ್ಪತ್ರೆಯ ರೋಗಿಗಳಿಗೆ ಕಸಿ ಮಾಡಲಾಗಿದೆ. ಮತ್ತೊಂದು ಮೂತ್ರಕೋಶವನ್ನು ವೈಟ್‌ಫೀಲ್ಡ್‌ನಲ್ಲಿರುವ ಮಣಿಪಾಲ ಆಸ್ಪತ್ರೆಗೆ ಕಳುಹಿಸಲಾಗಿದೆ. ನಾರಾಯಣ ಹೃದಯಾಲಯಕ್ಕೆ ಹೃದಯ ಮತ್ತು ನಾರಾಯಣ ನೇತ್ರಾಲಯಕ್ಕೆ ಕಣ್ಣುಗಳನ್ನು ಹಸಿರು ಕಾರಿಡಾರ್ ಮೂಲಕ ರವಾನಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ರಾಮನಗರ ವಿಭಾಗ, ಸಂಚಾರ ಶಾಖೆ,
ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159.

ಸಂಖ್ಯೆ: ಕರಾಸಾ/ರಾನವಿ/ಸಂ/ವಾ/405/2022–23 ದಿನಾಂಕ: 13–05–2022

ಇ–ಟೆಂಡರ್ ಪ್ರಕಟಣೆ ಸಂಖ್ಯೆ. 03/2022–23

ಕ.ರಾ.ರ.ಸಾ. ನಿಗಮದ ವ್ಯಾಪ್ತಿಯಲ್ಲಿರುವ ರಾಮನಗರ ವಿಭಾಗದ, ವ್ಯಾಪ್ತಿಗೆ ಒಳಪಡುವ 10 (**ಆನೇಕಲ್, ದೊಡ್ಡಮರಳವಾಡಿ, ಹಾರೋಹಳ್ಳಿ, ಕನಕಪುರ, ಸಾತನೂರು, ಕೋಡಿಹಳ್ಳಿ, ಚನ್ನಪಟ್ಟಣ, ಕೊಡಂಬಹಳ್ಳಿ, ಮಾಗಡಿ ಹಾಗೂ ಸೋಲೂರು ಬಸ್ ನಿಲ್ದಾಣಗಳು) ಬಸ್ ನಿಲ್ದಾಣಗಳ ಆವರಣ ಮತ್ತು ಶೌಚಾಲಯಗಳ ಹಾಗೂ ಘಟಕ/ ಕಾರ್ಯಾಗಾರ / ವಿಭಾಗೀಯ ಕಛೇರಿಯ ಶೌಚಾಲಯಗಳ ಸ್ವಚ್ಛತಾ ನಿರ್ವಹಣೆ** ಕಾರ್ಯದ ಗುತ್ತಿಗೆಯನ್ನು ಯಾಂತ್ರೀಕೃತ / ಯಾಂತ್ರೀಕೃತರಹಿತ ಹೌಸ್‌ಕೀಪಿಂಗ್ ಪದ್ಧತಿಗನುಗುಣವಾಗಿ ನಿರ್ವಹಿಸಲು ಅರ್ಹ ಸ್ವಚ್ಛತಾ ಗುತ್ತಿಗೆದಾರರಿಂದ ಅರ್ಜಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ.

1) ಬಿಡ್ ಪೂರ್ವ ಸಭೆ (ಪ್ರೀ–ಬಿಡ್ ಮೀಟಿಂಗ್) ದಿನಾಂಕ: **31–05–2022 ಸಮಯ: 12.00.** 2) ಅರ್ಜಿ / ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **09–06–2022 ಸಮಯ: 12.00 ಗಂಟೆಯವರೆಗೆ.** 3) ಇ–ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು / ಅರ್ಜಿದಾರರು ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಹಾಗೂ ಇ–ಟೆಂಡರ್ ಅರ್ಜಿ ಶುಲ್ಕ, ಇ.ಎಂ.ಡಿ ಶುಲ್ಕದ ಮೂಲ ಡಿ.ಡಿ.ಗಳನ್ನು ನಿಗದಿತ ಅವಧಿಯ ಒಳಗೆ **ವಿಭಾಗೀಯ ಕಛೇರಿಗೆ (ವಾಣಿಜ್ಯ ಶಾಖೆ)** ಖುದ್ದಾಗಿ ಸಲ್ಲಿಸಲು ಕೊನೆಯ ದಿನಾಂಕ: **13–06–2022, ಸಮಯ: 17.00 (ರಜೆ ದಿನಗಳನ್ನು ಹೊರತುಪಡಿಸಿ, ಕಛೇರಿ ಸಮಯದಲ್ಲಿ ಮಾತ್ರ).** 4) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **14–06–2022, ಸಮಯ: 15.00.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **24–06–2022, ಸಮಯ: 12.00.** ಹೆಚ್ಚಿನ ಮಾಹಿತಿಗಾಗಿ / ವಿವರಗಳಿಗಾಗಿ ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗೀಯ ಸಂಚಾಲನಾಧಿಕಾರಿ – 7760990852, ಸಹಾಯಕ ಸಂಚಾರ ಅಧೀಕ್ಷಕರು – 7760990861** ಕ್ಕೆ ಅಥವಾ ಇ–ಮೇಲ್: **https://www.eproc.karnataka.gov.in** ಗೆ ಸಂಪರ್ಕಿಸಬಹುದು.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ರಾಮನಗರ ವಿಭಾಗ, ರಾಮನಗರ

ವಾಸಾಸಂಇ/ವಾ.ಪ್ರ/522/ಅಡ್ವರ್ಟೋ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE

TO WHOMSOEVER IT MAY CONCERN

My client has negotiated to purchase the Schedule Property from M/s. Sreenidhi Shelters, having its Office at No. 429/31, 2nd Floor, 30th Cross, 7th 'B' Main, 4th Block, Jayanagar, Bangalore-560011, represented by its Partners Sri. K. Srinivasulu Naidu and Sri. D. Rajendra who has represented that they are having clear and marketable title over the Schedule Property.

Any persons claiming to have any right or claims or objection, may lodge their objections or claim along with supporting documents with the undersigned within **10 days** from the date of publication of this notice.

If no such objection or claims is received within the prescribed time, my client will proceed to complete the transaction. If any objection and claim is lodged beyond the prescribed period it shall not be reckoned and it shall be deemed that all objections and claims by whomsoever are waived.

SCHEDULE PROPERTY

All that piece and parcel of the Converted Land (Conversion Order No.B.Dis/ALN/SR (S)/74/2004-05, dated 22-05-2004) measuring 5Acres 11 ½ Guntas land in Old Sy.No.37 (New Sy.No.37/4) of Gollahalli Village, UttarahalliHobli, Bangalore South Taluk, Bangalore and bounded on the **East by:** V.G.P. Garden (Rose Garden) (now BDA 60 Feet Road), **West by:** Tank (Government Tank), **North by:** Land belonging to R.Shasi Kumar, **South by:** Portion of the Property taken to the share of Late R. Rangaswamy.

B. Srinivas, Advocate
"SUNDERA RAMA"
No. 230, 39th 'C' Cross,
9th Main, 5th Block, Jayanagar,
Bangalore-560041, 9900148162
srinivasadvocate@gmail.com
Date: 16-05-2022

ಪ್ರಜಾವಾಣಿ

ಜನಸ್ಪಂದನ

ಸಿಟಿಜ಼ನ್ಸ್ ಫಾರ್ ಚೇಂಜ್

ನೀವು ಯಶವಂತಪುರ ವಿಧಾನಸಭಾ ಕ್ಷೇತ್ರದ ನಿವಾಸಿಯೇ?

ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂಧನ ಕಾರ್ಯಕ್ರಮದಲ್ಲಿ ಭಾಗವಹಿಸಿ.

ಶ್ರೀ ಎಸ್ ಟಿ ಸೋಮಶೇಖರ್

ನಿಮ್ಮ ಕ್ಷೇತ್ರದ ಶಾಸಕರೊಂದಿಗೆ, ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳೂ ಉಪಸ್ಥಿತರಿದ್ದು, ನಿಮ್ಮ ಅಹವಾಲುಗಳಿಗೆ ಕಿವಿಯಾಗಲಿದ್ದಾರೆ. ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ.

- ಟ್ರಾಫಿಕ್
- ಕಸ ವಿಲೇವಾರಿ
- ನೀರು ಸರಬರಾಜು
- ರಸ್ತೆ ಗುಂಡಿಗಳು

ಕಾರ್ಯಕ್ರಮದ ದಿನಾಂಕ: 21–05–2022, ಶನಿವಾರ
ಸಮಯ: 11:00 ರಿಂದ ಮಧ್ಯಾಹ್ನ 2:00 ರವರೆಗೆ
(ನೊಂದಣಿ ಬೆಳಿಗ್ಗೆ 10:00 ರಿಂದ, ಪ್ರವೇಶ ಉಚಿತ)
ಸ್ಥಳ: ಬಂಡೆಮಠ ಕಲ್ಯಾಣ ಮಂಟಪ, ಕೊಮ್ಮಘಟ್ಟ ರಸ್ತೆ, ಬಿಎಸ್‌ಎಂ ಬಡಾವಣೆ, ಕೆಂಗೇರಿ ಸ್ಯಾಟಲೈಟ್ ಟೌನ್, ಬೆಂಗಳೂರು – 60

ಸಂಪರ್ಕಕ್ಕೆ:
ಮುರಳಿಧರ ಜಿ ಎಸ್: 94487 01058

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001
ಫೋನ್: +91 80 4544 8000; ಫ್ಯಾಕ್ಸ್: +91 80 3985 6862
ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಸೂಚನೆ

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ('ಕಂಪನಿ') ಕಂಪನಿಯು ಶ್ರೀ. ಮಾರ್ಕ್ ಡಾಮಿನಿಕ್ ಸ್ಯಾಂಡಿಸ್ (ಡಿಐನ್: 09543864) ರವರನ್ನು ಕಂಪನಿಯ ಕಾರ್ಯನಿರ್ವಾಹಕೇತರ ನಿರ್ದೇಶಕರನ್ನಾಗಿ ನೇಮಕ ಮಾಡುವ ಸಲುವಾಗಿ ಸಾಮಾನ್ಯ ನಿರ್ಣಯದ ಮೂಲಕ ಸದಸ್ಯರುಗಳ ಅನುಮೋದನೆ ಪಡೆಯಲು ಮುಂದಾಗಿರುತ್ತದೆ. ರಿಮೋಟ್ ಇ–ವೋಟಿಂಗ್ ಮೂಲಕ ಸದಸ್ಯರ ಅನುಮೋದನೆಯನ್ನು ಅಂಚೆ ಮತಪತ್ರದ ಮೂಲಕ ಪಡೆಯಲಾಗುತ್ತದೆ.

ತಿದ್ದುಪಡಿಯಾದಂತೆ ಕಂಪನಿ (ನಿರ್ವಹಣೆ ಮಾತು ಆಡಳಿತ) ನಿಯಮಗಳು, 2014ರ ನಿಯಮಗಳು ನಿಯಮ 20 ಮತ್ತು 22ರ ಗಳೊಂದಿಗೆ ಓದಲಾದ ಕಂಪನಿ ಕಾಯಿದೆ, 2013ರ ಕಲಂ. 108 ಮತ್ತು 110ಗಳ ಅನುಸಾರ (ಇದುವರೆಗಿನ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಅಧಿನಿಯಮ ಸೇರಿದಂತೆ) ('ಕಾಯಿದೆ') ಹಾಗೂ ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯ ('ಎಂಸಿಎ') ಸುತ್ತೋಲೆಗಳಿಂದ ನೀಡಲ್ಪಟ್ಟ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020/ದಿ. 8ನೇ ಏಪ್ರಿಲ್, 2020, 17/2020/ದಿ. 13ನೇ ಏಪ್ರಿಲ್ 2020, 20/2021/ದಿ. 8ನೇ ಡಿಸೆಂಬರ್, 2021 ಮತ್ತು 3/2022/ದಿ. 5ನೇ ಮೇ 2022ಗಳ ಅನ್ವಯ ಮಹಾಸಭೆ/ ಅಂಚೆಮತದಾನ ಪ್ರಕ್ರಿಯೆಗಳ ಮೂಲಕ ನಡೆಸಲು ಮತ್ತು ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಹೊಣೆಗಾರಿಕೆ ಮತ್ತು ಘೋಷಣಾ ಅಗತ್ಯಗಳು) ನಿಬಂಧನೆಗಳು, 2015 ('ಲಿಸ್ಟಿಂಗ್ ನಿಬಂಧನೆಗಳು'), ಇನ್ಸ್‌ಟಿಟ್ಯೂಟ್ ಆಫ್ ಕಂಪನಿ ಸೆಕ್ರೇಟರೀಸ್ ಇಂಡಿಯಾದಿಂದ ಸಾಮಾನ್ಯ ಮಹಾಸಭೆ ಕುರಿತು ಕಾರ್ಯದರ್ಶಿಯ ಮಾನದಂಡ ('ಎಸ್‌ಎಸ್–2')ಗಳು, ಹಾಗೂ ಅನ್ವಯವಾಗುವ ಇನ್ನಿತರ ಕಾಯಿದೆ ನಿಯಮ ಸುತ್ತೋಲೆ ಮತ್ತು ಅಧಿಸೂಚನೆಗಳ ಪ್ರಾವಧಾನಗಳ ಅನುಸಾರ ಕಂಪನಿಯ **16ನೇ ಮೇ 2022ರಂದು ಸೋಮವಾರದ** ದಿನ, ಸದಸ್ಯರ ದಾಖಲೆ ಪುಸ್ತಕ, ನ್ಯಾಷನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿಮಿಟೆಡ್ ('ಎನ್‌ಎಸ್‌ಡಿಎಲ್') ಮತ್ತು ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ('ಸಿಎಸ್‌ಡಿಎಲ್') ನಿಂದ ಬಂದ 13ನೇ ಮೇ, 2022ರಂದು ಶುಕ್ರವಾರ ('ಕಟ್–ಆಫ್ ದಿನಾಂಕ') ನ ಫಲಾನುಭವಿಗಳ ಪಟ್ಟಿಯಲ್ಲಿ ಹೆಸರು ದಾಖಲೆಯಾಗಿರುವ ಕಂಪನಿ ಡಿಪಾಸಿಟರಿ ಪಾರ್ಟಿಸಿಪೆಂಟರಲ್ಲಿ ('ಡಿಪಿಗಳು') ತಮ್ಮ ಇ–ಮೇಲ್ ನೀಡಿರುವವರಿಗೆ ವಿದ್ಯುನ್ಮಾನ ವಿಧಾನದಲ್ಲಿ ಮಾತ್ರ ಅಂಚೆ ಮತಪತ್ರ ನೋಟೀಸು ಕಳುಹಿಸಲಾಗಿದೆ.

ಅಂಚೆ ಮತದಾನದ ನೋಟೀಸು ಕಂಪನಿಯ ವೆಬ್ ಸೈಟ್ www.diageoindia.com ನಲ್ಲಿ ಹಾಗೂ ಷೇರು ವಿನಿಮಯ ಕೇಂದ್ರಗಳಾದ ಬಿಎಸ್‌ಇ ಲಿಮಿಟೆಡ್ ('ಬಿಎಸ್‌ಇ') ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ('ಎನ್‌ಎಸ್‌ಇ')ಗಳ ವೆಬ್‌ಸೈಟ್ ಗಳಾದ www.bseindia.com ಮತ್ತು www.nseindia.com ಗಳಲ್ಲಿ ಹಾಗೂ ಎನ್‌ಎಸ್‌ಡಿಎಲ್ ನ www.evoting.nsdl.com ಗಳಲ್ಲಿ ಲಭ್ಯವಿದೆ.

ಸದಸ್ಯರ ದಾಖಲೆ ಪುಸ್ತಕ / ಕಟ್–ಆಫ್ ದಿನಾಂಕದಲ್ಲಿದ್ದಂತೆ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರು ಇರುವ ಸದಸ್ಯರು ನೋಟೀಸಿನಲ್ಲಿ ನಿಗದಿಪಡಿಸಿದ ಗೊತ್ತುವಳಿಗೆ ಮತ ಚಲಾಯಿಸಬಹುದು. ಸದಸ್ಯರ ಮತ ನೀಡುವ ಅಧಿಕಾರವು ಅವರು ಹೊಂದಿರುವ ಪ್ರಮಾಣದ ಪೂರ್ಣಪಾವತಿಯಾದ, ಕಂಪನಿಯ ಈಕ್ವಿಟಿ ಷೇರು ಬಂಡವಾಳದ, ಕಟ್–ಆಫ್ ದಿನಾಂಕ 13ನೇ ಮೇ, 2022 ದಲ್ಲಿದ್ದ ಷೇರುಗಳನ್ನು ಅವಲಂಬಿಸಿರುತ್ತದೆ.

ಕಂಪನಿಯು ತನ್ನ ಸದಸ್ಯರಿಗೆ ಪರೋಕ್ಷ ಇ–ಮತದಾನದ ಸೌಲಭ್ಯ ಒದಗಿಸಲು ಎನ್‌ಎಸ್‌ಡಿಎಲ್‌ನ ಸೇವೆಯನ್ನು ಪಡೆದುಕೊಂಡಿದೆ. ಪರೋಕ್ಷ ಮತದಾನವು 18ನೇ ಮೇ 2022 ರಂದು ಬುಧವಾರ ಬೆಳಿಗ್ಗೆ 10.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗಿ 16ನೇ ಜೂನ್ 2022 ರಂದು ಗುರುವಾರದಂದು ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯವಾಗುತ್ತದೆ. ಪರೋಕ್ಷ ಇ–ಮತದಾನದ ಮಾಡ್ಯೂಲ್ ವ್ಯವಸ್ಥೆಯು ನಂತರ ಎನ್‌ಎಸ್‌ಡಿಎಲ್ ನಿಂದ ನಿಷ್ಕ್ರಿಯೆ ಮಾಡಲ್ಪಡುವುದು ಸದಸ್ಯರು ಒಮ್ಮೆ ಗೊತ್ತುವಳಿಗೆ ಮತ ಚಲಾಯಿಸಿದ ನಂತರ ಅದನ್ನು ಬದಲಿಸಲು ಅವಕಾಶವಿರುವುದಿಲ್ಲ.

ಇ–ಮೇಲ್ ವಿಳಾಸ ನೋದಾಯಿಸಿಲ್ಲದ ಸದಸ್ಯರು ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ)/ ಡಿಪಿಗಳ ಬಳಿ ನೋದಾವಣೆ ಮಾಡಬಹುದು ಇ–ಮೇಲ್ ವಿಳಾಸ ನೋಂದಾಯಿಸುವ ಹಾಗೂ ಪರೋಕ್ಷ ಇ–ಮತದಾನ ಮಾಡುವ ವಿಧಾನಗಳು ನೋಟೀಸಿನಲ್ಲಿ ಲಭ್ಯವಿವೆ.

ವೃತ್ತಿನಿರತ ಕಂಪನಿ ಕಾರ್ಯದರ್ಶಿಗಳಾದ ಶ್ರೀ ಸುಧೀರ್ ವಿ. ಹುಲಿಯಾಲ್ಕರ್ ಅವರನ್ನು ಇ–ಮತದಾನದ ಪ್ರಕ್ರಿಯೆಯ ಮೂಲಕ ಅಂಚೆ ಮತದಾನದಲ್ಲಿ ಚಲಾಯಿಸಲಾದ ಮತಗಳನ್ನು ಪ್ರಾಮಾಣಿಕವಾಗಿ ಪರಿಶೀಲಿಸುವ ಸಲುವಾಗಿ ಪರಿಶೀಲಕರನ್ನಾಗಿ ನೇಮಕ ಮಾಡಲಾಗಿದೆ.

ಅಂಚೆ ಮತದಾನದ ಫಲಿತಾಂಶವನ್ನು 18ನೇ ಜೂನ್ 2022 ರಂದು ಅಥವಾ ಅದಕ್ಕೆ ಮುಂಚಿತವಾಗಿ ಘೋಷಿಸಲಾಗುವುದು ಘೋಷಿತ ಫಲಿತಾಂಶವನ್ನು ಪರಿಶೀಲಕರ ವರದಿಯೊಂದಿಗೆ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಗೆ ಕಳುಹಿಸಲಾಗುವುದು ಹಾಗೂ ಕಂಪನಿಯ ವೆಬ್ ಸೈಟ್ www.diageoindia.com ಮತ್ತು ಎನ್‌ಎಸ್‌ಡಿಎಲ್ ನ ವೆಬ್ ಸೈಟ್ www.evoting.nsdl.com ಗಳಲ್ಲಿ ಅಪ್ ಲೋಡ್ ಮಾಡಲಾಗುವುದು.

ಯಾವುದೇ ಪ್ರಶ್ನೆಗಳಿದ್ದಲ್ಲಿ ಆಗಿಂದಾಗ್ಗೆ ಕೇಳಲಾಗುವ ಪ್ರಶ್ನೆಗಳನ್ನು (ಎಫ್‌ಎಕ್ಯೂಗಳು) ನೋಡಬಹುದು ಷೇರುದಾರರು ಮತ್ತು ಇ–ಮತದಾನದ ಬಳಕೆದಾರರ ಕೈಪಿಡಿಯನ್ನು www.evoting.nsdl.com ನಲ್ಲಿ ಡೌನ್ ಲೋಡ್ ವಿಭಾಗದಲ್ಲಿ ನೋಡಬಹುದು ಅಥವಾ ಶುಲ್ಕರಹಿತ ಕರೆ ನಂ. 1800 1020 990 ಮತ್ತು 1800 22 44 30 ಗೆ ಕರೆ ಮಾಡಬಹುದು ಅಥವಾ ಶ್ರೀ ಶ್ರೀಜಿತ್ ರಾಮಚಂದ್ರನ್ ಸಹಾಯಕ ಮ್ಯಾನೆಜರ್ ಅವರನ್ನು evoting@nsdl.co.in ನಲ್ಲಿ ಮನವಿ ಕಳುಹಿಸಬಹುದು.

ಸದಸ್ಯರು ನೋಟೀಸಿನಲ್ಲಿ ವಿವರಿಸಿರುವ ಎಲ್ಲಾ ಟಿಪ್ಪಣಿಗಳನ್ನು ಗಮನವಿಟ್ಟು ನೋಡಲು ವಿಶೇಷವಾಗಿ ಪರೋಕ್ಷ ಇ–ಮತದಾನದ ಮೂಲಕ ಮತ ಚಲಾಯಿಸುವ ವಿಧಾನವನ್ನು ಗಮನವಿಟ್ಟು ಓದಿಕೊಳ್ಳಲು ಕೋರಲಾಗಿದೆ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ

ಸ್ಥಳ : ಮುಂಬಯಿ
ದಿನಾಂಕ : 16ನೇ ಮೇ, 2022

ಮಿತ್ತಲ್ ಸಂಘ್ವಿ
ಕಂಪನಿಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101,
ದೂರವಾಣಿ ಸಂಖ್ಯೆ: ಕಛೇರಿ: 08156–295427, ಫ್ಯಾಕ್ಸ್: 08156 295427, ಇಮೇಲ್ eemidcbpura@gmail.com

4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿನ ಟೆಂಡರ್ ಪ್ರಕಟಣೆ ಸಂಖ್ಯೆ : 03/2022–23 ದಿನಾಂಕ : 05/05/2022.

ಭಾಗ–1: ಅಲ್ಪಾವಧಿ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನ– ಕೆ.ಸಿ. –5

1. ಇ–ಪ್ರೊಕ್ಯೂರ್‌ಮೆಂಟ್ ಅನ್ವಯ ಕಾಮಗಾರಿಗೆ ಟೆಂಡರ್ ಅನ್ನು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಚಿಕ್ಕಬಳ್ಳಾಪುರ ರವರು ಟೆಂಡರ್ ಕರೆಯಲಾಗಿದ್ದು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(viz.,http://eproc.karnataka.gov.in)** ರಲ್ಲಿ ಟೆಂಡರ್‌ಗಳನ್ನು ಒಂದು ಕವರ್ ಪದ್ಧತಿಯಲ್ಲಿ (1) ಸರ್ಕಾರದಿಂದ ನೋಂದಣಿ ಮಾಡಿದ ವಿವರದ ಪ್ರತಿ (2) ಇ.ಎಂ.ಡಿ. ಬಗ್ಗೆ (3) ಆದಾಯ ತೆರಿಗೆ ತೀರುವಳಿ ಬಗ್ಗೆ, 4) ಟೆಂಡರ್‌ನಲ್ಲಿ ಕರೆದಿರುವ ಅದೇ ಮಾದರಿಯ ಒಂದು ಕಾಮಗಾರಿ ನಿರ್ವಹಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು 5) ಟೆಂಡರ್‌ನ್ನು ಅನುಮೋದಿಸುವ ಹಾಗೂ ತಿರಸ್ಕರಿಸುವ ಅಧಿಕಾರ ಸಂಪೂರ್ಣವಾಗಿ ಈ ಕೆಳ ಸಹಿದಾರರದ್ದಾಗಿರುತ್ತದೆ. ಗುತ್ತಿಗೆದಾರರು ಸದರಿ ಕಾಮಗಾರಿಗೆ ಬೇಕಾಗಿರುವ ಪೂರ್ವಾರ್ಹತೆಗಳ ಬಗ್ಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಸಿ.–5 ರಂತೆ (Instructions to Tenders to award of the contract) ಪರಿಶೀಲಿಸಿ ಅದರಂತೆ ಭಾಗವಹಿಸಬಹುದು.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್ ಫಾರಂನ ಮಾದರಿ	ಅಂದಾಜು ಮೊತ್ತ (ರೂ. ಲಕ್ಷ ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಲಕ್ಷ ಗಳಲ್ಲಿ)	ಟೆಂಡರ್ ಫಾರಂ ಬೆಲೆ	ಕಾಲಾವಧಿ (ಮಳೆಗಾಲವ ು ಸೇರಿ)	ಗುತ್ತಿಗೆದಾರರ ದರ್ಜೆ
1	ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಬೃಹತ್ ಅಣೆಕಟ್ಟು ಅಡಿಯಲ್ಲಿ ಬರುವ ದಂಡಿಗಾನಹಳ್ಳಿ ಕೆರೆಯ Hydrological review, Dam Break Analysis, Preparation of Emergency Action Plan (EAP) and Preparation of O & M Manual ತಯಾರಿಸಲು ಸಮಾಲೋಚಕರನ್ನು ನೇಮಿಸುವ ಕಾಮಗಾರಿ.	ಕೆ.ಸಿ.–5	6.00	12000.00	ಇ–ಪ್ರೊಕ್ಯೂರ್ ಮೆಂಟ್ ದರದಂತೆ	03 ತಿಂಗಳು	ಕರ್ನಾಟಕ ಸರ್ಕಾರದಿಂದ ನೊಂದಾಯಿತ ಅರ್ಹ ಸಮಾಲೋಚಕರು

1) ಸದರಿ ಟೆಂಡರ್‌ನಲ್ಲಿ ಕರೆದಿರುವ ಕಾಮಗಾರಿಗೆ ಸಂಬಂಧಿಸಿದ ಇಎಂಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವ ಯಾವುದಾದರೊಂದು ರೂಪದಲ್ಲಿ ಟೆಂಡರ್ ಊರ್ಜಿತ ಅವಧಿಯನ್ನು ಬಿಟ್ಟು ಹೆಚ್ಚುವರಿಯಾಗಿ 45 ದಿನಗಳನ್ನು ಒಳಗೊಂಡಂತೆ ಸಲ್ಲಿಸಬೇಕಾಗಿರುತ್ತದೆ. 2) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(viz., http://eproc.karnataka.gov.in)** ಗೆ ದಿನಾಂಕ: 23/05/2022 ರಂದು ಸಂಜೆ 16.00 ಗಂಟೆವರೆಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಕೆಲಸ ನಿರ್ವಹಿಸಿದ ಬಗ್ಗೆ ಅನುಭವ ಕೆಲಸ ಅರ್ಹತೆ ಬಗ್ಗೆ ಇತ್ಯಾದಿ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಟೆಂಡರ್ ಮೌಲ್ಯಮಾಪನ ಸಮಯದಲ್ಲಿ ಪರಿಶಿಲನೆಗೆ ಸಲ್ಲಿಸತಕ್ಕದ್ದು. 3) ಭರ್ತಿ ಮಾಡಿದ ತಾಂತ್ರಿಕ ಬಿಡ್‌ನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 26/05/2022 ರಂದು ತೆರೆಯಲಾಗುವುದು. 4) ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080-23010900, 080-23010901 ಮತ್ತು 080-38013000 ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

15	Venkatesh .R s/o B.R Ramachandrappa	35	3	Dry	0	16	0	0	0	16	0.81	0	16	37	35/2	37	35/1
16	Munishamareddy s/o Sidappa	35	4	Dry	2	0.5	0	0	2	0.5	4.3	1	4.25	Remaining extent	Sy. No. 35/1	Sy. No. 37	Sy. No. 35/7
17	T.C Channappa Reddy, T.C Nagaraj Reddy, T.C Ramachandra Reddy	35	7	Dry	0	24	0	1	0	23	1.45	0	5	Remaining extent	Sy. No. 28	Sy. No. 35/4	Sy. No. 28
18	Somashekar s/o Marappa,	36	1, 1/A	Wet	0	23	0	0	0	23	1.5	0	4.75	NALA	36/1 Part	NALA	NALA
19	Harish Kumar s/o Mi.Ga B.R Ramachandrappa, B.R Ramachandrappa s/o Rangappa, B.R Annaiahppa s/o Rangappa T.Gangaraju s/o Late Thimmaiah	37	-	Dry	12	14	0	0	12	14	15	3	19	Remaining extent	Remaining extent	Sy. No. 47 & 48	Sy. No. 35
20	Smt C.Vasanthakuamri D/o H.K Nanjaiah,	46	1	Wet	2	5.8	0	5.8	2	0	2.56	0	11	48/3	46 Part	46 Part	48/5, 48/3
21	N. Narayana Swamy s/o Narayanappa	47	*	Wet	2	20	0	0	2	20	4.92	1	9	37, 48/6	47 Part	47 Part	37
22	Paravathamma w/o late T.S Ramaiah, Basavaraju s/o Nanjappa	48	1	-	1	14	0	0	1	14	2.3	0	16.5	Sy.No. 49	Sy. No 48/3	Sy.No. 46	Sy. No. 48/1 Part
23	Ramakrishnappa s/o Nanjappa	48	2	-	0	36	0	0	0	36	1.53	0	35.5	Sy.No. 49	Sy.No. 48/3	Sy.No. 46	Sy.No. 48/1
24	Basavaraju s/o Nanjappa, C.Aravindaraju s/o C Venkateshwara Rao, Revanna, Manjunath, Nagaraju, Kumar s/o late Bhogeshappa, K.Byrappa	48	3	Wet	2	29	0	0.2	2	27	4.56	2	11.25	Remaining extent	Remaining extent	Remai-ning extent	Remai-ning extent
25	Basaravaju s/o Nanjappa, Basavaraju s/o Nanjappa	48	4	Dry	1	11	0	0	1	11	2.18	0	1.25	Remaini ng extent	Sy. No. 37	Sy. No. 48/6	Remai-ning extent
26	B. Premanatha Reddy s/o Mathiyas Reddy	48	5	-	0	17	0	0	0	17	0.73	0	17	Sy.No 48/3	Sy.No 47	Sy.No 46	Sy.No. 48/6
27	B Premanatha Reddy s/o Nathiyas Reddy	48	6	Dry	0	28	0	0	0	28	1.19	0	30	Remaining extent	Remaining extent	Remain ing extent	Sy. No. 48/4
28	NALA	NA-LA	-	-	-	-	-	-	-	-	-	0	4.5	35/1	36/1	NALA Part	28/1
29	NALA	NA-LA	-	-	-	-	-	-	-	-	-	0	18	28/1, 28/2, 29/2	27/3, 27/1, 26	NALA Part	NALA Part
30	Cart Road	Ro-ad	-	-	-	-	-	-	-	-	-	0	2	47	Road Part	Road Part	37
	Total Ext.				49	12	0	12	48	32		25	11				

ABSTRACT

District	Name of the Taluk	Name of the Hobli	Name of the Village	Extent Proposed for Acquisition	
				A	G
Bangalore Urban	Bangalore North	Dasanapura	1. Madavara	1	30.25
			2.Srikantapura	9	24.75
			3. Thotadaguddadahalli	32	31.5
			4.Kuduregere	0	3.5
			5.Thammenahalli	25	11
			Grand Total	69	21

Commissioner
Bangalore Development Authority,
Bengaluru

10 ಸಾವಿರ ಜನರ ಸಹಿ ಸಂಗ್ರಹ: ಮೇಲ್ಸೇತುವೆ ನಿರ್ಮಿಸದಂತೆ ಸ್ಥಳೀಯರಿಂದ ಒತ್ತಾಯ

ವರ್ತೂರು ಮೇಲ್ಸೇತುವೆಗೆ ಭಾರಿ ವಿರೋಧ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ನಗರದ ಹೊರವಲಯದ ವರ್ತೂರಿನಲ್ಲಿ 1.9 ಕಿಲೋ ಮೀಟರ್ ಉದ್ದದ ಮೇಲ್ಸೇತುವೆಯನ್ನು ₹482 ಕೋಟಿ ಮೊತ್ತದಲ್ಲಿ ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಇದಕ್ಕೆ ಸ್ಥಳೀಯರಿಂದ ಭಾರಿ ವಿರೋಧ ವ್ಯಕ್ತವಾಗಿದೆ.

ಬೆಂಗಳೂರು ಹೊರ ವಲಯದಲ್ಲಿದ್ದ ವರ್ತೂರು ಐ.ಟಿ ಕಂಪನಿಗಳು ಬೆಂಗಳೂರಿಗೆ ಲಗ್ಗೆ ಇಟ್ಟ ಬಳಿಕ ನಗರದ ಭಾಗವಾಗಿ ಮಾರ್ಪಟ್ಟಿದೆ. 1 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ್ದು, 26 ಸಾವಿರಕ್ಕೂ ಅಧಿಕ ಮತದಾರರಿದ್ದಾರೆ. ಊರಿನ ಸುತ್ತಮುತ್ತ ಬಡಾವಣೆಗಳು ತಲೆ ಎತ್ತಿ ನಿಂತಿದ್ದು, ದಿನದಿಂದ ದಿನಕ್ಕೆ ಜನ ವಸತಿ ಹೆಚ್ಚುತ್ತಲೇ ಇದೆ.

ಈ ಊರಿನಲ್ಲಿ 40 ಅಡಿ ಅಗಲದ ಮುಖ್ಯ ರಸ್ತೆ ಇದ್ದು, ವಿಸ್ತರಣೆಯಾಗಬೇಕು ಎಂಬ ಕೂಗು 40 ವರ್ಷಗಳಿಂದ ಕೇಳುತ್ತಲೇ ಇದೆ. ಪರ–ವಿರೋಧದ ನಡುವೆ ನಾಲ್ಕು ದಶಕಗಳನ್ನು ಸವೆಸಿದರೂ ರಸ್ತೆ ವಿಸ್ತರಣೆ ಆಗಲೇ ಇಲ್ಲ. ಈಗ ಸ್ಥಳೀಯ ಜನ ಪ್ರತಿನಿಧಿಗಳ ಪ್ರಯತ್ನದಿಂದ ರಸ್ತೆ ವಿಸ್ತರಣೆಗೆ ಅಗತ್ಯ ಜಾಗ ಬಿಟ್ಟುಕೊಡಲು ಸ್ಥಳೀಯರು ಒಪ್ಪಿದ್ದರು.

ವರ್ತೂರು ಮುಖ್ಯ ರಸ್ತೆ

ಮೆಟ್ರೊ ರೈಲು ಮಾರ್ಗದಲ್ಲಿ ಭೂಸ್ವಾಧೀನಕ್ಕೆ ನೀಡುವ ಪರಿಹಾರದ ಮಾದರಿಯಲ್ಲೆ ಹೆಚ್ಚಿನ ದರ ನೀಡಿದರೆ ಜಾಗ ಬಿಟ್ಟುಕೊಡಲು ಸ್ಥಳೀಯರು ಮನಸ್ಸು ಮಾಡಿದ್ದರು. ಈ ನಡುವೆ ಈಗ ಸರ್ಕಾರ, ಏಕಾಏಕಿ ಮೇಲ್ಸೇತುವೆ ನಿರ್ಮಾಣದ ಪ್ರಸ್ತಾವನೆಯನ್ನು ಮುನ್ನೆಲೆಗೆ ತಂದಿದೆ. ಸಚಿವ ಸಂಪುಟದ ಮುಂದೆಯೇ ಪ್ರಸ್ತಾವನೆ ತಂದು ಒಪ್ಪಿಗೆ ಪಡೆದುಕೊಂಡಿದೆ.

ಇದು ಸ್ಥಳೀಯರ ಅಸಮಾಧಾನಕ್ಕೆ ಕಾರಣವಾಗಿದೆ. 'ಸಾರ್ವಜನಿಕರ ಅಭಿಪ್ರಾಯವನ್ನೇ ಕೇಳದೆ ಈ ರೀತಿಯ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿರುವುದು ಸರಿಯಲ್ಲ. ಈ ಯೋಜನೆಯನ್ನು ಕೂಡಲೇ ಕೈಬಿಡಬೇಕು' ಎಂದು ಹೋರಾಟ ಆರಂಭಿಸಿದ್ದಾರೆ.

ಭಗ್ನವಾಗುವ ಮೆಟ್ರೊ ರೈಲು ಕನಸು

'ವರ್ತೂರು ರಸ್ತೆಯಲ್ಲಿ ದಿನಕ್ಕೆ 80 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತಿವೆ. 60 ಅಡಿ ಅಗಲದ ಮೇಲ್ಸೇತುವೆ ನಿರ್ಮಾಣದಿಂದ ಸಂಚಾರ ದಟ್ಟಣೆ ಸಮಸ್ಯೆ ಸರಿಯಾಗುವುದಿಲ್ಲ' ಎನ್ನುತ್ತಾರೆ ವರ್ತೂರು ನಾಗರಿಕರ ಹಿತ ರಕ್ಷಣಾ ವೇದಿಕೆಯ ಜಗದೀಶ್ ರೆಡ್ಡಿ.

'ಮೆಟ್ರೊ ರೈಲು ಮಾರ್ಗದ ಕನಸನ್ನು ಈ ಭಾಗದ ಜನ ಕಾಣುತ್ತಿದ್ದಾರೆ. ಮೇಲ್ಸೇತುವೆ ನಿರ್ಮಾಣವಾದರೆ ಆ ಕನಸೇ ಭಗ್ನವಾಗಲಿದೆ. ಆದ್ದರಿಂದ ಮೇಲ್ಸೇತುವೆ ಬೇಡವೇ ಬೇಡ' ಎಂದು ಹೇಳಿದರು.

'ಸುತ್ತಮುತ್ತಲ ಪ್ರದೇಶಕ್ಕೆ ಈಗಿರುವ ನೆಲ ಮತ್ತು ಕಟ್ಟಡ ವಿಸ್ತೀರ್ಣದ ಅನುಪಾತ (ಎಫ್‌ಎಆರ್) ಕಡಿಮೆಯಾಗಲಿದ್ದು, ಸಾಲ ಸೌಲಭ್ಯ ಸಿಗದಂತೆ ಆಗಲಿದೆ. ಈ ಒಂದೇ ಒಂದು ಮೇಲ್ಸೇತುವೆ ವರ್ತೂರು ಮತ್ತು ಸುತ್ತಮುತ್ತಲ ಜನರ ಬದಕನ್ನೇ ಕಸಿದುಕೊಳ್ಳಲಿದೆ' ಎಂದರು.

'ಗ್ರಾಮಗಳ ಅಭಿವೃದ್ಧಿಗೆ ಧಕ್ಕೆ'

ವರ್ತೂರು ಮುಖ್ಯ ರಸ್ತೆ ಸಂಪರ್ಕಿಸುವ ಸೋರಹುಣಸೆ, ಮಧುರಾನಗರ, ವಾಲೇಪುರ, ಮುತ್ಸಂದ್ರ, ಹಾರೋಹಳ್ಳಿ, ಬಳಗೆರೆ, ಹಲಸಹಳ್ಳಿ, ತಿಪ್ಪಸಂದ್ರ ಗ್ರಾಮಗಳ ಅಭಿವೃದ್ಧಿಗೆ ಧಕ್ಕೆಯಾಗಲಿದೆ ಎಂದು ವರ್ತೂರಿನ ಮಧುಸೂದನ್ ಹೇಳಿದರು. ತಿಗಳರ ಬೀದಿ, ಬಳಗೆರೆ ರಸ್ತೆ, ಹಲಸಹಳ್ಳಿ ರಸ್ತೆ, ಸೋರಹುಣಸೆ ಮತ್ತು ಮಧುರಾನಗರದಲ್ಲಿ ನಿರ್ಮಾಣವಾಗುವ ಅಪಾರ್ಟ್‌ಮೆಂಟ್ ಸಮುಚ್ಛಯ, ಬಡಾವಣೆ ಅಥವಾ ಬಾಡಿಗೆ ಮನೆಗಳಿಗೆ ಬೇಡಿಕೆಯೇ ಇಲ್ಲವಾಗಲಿದೆ ಎಂದರು.

ಸಹಿ ಸಂಗ್ರಹ ಅಭಿಯಾನ

ವರ್ತೂರಿನ ಮುಖ್ಯ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಾಣವಾದರೆ ಸುತ್ತಮುತ್ತಲ ಪ್ರದೇಶವನ್ನು ಅಭಿವೃದ್ಧಿಯಲ್ಲಿ 50 ವರ್ಷ ಹಿಂದಕ್ಕೆ ತಳ್ಳಿದಂತೆ ಆಗಲಿದೆ ಎಂದು ಜಗದೀಶ್ ರೆಡ್ಡಿ ಹೇಳಿದರು.

ಈಗಾಗಲೇ ಪೆರಿಫೆರಲ್ ರಿಂಗ್ ರಸ್ತೆಗೆ ಸರ್ಕಾರ ಅನುಮೋದನೆ ನೀಡಿದೆ. ಗಂಜೂರು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಮಾರತಹಳ್ಳಿ ರಿಂಗ್ ರಸ್ತೆಯಿಂದ 100 ಅಡಿ ರಸ್ತೆ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ಈ ಎರಡು ರಸ್ತೆಗಳ ಕಾಮಗಾರಿ ಮುಕ್ತಾಯವಾದರೆ ವರ್ತೂರು ರಸ್ತೆ ಮೇಲಿನ ಸಂಚಾರದ ಒತ್ತಡ ಕಡಿಮೆಯಾಗಿದೆ ಎಂದರು.

'ಸ್ಥಳೀಯರ ಅಭಿಪ್ರಾಯ ಪರಿಗಣಿಸದೆ ಮೇಲ್ಸೇತುವೆಯನ್ನು ನಮ್ಮ ಮೇಲೆ ಹೇರಲು ಹೊರಟಿರುವ ಸರ್ಕಾರದ ನಿರ್ಧಾರದ ವಿರುದ್ಧ ಊರಿನ 10 ಸಾವಿರ ಜನರಿಂದ ಸಹಿ ಸಂಗ್ರಹಿಸಿ ಹೋರಾಟ ನಡೆಸುತ್ತಿದ್ದೇವೆ. ಸರ್ಕಾರ ಜಗ್ಗದಿದ್ದರೆ ಕಾನೂನಿನ ಹೋರಾಟಕ್ಕೂ ಮುಂದಾಗಲಿದ್ದೇವೆ' ಎಂದು ಅವರು ಎಚ್ಚರಿಸಿದರು.

'ರಥೋತ್ಸವಕ್ಕೆ ಅಡ್ಡಿಯಾಗುವ ಸೇತುವೆ'

ಮೇಲ್ಸೇತುವೆ ನಿರ್ಮಾಣವಾದರೆ ಗ್ರಾಮಸ್ಥರು ಮತ್ತು ಸುತ್ತಮುತ್ತಲ ಬಡಾವಣೆಗಳ ಜನ ಏನೆಲ್ಲಾ ತೊಂದರೆ ಅನುಭವಿಸಬೇಕಾಗುತ್ತದೆ ಎಂಬುದನ್ನು ನಿವಾಸಿಗಳು ಪಟ್ಟಿ ಮಾಡಿದ್ದಾರೆ.

ವ್ಯಾಪಾರ ವಹಿವಾಟಿಗೆ ತೊಂದರೆ ಆಗುವ ಆತಂಕ ಸ್ಥಳೀಯರಲ್ಲಿದ್ದು, ಮುಖ್ಯವಾಗಿ ಊರ ಜಾತ್ರೆಗೆ ಆಗಲಿರುವ ಅಡಚಣೆ ಗ್ರಾಮಸ್ಥರನ್ನು ಘಾಸಿಗೊಳಿಸಿದೆ.

'ವರ್ತೂರಿನ ಚನ್ನರಾಯಸ್ವಾಮಿ ಜಾತ್ರೆಗೆ ಇತಿಹಾಸ ಇದೆ. ಮೇಲ್ಸೇತುವೆ ನಿರ್ಮಾಣವಾದರೆ ರಥೋತ್ಸವ ಮತ್ತು ಕರಗವನ್ನೇ ನಿಲ್ಲಿಸಬೇಕಾಗುತ್ತದೆ. ಊರಿನ ಜಾತ್ರೆಯನ್ನೇ ನಿಲ್ಲಿಸುವ ಮೇಲ್ಸೇತುವೆ ನಮಗೆ ಅಗತ್ಯ ಇಲ್ಲ' ಎನ್ನುತ್ತಾರೆ ಗ್ರಾಮಸ್ಥರು.

ಮಂಡ್ಯದ ಸರ್ಕಾರಿ ಮಹಾವಿದ್ಯಾಲಯದಲ್ಲಿ ಸಚಿವ ಸಿ.ಎನ್‌.ಅಶ್ವತ್ಥನಾರಾಯಣ ಅವರು ಮತದಾರರನ್ನು ಉದ್ದೇಶಿಸಿ ಮಾತನಾಡಿದರು. ಅಭ್ಯರ್ಥಿ ರವಿಶಂಕರ್ ಮತ್ತು ಬಿಜೆಪಿ ಮುಖಂಡರು ಇದ್ದರು

ಪದವೀಧರರ ಕ್ಷೇತ್ರ: ಸಚಿವ ಅಶ್ವತ್ಥನಾರಾಯಣ ಪ್ರಚಾರ

ಬೆಂಗಳೂರು: ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಅವರ ಪರವಾಗಿ ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರು ಮಂಡ್ಯ ಮತ್ತು ಮೈಸೂರು ನಗರಗಳಲ್ಲಿ ಸೋಮವಾರ ಪ್ರಚಾರ ನಡೆಸಿದರು.

ಬೆಳಿಗ್ಗೆಯಿಂದಲೇ ಮತದಾರರ ಜತೆ ಸಂವಾದ ಮತ್ತು ಪ್ರಮುಖರನ್ನು ಭೇಟಿ ಮಾಡಿದರು. ಮಂಡ್ಯದ ಮಾಂಡವ್ಯ ಶಿಕ್ಷಣ ಸಂಸ್ಥೆ, ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ ವೈದ್ಯಕೀಯ ಕಾಲೇಜು, ಪಿಇಎಸ್ ಪದವಿ ಕಾಲೇಜು, ಮಂಡ್ಯ ವಿಶ್ವವಿದ್ಯಾಲಯ, ಪಿಇಎಸ್ ಎಂಜಿನಿಯರಿಂಗ್ ಕಾಲೇಜು ಮತ್ತು ಯಲಿಯೂರಿನ ಅನಿಕೇತನ ಶಾಲೆಗಳಲ್ಲಿ ನಡೆದ ಸಭೆಗಳಲ್ಲಿ ಮತಯಾಚನೆ ಮಾಡಿದರು. ಮೈಸೂರಿನಲ್ಲಿ ಸಚಿವರು ಮುಕ್ತ ಗಂಗೋತ್ರಿಯಲ್ಲಿ ಇದೇ ರೀತಿ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಯುವಜನರಿಗೆ ಉಜ್ವಲ ಭವಿಷ್ಯ ಸೃಷ್ಟಿಸುವುದು, ಭ್ರಷ್ಟಾಚಾರ ರಹಿತ ಆಡಳಿತ ಒದಗಿಸುವುದು ಮತ್ತು ಪರಿಶುದ್ಧ ಸಮಾಜ ನಿರ್ಮಿಸುವುದು ಬಿಜೆಪಿಯಿಂದ ಮಾತ್ರ ಸಾಧ್ಯ. ಆದ್ದರಿಂದ ಪಕ್ಷದ ಅಭ್ಯರ್ಥಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕು' ಎಂದು ಮನವಿ ಮಾಡಿದರು.

ಪೋರ್ಟಲ್ ಸಮಸ್ಯೆ ನಿವಾರಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಎಚ್ ಪೋರ್ಟಲ್‌ನಲ್ಲಿನ ಸಮಸ್ಯೆ ನಿವಾರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಶಾ ಕಾರ್ಯಕರ್ತೆಯರು ಆಗ್ರಹಿಸಿದ್ದು, ಮಂಗಳವಾರ (ಮೇ 17) ಬೆಳಿಗ್ಗೆ 11 ಗಂಟೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ.

'ದತ್ತಾಂಶ ನಮೂದಿಸುವ ತಂತ್ರಾಂಶದಲ್ಲಿನ ಸಮಸ್ಯೆಯಿಂದಾಗಿ ಆಶಾ ಕಾರ್ಯಕರ್ತೆಯರು ತೊಂದರೆ ಅನುಭವಿಸುತ್ತಿದ್ದಾರೆ. ಈ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸಬೇಕು. ಹೆಚ್ಚುವರಿ ಕೆಲಸಗಳಿಂದಲೂ ಮುಕ್ತಿ ನೀಡಬೇಕು. ಅವರಿಗೆ ವೈದ್ಯಕೀಯ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಅವರು ತಿಳಿಸಿದ್ದಾರೆ.

'ಆಶಾ ಕಾರ್ಯಕರ್ತೆಯರು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ಹಲವು ವರ್ಷಗಳಿಂದ ಚಳವಳಿಗಳನ್ನು ನಡೆಸಲಾಗುತ್ತಿದೆ. ಈ ಹೋರಾಟದ ಮುಂದುವರಿದ ಭಾಗವಾಗಿ ಪ್ರತಿಭಟನೆ ನಡೆಸಲಾಗುತ್ತಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದ ವಿವಿಧೆಡೆ ಬುದ್ಧ ಜಯಂತಿ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಭಗವಾನ್ ಬುದ್ಧನ ಜಯಂತಿಯನ್ನು ಸಂಭ್ರಮ ಹಾಗೂ ಭಕ್ತಿ ಭಾವದಿಂದ ಆಚರಿಸಲಾಯಿತು.

ಗಾಂಧಿನಗರದ ಮಹಾಬೋಧಿ ಸೊಸೈಟಿಯಲ್ಲಿ ಪೂಜೆ ಹಾಗೂ ಧ್ಯಾನಗಳು ನಡೆದವು. ಸೊಸೈಟಿಯ ಆವರಣದಲ್ಲಿ ಹೂವಿನಿಂದ ಅಲಂಕೃತಗೊಂಡಿದ್ದ ಬುದ್ಧನ ಪ್ರತಿಮೆಗೆ ಬೌದ್ಧ ಭಿಕ್ಕುಗಳು ನಮನ ಸಲ್ಲಿಸಿದರು.

ಸತಿಪಟ್ಟಾಣ ಕುಟೀರದಿಂದ ವಿಹಾರದವರೆಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಬುದ್ಧ ವಂದನೆ, ಆಚಾರ್ಯ ಪೂಜೆ, ಪರಿತ್ರಾಣ ಪಠಣಗಳೂ ನಡೆದವು. ಸಂಜೆ ದೀಪದೊಂದಿಗೆ ಬೋಧಿ ಪೂಜೆ ನಡೆಸಲಾಯಿತು. ಪೂರ್ಣಿಮೆಯ ಪೂಜೆ ಹಾಗೂ ಚೈತ್ಯ ಪೂಜೆಗಳೂ ನಡೆದವು.

ವಿಶ್ವ ಬುದ್ಧ ಧಮ್ಮ ಸಂಘವು ಸದಾಶಿವನಗರದ ನಾಗಸೇನಾ ಬುದ್ಧವಿಹಾರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಮೂಹಿಕ ಪ್ರಾರ್ಥನೆ ನೆರವೇರಿಸಲಾಯಿತು.

ನಿರ್ಮಾಣ್ ಶೆಲ್ಟರ್ಸ್ ವತಿಯಿಂದ ಬನ್ನೇರುಘಟ್ಟ ಸಮೀಪದ ನಿಸರ್ಗ ಬಡಾವಣೆಯಲ್ಲಿ ಬುದ್ಧ ಪೂರ್ಣಿಮೆಯ ಪ್ರಯುಕ್ತ ವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಭಗವಾನ್ ಬುದ್ಧ ಬಡಾವಣೆಯಲ್ಲಿರುವ ಬುದ್ಧನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಯಿತು.

'ಬುದ್ಧನು ಅಹಿಂಸೆಯ ಪ್ರತಿಪಾದಕನಾಗಿದ್ದ. ಆತನ ತತ್ವಗಳನ್ನು ಎಲ್ಲರೂ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು' ಎಂದು ನಿರ್ಮಾಣ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ವಿ.ಲಕ್ಷ್ಮಿನಾರಾಯಣ್ ತಿಳಿಸಿದರು. ರಂಗೋತ್ರಿ ಸಾಂಸ್ಕೃತಿಕ ಸಂಸ್ಥೆ ಹಾಗೂ ನ್ಯೂ ಹಾರ್ಡ್‌ವಿಕ್ ಇಂಡಿಯನ್‌ಸ್ಕೂಲ್ (ಎನ್‌ಎಚ್‌ಐಎಸ್) ಸಹಯೋಗದಲ್ಲಿ ಕೊಡಿಗೆಹಳ್ಳಿಯಲ್ಲಿ ಬುದ್ಧ ಜಯಂತಿ ಆಚರಿಸಲಾಯಿತು.

ನಿರ್ಮಾಣ್ ಶೆಲ್ಟರ್ಸ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ವಿ.ಲಕ್ಷ್ಮಿನಾರಾಯಣ್ ಅವರು ಬುದ್ಧನ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ನಿಪ್‌ಮ್ಯಾಟ್ ವಿಶ್ವಸ್ಥರಾದ ಜೆ.ವಿ.ಶಿವರಾಮ ರೆಡ್ಡಿ, ಮೇಜರ್ ಗುರುಪ್ರಸಾದ್, ಕೃಷ್ಣಾರೆಡ್ಡಿ, ಮೈಕೊ ನಾಗರಾಜ್, ಹರ್ಷ ಆನಂದಮೂರ್ತಿ ಇದ್ದರು.

ರಂಗೋತ್ರಿ ಸಾಂಸ್ಕೃತಿಕ ಸಂಸ್ಥೆ ಹಾಗೂ ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್ (ಎನ್‌ಎಚ್‌ಐಎಸ್) ಸಹಯೋಗದಲ್ಲಿ ಕೊಡಿಗೆಹಳ್ಳಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಎನ್‌ಎಚ್‌ಐಎಸ್ ಸ್ಥಾಪಕ ವಿ.ಕೃಷ್ಣಮೂರ್ತಿ, ಬೆಂಗಳೂರು ವಿಶ್ವವಿದ್ಯಾಲಯದ ಹೊನ್ನು ಸಿದ್ಧಾರ್ಥ , ಶಿಕ್ಷಣ ತಜ್ಞ ಸಿ.ಎಚ್. ನಾಯಕ್, ರಂಗೋತ್ರಿಯ ಕೆ.ಎಚ್.ಕುಮಾರ್, ಗಾಯಕ ಸಂತವಾಣಿ ಪಿ.ಸುಧಾಕರ್ ಅವರು ಬುದ್ಧನ ಮೂರ್ತಿಗೆ ಪುಷ್ಪಾರ್ಚನೆ ಮಾಡಿದರು

ಸ್ವಕುಳಸಾಳಿ ಸೊಸೈಟಿ: ವೆಂಕಟೇಶ್ ಅಧ್ಯಕ್ಷ

ಬೆಂಗಳೂರು: ಸಂಯುಕ್ತ ಸ್ವಕುಳಸಾಳಿ ಕ್ರೆಡಿಟ್ ಕೊ–ಆಪರೇಟಿವ್ ಸೊಸೈಟಿಯ ನೂತನ ಅಧ್ಯಕ್ಷರಾಗಿ ವೆಂಕಟೇಶ್ ಎಂ.ಚಿಲ್ಲಾಳ್ ಆಯ್ಕೆಯಾಗಿದ್ದಾರೆ.

ಉಳಿದ ಪದಾಧಿಕಾರಿಗಳು: ಉಪಾಧ್ಯಕ್ಷ – ಮಲ್ಲಿಕಾರ್ಜುನ ಬಿ.ಧೋತ್ರೆ, ನಿರ್ದೇಶಕರು– ಚಂದ್ರಕಾಂತ್ ಎನ್.ಭಂಡಾರೆ, ಪ್ರದೀಪ್ ರೋಖಡೆ,ಗುರುನಾಥ್ ಪಾಣಿಭಾತೆ, ಜಿಹ್ವಾಜಿ ಭಂಡಾರೆ, ರಾಮಕೃಷ್ಣ ಪಾಡಮುಖಿ, ಗುರುರಾಜ್ ಜುಜಾರೆ, ವಿರೂಪಾಕ್ಷ ಗೂಗಲ್, ಚನ್ನಬಸಪ್ಪ, ಸುನೀತಾ ಪಾಡಮುಖಿ ಹಾಗೂ ಮೀನಾಕ್ಷಿ ದಿವಟೆ.

ಕೆಪಿಟಿಸಿಎಲ್: ಎ.ಇ ಹುದ್ದೆ ಬಡ್ತಿ ಪ್ರಕಟಣೆಗೆ ತಡೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ (ಕೆಪಿಟಿಸಿಎಲ್) ಸಹಾಯಕ ಎಂಜಿನಿಯರ್ ಹುದ್ದೆಗೆ ಬಡ್ತಿಯ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆಗೆ ಹೈಕೋರ್ಟ್ ತಾತ್ಕಾಲಿಕ ನಿರ್ಬಂಧ ವಿಧಿಸಿದೆ.

ಸಹಾಯಕ ಹುದ್ದೆಯ ಬಡ್ತಿಗೆ ಕೆಪಿಟಿಸಿಎಲ್ ಪ್ರಕಟಿಸಿದ್ದ ಜ್ಯೇಷ್ಠತಾ ಪಟ್ಟಿಪ್ರಶ್ನಿಸಿ ಕೆಪಿಟಿಸಿಎಲ್ ಹೆಚ್ಚುವರಿ ಸಹಾಯಕ ಎಂಜಿನಿಯರ್ ಬಿ.ಸುಮಾ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ವಿಲೇವಾರಿ ಮಾಡಿದೆ.

'ಸಂಭಾವ್ಯ ಜ್ಯೇಷ್ಠತಾ ಪಟ್ಟಿಗೆ ಅರ್ಜಿದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಗಣಿಸಬೇಕು. ನಂತರ ಅರ್ಜಿದಾರರು ಹೈದರಾಬಾದ್ ಕರ್ನಾಟಕ ಪ್ರದೇಶದ ಮೀಸಲು ಕೋಟಾದಡಿ ಸಹಾಯಕ ಎಂಜಿನಿಯರ್ ಹುದ್ದೆ ಬಡ್ತಿ ಪಡೆಯಲು ಅರ್ಹರಾಗಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಪರಿಶೀಲಿಸಿ ನಾಲ್ಕು ವಾರಗಳಲ್ಲಿ ಸೂಕ್ತ ಅದೇಶ ಹೊರಡಿಸಬೇಕು. ಅಲ್ಲಿಯವರಿಗೆ ಸಹಾಯಕ ಎಂಜಿನಿಯರ್ ಹುದ್ದೆಗೆ ಬಡ್ತಿಯ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಬಾರದು' ಎಂದು ನ್ಯಾಯಪೀಠ ಕೆಪಿಟಿಸಿಎಲ್‌ಗೆ ನಿರ್ದೇಶಿಸಿದೆ.

'ಹೈದರಾಬಾದ್ ಕರ್ನಾಟಕ ಪ್ರದೇಶದ ಮೀಸಲು ಕೋಟಾದಡಿ ನಾನು ಸಹಾಯಕ ಎಂಜಿನಿಯರ್ ಹುದ್ದೆ ಬಡ್ತಿ ಪಡೆಯಲು ಅರ್ಹಳಿದ್ದೇನೆ ಎಂಬ ನನ್ನ ಮನವಿಯನ್ನು ಕೆಪಿಟಿಸಿಎಲ್ ಪರಿಗಣಿಸಿಲ್ಲ' ಎಂದು ಸುಮಾ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕ್ಷೇತ್ರ ಮರುವಿಂಗಡಣೆ: ಹೇಳಿಕೆ ನೀಡದಂತೆ ಒಐಸಿಗೆ ಎಚ್ಚರಿಕೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಕೈಗೊಳ್ಳಲಾಗಿರುವ ಕ್ಷೇತ್ರ ಮರುವಿಂಗಡನೆ ಯೋಜನೆ ಕುರಿತು ಅನವಶ್ಯಕ ಹೇಳಿಕೆಗಳನ್ನು ನೀಡದಂತೆ ಆರ್ಗನೈಸೇಷನ್ ಆಫ್ ಇಸ್ಲಾಮಿಕ್ ಕೋಆಪರೇಷನ್ (ಒಐಸಿ) ಸಂಘಟನೆಗೆ ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ. ಪಾಕಿಸ್ತಾನವನ್ನು ಸೂಚ್ಯವಾಗಿ ಉಲ್ಲೇಖಿಸಿದ ಸರ್ಕಾರ, 'ಒಂದು ದೇಶದ ಪರವಾಗಿ ಕೋಮುವಾದಿ ಕಾರ್ಯಸೂಚಿ ರೂಪಿಸುವುದರಿಂದ ಹಿಂದೆ ಸರಿಯಿರಿ' ಎಂದು ಒಐಸಿಗೆ ಹೇಳಿದೆ.

ಈ ಕುರಿತು ಮಾಹಿತಿ ನೀಡಿರುವ ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಾಮ್ ಬಾಗ್ಚಿ ಅವರು, 'ಜಮ್ಮು ಮತ್ತು ಕಾಶ್ಮೀರದಲ್ಲಿ ಕೈಗೊಳ್ಳಲಾಗಿರುವ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ಕುರಿತು ಕೇಂದ್ರ ಸರ್ಕಾರದ ವಿರುದ್ಧ ಒಐಸಿ ನೀಡಿರುವ ಹೇಳಿಕೆಗಳನ್ನು ನಿರಾಕರಿಸಲಾಗಿದೆ' ಎಂದಿದ್ದಾರೆ.

ಕ್ಷೇತ್ರಗಳಮರುವಿಂಗಡಣೆಮಾಡುವ ಪ್ರಕ್ರಿಯೆಯು ಜಮ್ಮು ಮತ್ತು ಕಾಶ್ಮೀರ ಜನರ ಹಕ್ಕುಗಳ ಉಲ್ಲಂಘನೆ ಆಗುತ್ತದೆ ಎಂದು ಒಐಸಿ ಹೇಳಿಕೆ ನೀಡಿತ್ತು.

ಎಲಿಜಬೆತ್ ಬೋರ್ನ್ ಫ್ರಾನ್ಸ್‌ನ ನೂತನ ಪ್ರಧಾನಿ

ಪ್ಯಾರಿಸ್ (ಎಪಿ): ಫ್ರಾನ್ಸ್‌ನ ನೂತನ ಪ್ರಧಾನಿಯಾಗಿ ಎಲಿಜಬೆತ್ ಬೋರ್ನ್ ಅವರು ಸೋಮವಾರ ನೇಮಕಗೊಂಡಿದ್ದು, ದೇಶದಲ್ಲಿ ಈ ಹುದ್ದೆಯನ್ನು ಅಲಂಕರಿಸಿದ ಎರಡನೇ ಮಹಿಳೆಯಾಗಿದ್ದಾರೆ.

61 ವರ್ಷದ ಬೋರ್ನ್ ಅವರು ಜೀನ್ ಕ್ಯಾಸ್ಟೆಕ್ಸ್ ಅವರ ಉತ್ತರಾಧಿಕಾರಿಯಾಗಿದ್ದಾರೆ. ಮುಂದಿನ ದಿನಗಳಲ್ಲಿ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಮತ್ತು ಬೋರ್ನ್ ಪೂರ್ಣ ಪ್ರಮಾಣದ ಸರ್ಕಾರವನ್ನು ನೇಮಿಸುವ ನಿರೀಕ್ಷೆಯಿದೆ. ಬೋರ್ನ್ ಅವರು 2020 ರಿಂದ ಮ್ಯಾಕ್ರನ್ ಅವರ ಹಿಂದಿನ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಅದಕ್ಕೂ ಮೊದಲು ಅವರು ಸಾರಿಗೆ ಸಚಿವರಾಗಿದ್ದರು.

ಬಿಡಿಎ: ಶೇ 50ರಷ್ಟು ಶುಲ್ಕ ಕಡಿತಕ್ಕೆ ಶೀಘ್ರ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ಮನೆಗಳನ್ನು ಸಕ್ರಮಗೊಳಿಸಲು ವಿಧಿಸುವ ಶುಲ್ಕವನ್ನು ಶೇ 50ರಷ್ಟು ಕಡಿಮೆ ಮಾಡುವ ಪ್ರಸ್ತಾವವನ್ನು ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಬಿಡಿಎ ಭೂಸ್ವಾಧೀನ ನಡೆಸಲಾದ ಪ್ರದೇಶಗಳಲ್ಲಿ 95 ಸಾವಿರ ಮನೆಗಳನ್ನು ಅಗತ್ಯ ಅನುಮತಿ ಪಡೆಯದೆಯೇ ನಿರ್ಮಾಣ ಮಾಡಲಾಗಿದೆ. ಈ ಮನೆಗಳನ್ನು ಮಾಲೀಕರು ಬಿಡಿಎಯಲ್ಲಿ ನೋಂದಣಿ ಮಾಡಿಸಿಕೊಂಡಿಲ್ಲ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರ ಬಿಡಿಎ ಕಾಯ್ದೆಗೆ ತಿದ್ದುಪಡಿ ತಂದು ಸೆಕ್ಷನ್ 38ಡಿ ಅಡಿಯಲ್ಲಿ ಈ ಮನೆಗಳನ್ನು ಸಕ್ರಮಗೊಳಿಸಲು ಅನುವು ಮಾಡಿಕೊಟ್ಟಿತ್ತು' ಎಂದರು.

'ಈ ಹಿಂದೆ 20x30 ಅಡಿ ವಿಸ್ತೀರ್ಣದ ನಿವೇಶನಕ್ಕೆ ಮಾರ್ಗಸೂಚಿ ದರದ ಶೇ 10ರಷ್ಟು, 30x40 ಅಡಿ ವಿಸ್ತೀರ್ಣದ ನಿವೇಶನಗಳಿಗೆ ಶೇ 20ರಷ್ಟು ಮತ್ತು 50x80 ಅಡಿ ವಿಸ್ತೀರ್ಣದ ನಿವೇಶನಗಳಿಗೆ ಶೇ 50ರಷ್ಟು ಶುಲ್ಕವನ್ನು ಪಾವತಿಸಿ ಸಕ್ರಮ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಈ ಶುಲ್ಕವು ದುಬಾರಿಯಾಗಿದೆ ಎಂದು ದೂರಿದ್ದ ಫಲಾನುಭವಿಗಳು ಅದನ್ನು ಕಡಿಮೆ ಮಾಡುವಂತೆ ಕೋರಿದ್ದರು. ಆ ಪ್ರಕಾರ ಈ ಹಿಂದೆ ನಿಗದಿಪಡಿಸಿದ್ದ ಶುಲ್ಕದ ಪ್ರಮಾಣವನ್ನು ಶೇ 50ರಷ್ಟು ಕಡಿಮೆ ಮಾಡಲು ಪ್ರಾಧಿಕಾರದ ಸಭೆಯಲ್ಲಿ ನಿರ್ಧಾರ ಮಾಡಲಾಗಿದ್ದು, ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ' ಎಂದರು.

'ಅಕ್ರಮವಾಗಿ ನಿರ್ಮಾಣವಾದ ಕಟ್ಟಡಗಳನ್ನು ಸಕ್ರಮಗೊಳಿಸಲು ವಿಧಿಸುವ ಶುಲ್ಕದಿಂದ ಬಿಡಿಎಗೆ ಸುಮಾರು ₹ 10 ಸಾವಿರ ಕೋಟಿ ವರಮಾನ ಬರುವ ನಿರೀಕ್ಷೆ ಇದೆ' ಎಂದರು.

ಚಿತ್ರಾವಳಿ

ನೆಲಗದರನಹಳ್ಳಿ ಗೃಹಲಕ್ಷ್ಮಿ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಪ್ಯಾರಗಾನ್ ಸಂಸ್ಥೆಯ ಸಹಯೋಗದಲ್ಲಿ ನಿರ್ಮಿಸಿರುವ ನೂತನ ಕೊಠಡಿಗಳನ್ನು ಸೋಮವಾರ ಉದ್ಘಾಟಿಸಲಾಯಿತು. ಶಾಸಕ ಆರ್.ಮಂಜುನಾಥ್, ಜೋಸೆಫ್, ಗೋಪಾಲಕೃಷ್ಣ, ರಾಮಣ್ಣ, ಚಿಕ್ಕ ಮಂಜುನಾಥ್, ಶಾಲಾ ಶಿಕ್ಷಕರು ಇದ್ದಾರೆ.

ಅಖಿಲ ಕರ್ನಾಟಕ ಮಕ್ಕಳ ಕೂಟವು ನಗರದಲ್ಲಿ ಆಯೋಜಿಸಿದ್ದ ಬೇಸಿಗೆ ಶಿಬಿರದ ಸಮಾರೋಪದಲ್ಲಿ ಶಿಬಿರಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮಕ್ಕಳ ಕೂಟದ ಗೌರವಾಧ್ಯಕ್ಷ ಕೆ.ಮೋಹನ್ ದೇವ್ ಆಳ್ವ, ಸಮಾಜ ಸೇವಕ ಮಹೇಂದ್ರ ಮುನೋತ್ ಹಾಗೂ ಇತರರು ಇದ್ದಾರೆ.

ಬೆಂಗಳೂರಿನ ರಾಜಭವನದ ಗೋಶಾಲೆಗೆ ಬೀದರ್ ಜಿಲ್ಲೆಯ ದೇವಣಿ ತಳಿಯ ಹಸುಗಳು ಸೋಮವಾರ ಸೇರ್ಪಡೆಯಾಗಿವೆ. ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಗೋವುಗಳಿಗೆ ಪೂಜೆ ಮಾಡಿ ಹಣ್ಣು ತಿನ್ನಿಸಿ ಬರ ಮಾಡಿಕೊಂಡರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED, NURSERY, PRIMARY, HIGH SCHOOL TEACHERS for English Medium School in Hanumanthnagar. Call: 26604512 (between 10- 2)

Marketing & Sales

EXCELLENT Income Opportunity. Become an Insurance Advisor for a reputed Indian Insurance Company and earn Salary + incentives. Call 9663295647 for a meeting conducted by authorised personnel of the Company.

Manager

REQUIRE RESTAURANT Manager in Koramangala. Contact 9810767062 or mail at drona@thedonercompany.in

Wanted

GALAXY PARTTIME. Join work with college girl. Housewife. Teachers. Doctors. Earn (15000-25000). 7043061715, 9557041436.

PERSONAL

Change of Name

14816864L HAV/MT CHHAGAN SINGH 2ATC My Son Name records SUNIL SINGH RATHOR Instead of SUNIL SINGH RATHORE Notary KV Mani, Bangalore

WE, SARVOTTAM A. Kulkarni and Uma S. Kulkarni Residing at Flat SF-3(203), KVR Lotus Apartment Hulimavu Bannerghatta Road, Bangalore- 560076. have changed our minor Son's name from SHREEVATSA to SHREEVATSA. S. KULKARNI vide affidavit dated 14.05.2022 before notary Jain Swarnamala, Bangalore.

I, SHIKHA Naresh Jain W/o Vishal P Jain, R/at #1561/30, 7th Main 6th Cross RPC Layout Bangalore-560104, Have Changed My Name to Shikha Jain Vide Affidavit Dated 12-05-2022, Before Notary M K Devaki, Bangalore

14816833L HAV/MT RAJESH KUMAR TIWARI 2ATC My Mother Name records SAYAM KALI Instead of SHYAMKALI TIWARI Notary KV Mani, Bangalore

14846212F NK VITTAL KAMAKAR 2ATC My Son Name records GAJANAN Instead of GAJANAN VITTAL KAMKAR Notary KV Mani, Bangalore

I. MOHAMMED ZAINUDDIN FAROOQI residing at No.27, 2nd Floor, 2nd Cross, Defence Colony, Adarshnagar R.T.Nagar Post, Bangalore-560032, have changed my name to ZAINUDDIN FAROOQI MOHAMMED, vide affidavit dated- 16-05-2022 before Notary Sivakumara.M.N. Bangalore.

I, ASHA V GONDYAL, residing at No. 62 7th cross L.N. Puram, Bangalore 560021, have changed my name to ASHA DHARANISH R., vide affidavit dated 23.04.2022 before Notary T. Mallikarjuna, Bangalore. Henceforth I shall be known as ASHA DHARANISH R only

LAXMI W/O 14846212F NK VITTAL KAMAKAR R/A YARAMAL ROAD VADGAON BELAGAVI, my name LAXMI to LAXMI VITTAL KAMKAR Notary KV Mani, Bangalore

SUNANDA MAHADEV SHIVANNAVAR W/O 14845026Y HAV SURESH UPPAR R/A TEGGI BILAGI BAGALKOT my name SUNANDA MAHADEV SHIVANNAVAR to SUNANDA UPPAR Notary KV Mani, Bangalore

14848587Y HAV/CLK SREENIVASULU CHIKKUDU 2ATC My Mother Name records ALLURAMMA Instead of CHIKKUDU ALLURAMMA Notary KV Mani, Bangalore

6492798H HAV MANOJ PRATAP SINGH 2ATC My Son Name records MANMIT PRATAP SINGH Instead of MANMEET PRATAP SINGH Notary KV Mani, Bangalore

KOMAL D/O JC-673738X-Nb/sub- ASHOK KUMAR R/a Kharkhari (131), Baslambi, Gurgaon, Haryana changed name from KOMAL to KOMAL YADAV notary K.V.Mani Bangalore.

CHANDA DEVI M/o 14859708P- Sep/MT- UPENDRA KUMAR R/a Lakdiyamau, Naimisaradya, Naimisharanya, Sitapur, Misrikh, UP changed name from CHANDA DEVI to CHANDA notary K.V.Mani Bangalore.

CHANDA DEVI M/o 4205127P-NK- BHUPENDRA KUMAR R/a Lakdiyamau, Naimisaradya, Naimisharanya, Sitapur, Misrikh, UP changed name from CHANDA DEVI to CHANDA notary K.V.Mani Bangalore.

14816833L HAV/MT RAJESH KUMAR TIWARI 2ATC My Father Name records SHIYA SHARAN TIWARI Instead of SHIYASARAN TIWARI Notary KV Mani, Bangalore

6394300F HAV/CLK TAPAN MANDAL 2ATC My Mother Name records MANI MALLA MANDAL Instead of MONIMALA MONDAL Notary KV Mani, Bangalore

14846212F NK VITTAL KAMAKAR 2ATC My Mother Name records SANTANA Instead of SHANTAVVA KUBENDR KAMAKAR Notary KV Mani, Bangalore

SARASWATI SANGRAM W/O 6493242L HAV SANGRAM SINGH R/A JIND KIGADIA KANAWAR BHIND MP, my name SARASWATI SANGRAM to SARASWATI DEVI Notary KV Mani, Bangalore

Lost

DOCUMENTS LOST
Original title deeds alongwith connected papers in respect of property no.99/100 "Vardhini" Annapoorneswari Layout 2nd Main Chunchaghatta – Kothanur Road Ward 195 Sy no 146/1 Bengaluru 560062 with boundary in East Site no 98, West Private Property, North Private Property, South Road which were deposited by me with SBI Jayanagar II Bloack Branch Patalamma Road for the purpose of availing loan have been lost by them.
Finders please contact: 99005 20130

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
ಪ್ರಜಾವಾಣಿ
EFFECTIVE FROM May 1, 2022
BOOK YOUR CLASSIFIEDS ADVERTISEMENT
DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿಕೆ

'ಮಂದಿರವಾದರೆ ಹಿಂದೂಗಳಿಗೆ, ದರ್ಗಾವಾದರೆ ಮುಸ್ಲಿಮರಿಗೆ'

ಪ್ರಜಾವಾಣಿ ವಾರ್ತೆ

ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

ಉಡುಪಿ: 'ಹಿಂದೆ ದೇವಾಲಯಗಳನ್ನು ಖರೀದಿಸಿ ಮಸೀದಿಗಳನ್ನಾಗಿ ಪರಿವರ್ತಿಸಿದ್ದರೆ ಅದಕ್ಕೆ ಆಕ್ಷೇಪವಿಲ್ಲ. ಆದರೆ, ದೇವಾಲಯಗಳನ್ನು ಅತಿಕ್ರಮಿಸಿ ಮಸೀದಿಗಳನ್ನಾಗಿ ಪರಿವರ್ತಿಸಿದ್ದರೆ ಅವುಗಳ ಮರು ಪರಿವರ್ತನೆ 'ಅನಿವಾರ್ಯ' ಎಂದು ಪೇಜಾವರ ಮಠದ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿ, 'ಹಿಂದೆ ಆಗಿಹೋದ ಘಟನೆಗಳ ಪ್ರಕರಣಗಳಲ್ಲಿ ನ್ಯಾಯಾಲಯ ನೀಡುವ ತೀರ್ಪನ್ನು 'ಹಿನ್ನಡೆ' ಎಂದು ಭಾವಿಸದೆ, ಪ್ರಯೋಜನವಾಗಿ ಪಾಲಿಸಬೇಕು. ವಿವಾದಿತ ಜಾಗ ಪೂಜಾ ಮಂದಿರ ಎಂದು ಸಾಬೀತಾದರೆ ಹಿಂದೂಗಳಿಗೆ ಬಿಟ್ಟುಕೊಡಬೇಕು. ದರ್ಗಾ ಎಂಬುದು ಸಾಬೀತಾದರೆ ಮುಸ್ಲಿಮರಿಗೆ ಬಿಟ್ಟುಕೊಡಬೇಕು. ಧರ್ಮ ಸಂಘರ್ಷಕ್ಕಿಂತಲೂ ಎಲ್ಲರೂ ಶಾಂತಿ, ಸೌಹಾರ್ದದಿಂದ ಬದುಕಬೇಕು' ಎಂದು ಸಲಹೆ ನೀಡಿದರು.

ರಾತ್ರಿ 10ರಿಂದ ಬೆಳಿಗ್ಗೆ 6 ರವರೆಗೆ ಧ್ವನಿವರ್ಧಕಗಳ ಬಳಕೆ ನಿರ್ಬಂಧಿಸಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಎಲ್ಲರೂ ಪಾಲಿಸಬೇಕು. ವಿಶೇಷ ದಿನಗಳಲ್ಲಿ ಮಾತ್ರ ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆದು ಧ್ವನಿವರ್ಧಕ ಬಳಸಬೇಕು ಎಂದು ಸ್ವಾಮೀಜಿ ಹೇಳಿದರು.

ಸಮಾಜದಲ್ಲಿ ಶಾಂತಿ, ನೆಮ್ಮದಿ ಉಳಿಯಬೇಕಾದರೆ ಸರ್ಕಾರ, ಸಂವಿಧಾನ, ಸುಪ್ರೀಂ ಕೋರ್ಟ್ ನೀಡುವ ಆದೇಶ, ನಿರ್ದೇಶನ, ನೀತಿ, ನಿಯಮಗಳಿಗೆ ಬದ್ಧರಾಗಿ ನಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಸತ್ಯಾಸತ್ಯತೆ ಪರಿಶೀಲಿಸಲು ಅಷ್ಟಮಂಗಲ ಪ್ರಶ್ನೆ

ಮಂಗಳೂರು: ತಾಲ್ಲೂಕಿನ ಮಳಲಿಯ ಮಸೀದಿಯಲ್ಲಿ ದೇವಾಲಯದ ಮಾದರಿ ಪತ್ತೆಯಾಗಿರುವ ಹಿನ್ನೆಲೆಯಲ್ಲಿ, ಸತ್ಯಾಸತ್ಯತೆ ಪರಿಶೀಲಿಸಲು ವಿಶ್ವ ಹಿಂದೂ ಪರಿಷತ್ ಅಷ್ಟಮಂಗಲ ಪ್ರಶ್ನಾ ಚಿಂತನೆಗೆ ಮುಂದಾಗಿದೆ.

ಗಂಜಿಮಠದ ಮಳಲಿಯ ದರ್ಗಾದಲ್ಲಿ ಇತ್ತೀಚೆಗೆ ದೇವಸ್ಥಾನ ಮಾದರಿಯ ಕಟ್ಟಡ ಪತ್ತೆಯಾಗಿತ್ತು. ವಿಶ್ವ ಹಿಂದೂ ಪರಿಷತ್ ಕೇರಳದ ಪುರೋಹಿತರನ್ನು ಕರೆಸಲಿದ್ದು, ಅವರ ನೇತೃತ್ವದಲ್ಲಿ ಅಷ್ಟಮಂಗಲಪ್ರಶ್ನೆಗೆ ಚಿಂತನೆ ನಡೆಸಿದೆ. ಮಸೀದಿ ಜಾಗದಲ್ಲಿ ದೇವಾಲಯ ಇತ್ತು ಎಂಬುದು ಹಿಂದೂ ಸಂಘಟನೆಗಳ ವಾದವಾಗಿದ್ದು, ಅಷ್ಟಮಂಗಲ ಪ್ರಶ್ನೆ ಮೂಲಕ ರಹಸ್ಯ ಪತ್ತೆ ಮಾಡುವ ಉದ್ದೇಶವಿದೆ. ಧಾರ್ಮಿಕ ಸಾಕ್ಷ್ಯ ಪತ್ತೆ ಬಳಿಕ ಐತಿಹಾಸಿಕ ಪುರಾವೆಗಳನ್ನು ಸಂಗ್ರಹಿಸಲು ಯೋಜನೆ ರೂಪಿಸಿದ್ದು, ಬಳಿಕ ದಾಖಲೆ ಸಹಿತ ಕಾನೂನು ಹೋರಾಟಕ್ಕೆ ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಅಷ್ಟಮಂಗಲ ಪ್ರಶ್ನೆ ಜ್ಯೋತಿಷ್ಯದಲ್ಲಿ ನಿಗೂಢ ಶಾಸ್ತ್ರವಾದದ್ದು, ದೀರ್ಘ ಕಾಲದ ಸಮಸ್ಯೆಗಳಿಗೆ, ದೇವರ ವಿಷಯಗಳಿಗೆ, ಗುಪ್ತ ವಿಚಾರ ತಿಳಿಯುವುದಕ್ಕೆ ಮಾತ್ರ ಇದನ್ನು ಬಳಸಲಾಗುತ್ತದೆ. ಮಸೀದಿ ಸಮೀಪದ ಯಾವುದಾದರೊಂದು ಜಾಗದಲ್ಲಿ ಪ್ರಕ್ರಿಯೆ ನಡೆಸಿ, ಜಾಗದ ಸ್ಥಳ ಪುರಾಣ, ಧಾರ್ಮಿಕ ಇತಿಹಾಸಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು ಇದರ ಉದ್ದೇಶ.

ಮುಂದಿನ ವಾರ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಮಳಲಿ ಮಸೀದಿಗೆ ಸಂಬಂಧಿಸಿದಂತೆ ಮಹತ್ವದ ಸಭೆ ನಡೆಯಲಿದೆ. ಸದ್ಯ ನವೀಕರಣ ಕಾಮಗಾರಿಗೆ ನಗರದ ನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ಮಸೀದಿಯಲ್ಲಿ ಪೂಜೆ: ಅರ್ಜಿ ಕೊಡಲಿ– ಸಿ.ಎಂ

ಮಂಡ್ಯ: 'ಶ್ರೀರಂಗಪಟ್ಟಣದ ಜಾಮಿಯಾ ಮಸೀದಿಯಲ್ಲಿ ಆಂಜನೇಯನಿಗೆ ಪೂಜೆ ಸಲ್ಲಿಸುವ ಸಂಬಂಧ ಯಾರು ಅರ್ಜಿ ಕೊಡುತ್ತಾರೋ ಕೊಡಲಿ, ಎಲ್ಲವನ್ನೂ ಕಾನೂನು ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಾಗಮಂಗಲ ತಾಲ್ಲೂಕು ಬಿ.ಜಿ.ನಗರದ ಆದಿಚುಂಚನಗಿರಿ ವೈದ್ಯಕೀಯ ಕಾಲೇಜಿನಲ್ಲಿ ಸೋಮವಾರ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡ ನಂತರ ಸುದ್ದಿಗಾರರ ಜೊತೆ ಮಾತನಾಡಿದರು.

'ಹಿಜಾಬ್, ಆಜಾನ್ ಗೊಂದಲಗಳ ಹಿಂದೆ ಕಾಂಗ್ರೆಸ್ ಮಿತ್ರರ ಕೈವಾಡವಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಕಾಂಗ್ರೆಸ್ ಮುಖಂಡರು ತಮ್ಮ ಲೋಪ ಮುಚ್ಚಿಕೊಳ್ಳಲು ಬೇಕಾದ ರೀತಿಯಲ್ಲಿ ಹೇಳಿಕೆ ಕೊಡುತ್ತಿದ್ದಾರೆ. ಎಲ್ಲವನ್ನೂ ಕಾನೂನುಬಾಹಿರವಾಗಿ ಮಾಡಿ ಇನ್ನೊಬ್ಬರ ಮೇಲೆ ಗೂಬೆ ಕೂರಿಸುವ ಕಲೆ ಕಾಂಗ್ರೆಸ್ ಮುಖಂಡರಿಗೆ ರೂಢಿಯಾಗಿದೆ' ಎಂದರು.

ಶಿರಹಟ್ಟಿ ಮಹಾರಥೋತ್ಸವ

ಗದಗ ಜಿಲ್ಲೆ ಶಿರಹಟ್ಟಿಯ ಫಕೀರೇಶ್ವರರ ಮಹಾ ರಥೋತ್ಸವ ಸೋಮವಾರ ಅಪಾರ ಭಕ್ತ ಸಮೂಹದ ಮಧ್ಯೆ ಸಂಭ್ರಮದಿಂದ ನಡೆಯಿತು

– ಪ್ರಜಾವಾಣಿ ಚಿತ್ರ/ ನಿಂಗರಾಜ ಹಮ್ಮಿಗಿ

ರಾಷ್ಟ್ರಧ್ವಜ: ಧಮ್ಮಚಕ್ರ ಬದಲಾವಣೆಗೆ ಯತ್ನ– ಖರ್ಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ವಿಶ್ವದ ಸಹಿಷ್ಣುತೆಗೆ ಗೌತಮ ಬುದ್ಧ ಕೊಟ್ಟ ಕಾಣಿಕೆ ದೊಡ್ಡದು. ಆ ಕಾರಣಕ್ಕಾಗಿಯೇ ನಮ್ಮ ರಾಷ್ಟ್ರಧ್ವಜದಲ್ಲಿ 'ಧಮ್ಮಚಕ್ರ'ಕ್ಕೂ ಸ್ಥಾನ ನೀಡಲಾಗಿದೆ. ಆದರೆ, ಕೆಲವರು ಅದನ್ನೂ ಬದಲಿಸುವ ಯತ್ನ ನಡೆಸಿದ್ದಾರೆ' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಇಲ್ಲಿನ ಬುದ್ಧ ವಿಹಾರದಲ್ಲಿ ಸೋಮವಾರ ನಡೆದ ಬುದ್ಧ ಪೂರ್ಣಿಮೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ದೇಶದಲ್ಲಿ ಈಗ ಅಸಮಾನತೆ, ಅಸ್ಪೃಶ್ಯತಾ ನಡೆಗಳನ್ನು ಬದಲಾಯಿಸಬೇಕಿದೆ. ಅದನ್ನು ಬಿಟ್ಟು ಬೇರೆ ಏನೇನೋ ಬದಲಾಯಿಸಲು ಹೊರಟಿದ್ದಾರೆ. ರಾಷ್ಟ್ರಧ್ವಜದಲ್ಲಿ ಧಮ್ಮಚಕ್ರ (ಅಶೋಕ ಚಕ್ರ) ಇರುವುದರಿಂದ ಯಾರಿಗೆ ಏನು ಕೆಟ್ಟದ್ದಾಗಿದೆ ಹೇಳಿ' ಎಂದೂ ಪ್ರಶ್ನಿಸಿದರು.

ಮಲ್ಲಿಕಾರ್ಜುನ ಖರ್ಗೆ

'ಭಾರತದಲ್ಲಿ ಧರ್ಮ ಸಹಿಷ್ಣುತೆ ಎಷ್ಟಿದೆ ಎಂಬುದನ್ನು ನೋಡಬೇಕೆಂದರೆ ನೀವು ಬುದ್ಧನನ್ನು ನೋಡಿ' ಎಂದು ಸ್ವಾಮಿ ವಿವೇಕಾನಂದರು ಶಿಕಾಗೋ ಸರ್ವ ಧರ್ಮ ಸಮ್ಮೇಳನದಲ್ಲಿ ಹೇಳಿದ್ದರು. ಬುದ್ಧ ತಾನು ವಿಷ ಕುಡಿದು ಜೀವತೆತ್ತರೂ ಇನ್ನೊಬ್ಬರನ್ನು ಬದುಕಿಸಿದ. ಅಂಥ ತ್ಯಾಗ, ಸಹಿಷ್ಣುತೆ ನಮ್ಮಲ್ಲಿದೆ ಎಂದು ವಿವೇಕಾನಂದರು ಬಿಂಬಿಸಿದರು. ಆದರೆ, ಶಿಕಾಗೊ ಭಾಷಣದ ಬಗ್ಗೆ ಮಾತನಾಡುವವರೆಲ್ಲ ಈ ಅಂಶವನ್ನು ಮರೆಮಾಚುತ್ತಲೇ ಬಂದಿದ್ದಾರೆ. ಒಂದೆಡೆ ದೇವಸ್ಥಾನದ ಒಳಗೆ ಹೋಗಲು ಬಿಡುವುದಿಲ್ಲ. ಇನ್ನೊಂದೆಡೆ ನಮ್ಮ ಧರ್ಮ– ನಮ್ಮ ಧರ್ಮ ಎಂದು ಬಡಿದುಕೊಳ್ಳುತ್ತಾರೆ. ಧರ್ಮ ಎಂಬುದು ಇವರೊಬ್ಬರ ಹಿತಕ್ಕಾಗಿ ಮಾಡಿದ್ದಲ್ಲ, ಅದು ಎಲ್ಲರ ಉದ್ಧಾರಕ್ಕಾಗಿ ಇದೆ. ಬೇರೊಬ್ಬರ ಧರ್ಮವನ್ನು ಟೀಕಿಸುವ ಬದಲು ನಮ್ಮ ಧರ್ಮದ ತತ್ವಗಳನ್ನು ನಾವು ಸರಿಯಾಗಿ ಪಾಲಿಸಿದರೆ ಸಾಕು' ಎಂದು ಸಲಹೆ ನೀಡಿದರು.

'ದೇಶದಲ್ಲಿದ್ದ ಬಹಳಷ್ಟು ಬುದ್ಧ ವಿಹಾರಗಳನ್ನು ಮುಚ್ಚಿ, ಅದರೊಳಗೆ ದೇವರ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದಾರೆ. ಇದನ್ನು ಪ್ರಶ್ನೆ ಮಾಡಿದರೆ ಜಗಳ ಹಚ್ಚುತ್ತಿದ್ದೇನೆ ಎಂದು ಪ್ರಚಾರ ಮಾಡುತ್ತಾರೆ. ನಿಮ್ಮ ಧರ್ಮವನ್ನು ನೀವು ಅನುಸರಿಸಿ, ಅವರ ಧರ್ಮವನ್ನು ಅವರಿಗೆ ಅನುಸರಿಸಲು ಬಿಡಿ' ಎಂದರು.

ರಾಮದುರ್ಗ ತಾಲ್ಲೂಕಿನ ಮುದೇನೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಸೂಕ್ತ ಕೊಠಡಿಗಳಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಶಾಲೆ ಮುಂಭಾಗದಲ್ಲಿ ಟೆಂಟ್ ಹಾಕಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಸಿದರು

ಟೆಂಟ್‌ನಲ್ಲಿ ಶಾಲಾ ಪ್ರಾರಂಭೋತ್ಸವ!

ಪ್ರಜಾವಾಣಿ ವಾರ್ತೆ

ರಾಮದುರ್ಗ(ಬೆಳಗಾವಿ) : ತಾಲ್ಲೂಕಿನ ಮುದೇನೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಗಳು ಶಿಥಿಲಗೊಂಡಿರುವುದರಿಂದ, ಅವುಗಳ ಮುಂಭಾಗದಲ್ಲಿ ಟೆಂಟ್ ಹಾಕಿ, ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಸುವ ಮೂಲಕ ಗ್ರಾಮಸ್ಥರು ವಿನೂತನವಾಗಿ ಸೋಮವಾರ ಪ್ರತಿಭಟನೆ ನಡೆಸಿದರು.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ನೂರು ವರ್ಷಗಳ ಇತಿಹಾಸ ಹೊಂದಿದೆ. ಶಿಥಿಲಗೊಂಡಿರುವ ಕೊಠಡಿಗಳನ್ನು ನಿರ್ಮಿಸಲು ಶಿಕ್ಷಣ ಸಚಿವರು, ಶಾಸಕರು, ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಭಾನುವಾರ ರಾತ್ರಿ ಡಂಗುರ ಸಾರಿಸಿ ಪ್ರತಿಭಟನೆಗೆ ನಿರ್ಧರಿಸಿದ್ದರು.

ಶಾಲೆಯಲ್ಲಿ 315 ವಿದ್ಯಾರ್ಥಿಗಳಿದ್ದಾರೆ. 6 ಮಂದಿ ಶಿಕ್ಷಕರಿದ್ದಾರೆ. 11 ಕೊಠಡಿಗಳಿವೆ. ಅವುಗಳಲ್ಲಿ ಕೆಲವು ಮಾತ್ರ ಸುಸ್ಥಿತಿಯಲ್ಲಿವೆ. ಉಳಿದ ಕೊಠಡಿಗಳು ಸೋರುತ್ತಿವೆ. ಹೆಂಚುಗಳು ಕಿತ್ತು ಹೋಗಿವೆ. ಹೊಸ ಶಾಲೆ ನಿರ್ಮಿಸಿಕೊಡಬೇಕು ಎಂದು ಐದು ವರ್ಷಗಳಿಂದಲೂ ಕೋರುತ್ತಾ ಬಂದಿದ್ದಾರೆ.

'ಅಧಿಕಾರಿಗಳ ಬೇಜವಾಬ್ದಾರಿ ಧೋರಣೆಯಿಂದ ಗ್ರಾಮಸ್ಥರು ಕಂಗೆಟ್ಟಿದ್ದಾರೆ. ಪರ್ಯಾಯ ವ್ಯವಸ್ಥೆ ಮಾಡುವವರೆಗೆ ಶಾಲೆ ಮುಂದೆ ಟೆಂಟ್‌ನಲ್ಲಿಯೇ ತರಗತಿ ನಡೆಸುತ್ತೇವೆ' ಎಂದು ಎಸ್‌ಡಿಎಂಸಿ ಅಧ್ಯಕ್ಷ ಮುತ್ತಣ್ಣ ಕಮ್ಮಾರ ಪ್ರತಿಕ್ರಿಯಿಸಿದರು.

ಸುದ್ದಿ ತಿಳಿದು ಸ್ಥಳಕ್ಕೆ ಬಂದ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಆರ್. ಆಲಾಸೆ ಮತ್ತು ತಹಶೀಲ್ದಾರ್ ಮಲ್ಲಿಕಾರ್ಜುನ ಹೆಗ್ಗನ್ನವರ ಗ್ರಾಮಸ್ಥರ ಜೊತೆ ಮಾತುಕತೆ ನಡೆಸಿದರು. 15 ದಿನದಲ್ಲಿ ಶಾಲೆಗೆ ಪರ್ಯಾಯ ವ್ಯವಸ್ಥೆ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಬೆಳ್ಳಿ ರಥದಲ್ಲಿ ಮಕ್ಕಳ ಮೆರವಣಿಗೆ

ಮೂಡಲಗಿ: ಮೂಡಲಗಿಯ ಶೈಕ್ಷಣಿಕ ವಲಯ ವ್ಯಾಪ್ತಿಯಲ್ಲಿ ಸೋಮವಾರ ಶಾಲಾ ಪ್ರಾರಂಭೋತ್ಸವ ಹಾಗೂ ಕಲಿಕಾ ಚೇತರಿಕೆ ಕಾರ್ಯಕ್ರಮವು ಹಬ್ಬದ ಕಳೆ ಕಟ್ಟಿತ್ತು. ತಾಲ್ಲೂಕಿನ ತುಕ್ಕಾನಟ್ಟಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳನ್ನು ಮಂಗಳ ವಾದ್ಯ ವೃಂದ, ಕುಂಭ ಮೇಳ, ಆರತಿಯೊಂದಿಗೆ ಬೆಳ್ಳಿ ರಥದಲ್ಲಿ ಗ್ರಾಮದಲ್ಲಿ ಮೆರವಣಿಗೆ ಮಾಡಿಕೊಂಡು ಶಾಲೆಗೆ ಬರಮಾಡಿ ಕೊಳ್ಳುವುದರ ಮೂಲಕ ಗಮನಸೆಳೆದರು.

ವಲಯ ವ್ಯಾಪ್ತಿಯಲ್ಲಿ 235 ಪ್ರಾಥಮಿಕ, 34 ಪ್ರೌಢ ಶಾಲೆ, 8 ಮೊರಾರ್ಜಿ ವಸತಿ ಶಾಲೆಗಳಲ್ಲಿ ಸ್ವಚ್ಛಗೊಳಿಸಿ ಕಬ್ಬು, ಮಾವಿನ ಎಲೆಗಳಿಂದ ಶೃಂಗಾರಗೊಳಿಸಿದ್ದರು.

ಈ ವರ್ಷ ಮಕ್ಕಳಿಗೆ ಬೈಸಿಕಲ್: ಸಿ.ಎಂ

ಒಂದನೇ ಪುಟದಿಂದ

ಪ್ರವಾಸ ಭಾಗ್ಯ: ಶಾಲಾ ಮಕ್ಕಳ ಜಿಲ್ಲಾ ದರ್ಶನ ಹಾಗೂ ಕರ್ನಾಟಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು. ಹೆಣ್ಣು ಮಕ್ಕಳಿಗೆ ಶುಚಿ ಪ್ಯಾಡ್ (ನ್ಯಾಪ್‌ಕಿನ್) ನೀಡಲಾಗುವುದು. ಸರ್ಕಾರಿ ಶಾಲೆಗಳಲ್ಲೂ ಎಸ್‌ಡಿಎಂಸಿ ಮೂಲಕ ಗುರುತಿನ ಕಾರ್ಡ್ ನೀಡುವ ವ್ಯವಸ್ಥೆ ಮಾಡಲಾಗುವುದು ಎಂದರು.

ಕ್ರೀಡಾ ಸಾಮಗ್ರಿ: ಶಾಲೆಗಳಲ್ಲಿ ಕ್ರೀಡಾ ಸಾಮಗ್ರಿಗಳ ಕೊರತೆ ಬಗ್ಗೆ ವಿದ್ಯಾರ್ಥಿ ಪ್ರಶ್ನೆಗೆ ಉತ್ತರಿಸಿ, 'ಕ್ರೀಡಾ ಪರಿಕರ ಖರೀದಿಸಲು ಹಿಂದಿನ ವರ್ಷ ₹5 ಕೋಟಿ ನೀಡಲಾಗಿತ್ತು. ಈ ವರ್ಷ ₹10 ಕೋಟಿ ಕೊಡಲಾಗುವುದು. ಮಧ್ಯಾಹ್ನದ ಬಿಸಿ ಊಟದಲ್ಲಿ ಪೌಷ್ಟಿಕಾಂಶದ ಪ್ರಮಾಣ ಹೆಚ್ಚಿಸಲು ಸಿರಿಧಾನ್ಯಗಳ ಆಹಾರ ನೀಡಲು ಉದ್ದೇಶಿಸಲಾಗಿದೆ' ಎಂದು ಹೇಳಿದರು.

6,500 ಹೊಸ ಶಾಲಾ ಕೊಠಡಿ: ಕಳೆದ ಎಂಟತ್ತು ವರ್ಷಗಳಿಂದ ಶಾಲಾ ಕೊಠಡಿಗಳು ದುರಸ್ತಿಯಾಗಿಲ್ಲ. ಸಾಕಷ್ಟು ಕಡೆಗಳಲ್ಲಿ ಸೋರುತ್ತಿವೆ ಎಂದು ವಿದ್ಯಾರ್ಥಿಗಳು ಹೇಳುತ್ತಿದ್ದಾರೆ. ₹ 1 ಸಾವಿರ ಕೋಟಿ ಮೊತ್ತದಲ್ಲಿ 6,500 ಕೊಠಡಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಈ ವರ್ಷದ ಅಂತ್ಯದ ಒಳಗೆ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

'ಕೊನೆಗಾಲದಲ್ಲಿ ಕಾಂಗ್ರೆಸ್'

ಬೆಂಗಳೂರು: ಪ್ರಾದೇಶಿಕ ಪಕ್ಷಗಳಿಗೆ ಸೈದ್ಧಾಂತಿಕ ಬದ್ಧತೆ ಇಲ್ಲ ಎಂದು ಎಐಸಿಸಿ ಚಿಂತನ ಶಿಬಿರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಹೇಳಿರುವುದನ್ನು ಜೆಡಿಎಸ್ ಶಾಸಕಾಂಗ ಪಕ್ಷದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಸೈದ್ಧಾಂತಿಕ ಬದ್ಧತೆ ಎಂದರೆ ಏನು? ಈ ಬಗ್ಗೆ ರಾಹುಲ್ ಅವರು ಪ್ರಾದೇಶಿಕ ಪಕ್ಷಗಳಿಗೆ ಸ್ವಲ್ಪ ಬಿಡಿಸಿ ಹೇಳಬೇಕು. ಪ್ರಾದೇಶಿಕ ಪಕ್ಷಗಳ ಭೀತಿ ಎದುರಿಸುತ್ತಿರುವ ಕಾಂಗ್ರೆಸ್ ಪಕ್ಷವು ಆಂಧ್ರಪ್ರದೇಶ, ತೆಲಂಗಾಣ, ಒಡಿಶಾ ಸೇರಿ ಯಾವ ರಾಜ್ಯಗಳಲ್ಲೂ ಹೇಳ ಹೆಸರಿಲ್ಲದಾಗಿದೆ. ಕರ್ನಾಟಕದಲ್ಲೂ ಕಾಂಗ್ರೆಸ್ ಕೊನೆಗಾಲದಲ್ಲಿದೆ. ಇದನ್ನು ರಾಹುಲ್‌ಗಾಂಧಿ ಅರ್ಥ ಮಾಡಿಕೊಳ್ಳುವುದು ಸೂಕ್ತ ಎಂದು ಹೇಳಿದ್ದಾರೆ.

ಯುಪಿಎ 1 ಮತ್ತು 2 ಸರ್ಕಾರಗಳಲ್ಲಿ ಡಾ.ಮನಮೋಹನ್‌ಸಿಂಗ್ ನೇತೃತ್ವದ ಸಂಪುಟದಲ್ಲಿ ಡಿಎಂಕೆಯ ಜತೆ 10 ವರ್ಷ ಅಧಿಕಾರ ಹಂಚಿಕೊಂಡಿದ್ದು ಸೈದ್ಧಾಂತಿಕ ಬದ್ಧತೆಯಾ? ಬಿಜೆಪಿ ಸೋಲಿಸುವ ಶಕ್ತಿ ಕಾಂಗ್ರೆಸ್‌ಗೆ ಮಾತ್ರ ಇದೆ ಎನ್ನುವ ರಾಹುಲ್‌ಗಾಂಧಿ ಅವರು ತಮ್ಮ ಪಕ್ಷ 10 ವರ್ಷ ಅಧಿಕಾರದ ಸುಖವನ್ನು ಅನುಭವಿಸಿದ್ದು ಪ್ರಾದೇಶಿಕ ಪಕ್ಷಗಳ ಶಕ್ತಿ ಮತ್ತು ದಾಕ್ಷಿಣ್ಯದಿಂದ ಎನ್ನುವುದನ್ನು ಮರೆಯಬಾರದು ಎಂದು ಹೇಳಿದ್ದಾರೆ.

ಮೈತ್ರಿ ಸರ್ಕಾರ ಮಾಡೋಣ ಎಂದು ಮನೆ ಬಾಗಿಲಿಗೆ ಬಂದು, ಸರ್ಕಾರವನ್ನೂ ಮಾಡಿ ಹಿಂಬಾಗಿಲಿನಿಂದ ಆಪರೇಷನ್ ಕಮಲ ಎಂಬ ಅನೈತಿಕ ರಾಜಕಾರಣಕ್ಕೆ ಕೈ ಜೋಡಿಸಿದ್ದು ಸೈದ್ಧಾಂತಿಕ ಬದ್ಧತೆಯಾ? ಮಿತ್ರಪಕ್ಷಗಳನ್ನೇ ನುಂಗುವುದು ಸೈದ್ಧಾಂತಿಕ ರಾಜಕಾರಣವಾಗಿದೆ ಎಂದೂ ಕುಮಾರಸ್ವಾಮಿ ಕುಟುಕಿದ್ದಾರೆ.

ಶಸ್ತ್ರಾಸ್ತ್ರ ತರಬೇತಿ: ಸಿದ್ದರಾಮಯ್ಯ ಕಿಡಿ

ಬೆಂಗಳೂರು: ಮಡಿಕೇರಿಯ ಶಾಲಾ ಆವರಣದಲ್ಲಿ ಯುವಜನರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಿರುವ ಬಜರಂಗದಳ ಕಾನೂನಿಗೆ ಬಹಿರಂಗ ಸವಾಲು ಹಾಕಿದೆ. ಸಂಘಟನೆಯ ನಾಯಕರ ವಿರುದ್ಧ ಕ್ರಮ ಕೈಗೊಳ್ಳದ ಸರ್ಕಾರ ಜೀವಂತ ಇದೆಯೇ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಬಂದೂಕು ಬಳಕೆಯ ತರಬೇತಿ ನೀಡಿದರೂ ಕ್ರಮ ಜರುಗಿಸದೇ ಇರುವುದನ್ನು ನೋಡಿದರೆ ರಾಜ್ಯದಲ್ಲಿ ಗೃಹ ಮತ್ತು ಶಿಕ್ಷಣ ಸಚಿವರಿದ್ದಾರೆಯೇ ಎಂಬ ಅನುಮಾನ ಬರುತ್ತದೆ ಎಂದಿದ್ದಾರೆ.

ಬಜರಂಗ ದಳ ನಡೆಸಿದ ಶೌರ್ಯ ಪ್ರಶಿಕ್ಷಣ ವರ್ಗದಲ್ಲಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ ಮತ್ತು ಸುಜಾ ಕುಶಾಲಪ್ಪ ಪಾಲ್ಗೊಂಡಿದ್ದಾರೆ. ಇವರ ಬದ್ಧತೆ ಸಂವಿಧಾನಕ್ಕೋ? ಬಜರಂಗ ದಳಕ್ಕೋ? ಎಂದು ಅವರು ಕುಟುಕಿದ್ದಾರೆ.

ಶಸ್ತ್ರಾಸ್ತ್ರ ತರಬೇತಿ ಸಂಪೂರ್ಣವಾಗಿ ಕಾನೂನು ವಿರೋಧಿ ಚಟುವಟಿಕೆಯಾಗಿದ್ದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತಕ್ಷಣ ಬಜರಂಗ ದಳದ ನಾಯಕರನ್ನು ಬಂಧಿಸಲು ಸೂಚಿಸಬೇಕು ಎಂದು ಆಗ್ರಹಿಸಿದ್ದಾರೆ.

ಬಿಜೆಪಿ ಸೇರಲು ಸಭಾಪತಿ ಸ್ಥಾನ ತೊರೆದ ಹೊರಟ್ಟಿ

ಬೆಂಗಳೂರು: ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಭಾಪತಿ ಸ್ಥಾನ ಮತ್ತು ಜೆಡಿಎಸ್ ಪಕ್ಷಕ್ಕೆ ಸೋಮವಾರ ರಾಜೀನಾಮೆ ನೀಡಿದ್ದು, ಮಂಗಳವಾರ ಅವರು ಬಿಜೆಪಿ ಸೇರಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 'ನನ್ನ ಹುದ್ದೆಗೆ, ಪರಿಷತ್ ಸದಸ್ಯ ಸ್ಥಾನಕ್ಕೆ ಮತ್ತು ಜೆಡಿಎಸ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದೇನೆ. ಮಂಗಳವಾರ ಬಿಜೆಪಿಯನ್ನು ಸೇರ್ಪಡೆ ಆಗುತ್ತೇನೆ' ಎಂದು ತಿಳಿಸಿದರು.

'ನನ್ನ ಜತೆಗಿರುವ ಕೆಲವು ಕಾರ್ಯಕರ್ತರು ಪಕ್ಷ ಬದಲಿಸುವಂತೆ ಒತ್ತಡ ಹೇರಿದ್ದರು. ಅನಿವಾರ್ಯವಾಗಿ ಬಿಜೆಪಿ ಸೇರುತ್ತಿದ್ದೇನೆ. ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದು, ಬಿಜೆಪಿಯಲ್ಲಿ ಯಾವುದೇ ಹುದ್ದೆಯ ಬಗ್ಗೆ ಚರ್ಚೆ ಮಾಡಿಲ್ಲ' ಎಂದು ಅವರು ಹೇಳಿದರು.

'ಜೆಡಿಎಸ್‌ನಲ್ಲಿ ಎಚ್.ಡಿ. ದೇವೇಗೌಡರ ಮಾರ್ಗದರ್ಶನದಲ್ಲಿ ನಾನು ಬೆಳೆದೆ. ದೇವೇಗೌಡರ ಕುಟುಂಬ ನನ್ನನ್ನು ಅವರ ಕುಟುಂಬದ ಸದಸ್ಯರಂತೇ ನೋಡಿಕೊಂಡರು. ಅವರನ್ನು ಭೇಟಿ ಮಾಡಿ ರಾಜೀನಾಮೆ ನೀಡುವ ಧೈರ್ಯ ಇಲ್ಲದ ಕಾರಣ ಅವರನ್ನು ಭೇಟಿ ಮಾಡಿಲ್ಲ. ಅವರಿಗೊಂದು 10 ಪುಟಗಳ ಪತ್ರವನ್ನು ಬರೆದಿದ್ದೇನೆ. ಕುಮಾರಸ್ವಾಮಿ ಅವರಿಗೆ ರಾಜೀನಾಮೆ ವಿಷಯ ತಿಳಿಸಿದ್ದು, ಅವರು ನನ್ನನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಇಬ್ಬರ ಬಗ್ಗೆಯೂ ಬೇಸರವಿಲ್ಲ. ದೇವೇಗೌಡರ ಮಾರ್ಗದರ್ಶನ ಮುಂದೆಯೂ ಬೇಕು' ಎಂದು ಹೊರಟ್ಟಿ ತಿಳಿಸಿದರು.

1983 ರಲ್ಲಿ ಪಕ್ಷೇತರನಾಗಿ ಗೆದ್ದು ಬಂದೆ. 1986 ರಲ್ಲಿ ಜನತಾದಳದಿಂದ, ಆ ಬಳಿಕ ಲೋಕಶಕ್ತಿ ಮತ್ತು ಜೆಡಿಎಸ್‌ನಿಂದ ಆಯ್ಕೆಯಾದೆ. ಸಭಾಪತಿಯಾಗಿ ಒಟ್ಟು 30 ಸಭೆಗಳನ್ನು ಮಾಡಿದ್ದು, ಏನೆಲ್ಲ ಸಭೆಗಳನ್ನು ಮಾಡಿದ್ದೇನೆ. ಅದರ ಪರಿಣಾಮಗಳೇನು ಎಂಬ ಬಗ್ಗೆ ಪುಸ್ತಕ ಪ್ರಕಟಿಸಿರುವುದಾಗಿಯೂ ಅವರು ಹೇಳಿದರು.

'ಬೆಳಗಾವಿ ಅಧಿವೇಶನವನ್ನು ದೂರುಗಳಿಲ್ಲದೇ ನಡೆಸಿದ್ದೇನೆ. ವಿಧಾನಪರಿಷತ್ ಸಿಬ್ಬಂದಿಗೆ ಸಮವಸ್ತ್ರ, ಬಯೋ ಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯ ಮಾಡಿದ್ದೇವೆ. ನನ್ನನ್ನು ಮೇಲ್ಮನೆಗೆ ಗೆಲ್ಲಿಸಿ ಕಳುಹಿಸುತ್ತಿದ್ದ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ. ಒಟ್ಟು ಏಳು ಬಾರಿ ಪರಿಷತ್ತಿಗೆ ಆಯ್ಕೆಯಾಗಿ ಬಂದಿದ್ದು, ಎರಡು ತಲೆಮಾರಿನ ಜನ ನನಗೆ ಮತ ಹಾಕಿದ್ದಾರೆ' ಎಂದು ಹೇಳಿದರು.

ಪಠ್ಯ ಸೇರಿದ ಹೆಡಗೇವಾರ್ ಭಾಷಣ

ಒಂದನೇ ಪುಟದಿಂದ

'ದೇವನೂರ ಮಹಾದೇವ ಅವರ ಎದೆಗೆ ಬಿದ್ದ ಅಕ್ಷರವನ್ನು ಸಹ ಪಠ್ಯದಲ್ಲಿ ಸೇರಿಸಲಾಗಿದೆ. ಹೀಗಾಗಿ, ಹೊಸ ವಿಷಯಗಳು, ವಿಚಾರಗಳು ಸೇರಿಸಬೇಕು ಎನ್ನುವುದು ಸಮಿತಿ ತೀರ್ಮಾನ' ಎಂದು ಅವರು ಸಮರ್ಥಿಸಿಕೊಂಡಿದ್ದಾರೆ.

'ನಮಗೆ ಯಾರಿಂದಲೂ ಒತ್ತಡ ಇರಲಿಲ್ಲ. ಭಾಷೆಯ ದೃಷ್ಟಿಯಿಂದ ಪಠ್ಯದಲ್ಲಿ ನಾಟಕಗಳು ಸೇರಿದಂತೆ ವೈವಿಧ್ಯಮಯ ವಿಷಯಗಳಿಗೆ ಆದ್ಯತೆ ನೀಡಿದ್ದೇವೆ. ಹೆಡಗೇವಾರ್ ಅವರನ್ನು ಸೈದ್ಧಾಂತಿಕ ದೃಷ್ಟಿಯಿಂದ ನೋಡಿಲ್ಲ. ಭಗತ್ ಸಿಂಗ್ ಅವರ ವಿಷಯ ಬದಲಾಯಿಸಿ ಹೆಡಗೇವಾರ್ ಭಾಷಣ ಸೇರಿಲ್ಲ. ಇಬ್ಬರ ವಿಷಯಗಳು ಪ್ರತ್ಯೇಕವಾಗಿದ್ದು, ಒಂದಕ್ಕೊಂದು ಸಂಬಂಧ ಇಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

'ಪಕ್ಷದ ಮುಖವಾಣಿಯಾಗಬಾರದು'

'ಪಠ್ಯಕ್ರಮ ಎನ್ನುವುದು ಯಾವುದೇ ಪಕ್ಷದ ಮುಖವಾಣಿಯಾಗಕೂಡದು. ಬಿಜೆಪಿ ಸರ್ಕಾರ ಪಕ್ಷ ಮತ್ತು ಆರ್‌ಎಸ್‌ಎಸ್ ಸಿದ್ಧಾಂತಗಳನ್ನು ಪಠ್ಯಕ್ರಮದಲ್ಲಿ ತೂರಿಸುವ ಪ್ರಯತ್ನಮಾಡುತ್ತಿದೆ. ಈ ಹೀನ ಕೆಲಸವನ್ನು ಕೈ ಬಿಡಬೇಕು' ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಅಭಿಪ್ರಾಯಪಟ್ಟಿದ್ದಾರೆ.

'ಮುಖ್ಯವಾಗಿ ಭಗತ್‌ಸಿಂಗ್ ಅವರ ಜೀವನಕ್ಕೆ ಸಂಬಂಧಿಸಿದ ಪಠ್ಯವನ್ನು ತೆಗೆದು ಹಾಕಿ ಹೆಡಗೇವಾರ್ ಅವರ ಭಾಷಣ ಸೇರಿಸಿದ್ದು ದೊಡ್ಡ ದುರಂತ. ಇದು ಮಹಾನ್ ಕ್ರಾಂತಿಕಾರಿ ಭಗತ್ ಸಿಂಗ್ ಅವರಿಗೆ ಬಗೆದ ದ್ರೋಹ. ಸ್ವಾತಂತ್ರ್ಯ ಹೋರಾಟಕ್ಕೆ ಹೆಡಗೇವಾರ್ ಅವರ ಕೊಡುಗೆ ನಗಣ್ಯ. ಅಷ್ಟಕ್ಕೂ ಹೆಡಗೇವಾರ್ ಅವರು ದೇಶದ ಮಹಾನ್ ಹೋರಾಟಗಾರರೆಂದು ದೇಶದ ಜನ ಮತ್ತು ಯಾವೊಬ್ಬ ಇತಿಹಾಸ ತಜ್ಞರು ಒಪ್ಪಿಕೊಂಡಿಲ್ಲ' ಎಂದು ಹೇಳಿದ್ದಾರೆ.

'ಪಠ್ಯವನ್ನು ವೈಜ್ಞಾನಿಕ, ಧರ್ಮ ನಿರಪೇಕ್ಷ, ಪ್ರಜಾತಾಂತ್ರಿಕ ಮೌಲ್ಯಗಳ ಆಧಾರದ ಮೇಲೆಯೇ ಪುನರ್ ರಚಿಸಬೇಕು. ಪಠ್ಯ ಪರಿಷ್ಕರಣಾ ಸಮಿತಿಯು ಹಲವಾರು ಪಠ್ಯಗಳನ್ನು ತೆಗೆದು ಹಾಕಿ ತಮ್ಮ ರಾಜಕೀಯ ಚಿಂತನೆಗಳಿಗೆ ಪೂರಕವಾಗಿರುವ ಹಲವಾರು ಪಾಠಗಳನ್ನು ಸೇರಿಸಿದೆ. ಇದು ಕೋಮುವಾದದ ವಿಷವನ್ನು ಬಿತ್ತಿ ಬೆಳೆಯಲು ಶಿಕ್ಷಣ ಎನ್ನುವ ಭೂಮಿಯ ಹದಗೊಳಿಸುವಿಕೆಯ ಕ್ರಮವಾಗಿದೆ' ಎಂದಿದ್ದಾರೆ.

'ಸೇರ್ಪಡೆಯಾದರೆ ತಪ್ಪೇನು?'

ಕಲಬುರಗಿ: ಆರ್‌ಎಸ್‌ಎಸ್ ಸರಸಂಘಚಾಲಕರಾಗಿದ್ದ ಹೆಡಗೇವಾರ್ ಅವರ ಭಾಷಣ ರಾಜ್ಯದ 10ನೇ ತರಗತಿಯ ಪಠ್ಯಪುಸ್ತಕದಲ್ಲಿ ಸೇರ್ಪಡೆಯಾದರೆ ತಪ್ಪೇನು? ಅವರೂ ರಾಷ್ಟ್ರವಾದಿಯಾಗಿದ್ದರು. ದಶಕಗಳ ಕಾಲ ಆಳ್ವಿಕೆ ನಡೆಸಿದ್ದ ಕಾಂಗ್ರೆಸ್ ಮುಚ್ಚಿಟ್ಟಿದ್ದ ರಾಷ್ಟ್ರೀಯ ವಿಚಾರ ಧಾರೆಗಳನ್ನು ಮಕ್ಕಳಿಗೆ ತಿಳಿಸುತ್ತಿದ್ದೇವೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 2 ದಿನಾಂಕ: 13/05/2022

ಈ ಕೆಳಗೆ ತಿಳಿಸಿರುವ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ಮೂಲಕ (ಪೂರ್ವ ಅರ್ಹತೆ ಮತ್ತು ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಖರೀದಿಸುವ ಸಾಮಾಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ. ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ @17.00 ಗಂಟೆ
ಜಿ–02/22–23	ಸಿಸಿಟಿವಿ ಕಣ್ಗಾವಲು ಕ್ಯಾಮೆರಾದ ಸರಬರಾಜು ಮತ್ತು ಸ್ಥಾಪನೆ	6.00	13/06/2022
ಜಿ–03/22–23	ಯೂ.ಪಿ.ಎಸ್‌ಗಾಗಿ ಎಸ್‌ಎಂಎಫ್ ಬ್ಯಾಟರಿಗಳ ಖರೀದಿ	3.00	13/06/2022
ಜಿ–04/22–23	ಅಸೆಂಬ್ಲಿಗಳೊಂದಿಗೆ ಎಲ್‌ಇಡಿ ಲ್ಯಾಂಪ್‌ಗಳ ಖರೀದಿ	2.50	13/06/2022
ಜಿ–05/22–23	GHT ಬೋಲ್ಟ್, GHT 'U' ಬೋಲ್ಟ್ ಹಾಗೂ ನೈಲಾಕ್ ನಟ್ಸ್ ಖರೀದಿ	2.02	13/06/2022
ಜಿ–06/22–23	ಸಿಂಥೆಟಿಕ್ ಉಲ್ಲನ್ ಬ್ಲಾಂಕೆಟ್ ಮತ್ತು ಲೆನಿನ್ ಕ್ಲಾತ್‌ಗಳ ಖರೀದಿ	2.00	13/06/2022
ಜಿ–07/22–23	ಅಟೋಮೋಟಿವ್ ಗ್ಲಾಸ್‌ಗಳ ಖರೀದಿ	0.19	13/06/2022
ಜಿ–08/22–23	ಟರ್ನ್‌ಕೀ ಆಧಾರದ ಮೇಲೆ ಪ್ಲೇಟ್ ಎಕ್ಸ್‌ಪೋಸಿಂಗ್ ಮೆಷಿನ್‌ನ ಸರಬರಾಜು, ಸ್ಥಾಪನೆ ಮತ್ತು ಕಾರ್ಯಾಚರಣೆ	0.06	13/06/2022
ಅಲ್ಪಾವಧಿ ಟೆಂಡರ್			
ಜಿ–09/22–23	ಅಟೋಮೋಟಿವ್ ಗ್ರೀಸ್‌ಗಳ ಖರೀದಿ	14.00	30/05/2022

ಸೇರ್ಪಡೆ/ತಿದ್ದುಪಡಿ

ಜಿ–16/21–22 ಎಲ್‌ಇಡಿ ಲ್ಯಾಂಪ್ಸ್ ವಿತ್ ಅಸೆಂಬ್ಲಿಗಳ ಖರೀದಿ ಹಾಗೂ ಜಿ–46/21–22 ಸಪ್ಲೈ, ಇನ್‌ಸ್ಟಾಲೇಶನ್ ಮತ್ತು ಕಮಿಷನಿಂಗ್ ಆಫ್ ಪ್ಲೇಟ್ ಎಕ್ಸ್‌ಪೋಸಿಂಗ್ ಮೆಷಿನ್ & ಕೊಲೇಟರ್ ಮೆಷಿನ್ ಆನ್ ಟರ್ನ್‌ಕೀ ಆಧಾರದ ಮೇಲೆನ ಟೆಂಡರ್‌ಗಳನ್ನು ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ, ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಅಥವಾ ದೂರವಾಣಿ ಸಂಖ್ಯೆ: 080–22230960/22234115, ಕರೆಮಾಡಿ ಅಥವಾ eprocurementhelpdesk@gmail.com ಗೆ ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾ.ಸಾ.ಸಂ.ಇ/ವಾಪ್ರ/523/ಆಕಾರ್/22–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಥಮ ವರ್ಷ

ನಿರ್ಮಲ ಸ್ಮರಣೆ

ಶ್ರೀಮತಿ ನಿರ್ಮಲ ರಘು

ಕಳೆದ ಪ್ರತಿಕ್ಷಣವೂ ನಿನ್ನ ನೆನಪಿಗೆ ಅರ್ಪಣೆ
ಮಿಡಿದ ಪ್ರತಿ ಕಂಬನಿಯೂ ನಿನ್ನ ತ್ಯಾಗಕ್ಕೆ ಸಮರ್ಪಣೆ

ದಿನಾಂಕ 18–05–2022ನೇ ಬುಧವಾರದಂದು ಬೆಳಗ್ಗೆ 10.30ಕ್ಕೆ ನಂಜನಗೂಡು ರಸ್ತೆಯ ವಿಮಾನ ನಿಲ್ದಾಣದ ಟೋಲ್ ಬಳಿ ಇರುವ 'ನಿರ್ಮಲ ಧಾಮ'ದಲ್ಲಿ ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯ ನೆರವೇರಿಸಲಾಗುವುದು. ಸಹೃದಯ ಹಿತೈಷಿಗಳು ಹಾಗೂ ಬಂಧುಗಳು ಆಗಮಿಸಿ ನಮ್ಮೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

10.30 – ಭಕ್ತಿಗೀತೆಗಳ ಸಮರ್ಪಣೆ
12.30 – ಭೋಜನ

ಆರ್. ರಘು
ಆರ್. ವರ್ಣಿಕ
ಆರ್. ಕೌಟಿಲ್ಯ
ಮತ್ತು ಬಂಧು ವರ್ಗ

ತ್ರಿಪುರಾ: ಸಂಪುಟಕ್ಕೆ 11 ಮಂದಿ ಸೇರ್ಪಡೆ

ಅಗರ್ತಲಾ (ಪಿಟಿಐ): ತ್ರಿಪುರಾದಲ್ಲಿ ಸೋಮವಾರ ಬಿಜೆಪಿಯ 9 ಶಾಸಕರು ಮತ್ತು ಮಿತ್ರ ಪಕ್ಷ ಇಂಡಿಜಿನಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರಾದ (ಐಪಿಎಫ್‌ಟಿ) ಇಬ್ಬರು ಸೇರಿ 11 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ರಾಜಭವನದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ರಾಜ್ಯಪಾಲ ಎಸ್.ಎನ್.ಆರ್ಯ ಅವರು ಸಂಪುಟ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು. ಮುಖ್ಯಮಂತ್ರಿ ಮಾಣಿಕ್ ಸಾಹಾ ಈ ಸಂದರ್ಭದಲ್ಲಿದ್ದರು.

ಮಂಗಳೂರು ಮಹಾನಗರಪಾಲಿಕೆ

MCC/Indent/131836/2022-23 ದಿನಾಂಕ : 13.05.2022

ಟೆಂಡರ್ ಪ್ರಕಟಣೆ

E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಕೇಂದ್ರ ವಲಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಹಾಗೂ ಚರಂಡಿಗಳ 2022ರ ಮಳೆಗಾಲದ ಅವಧಿಯಲ್ಲಿ ರಾತ್ರಿ ಪಾಳೆಯದಲ್ಲಿ ವಿಶೇಷ ಗ್ಯಾಂಗ್ ಮೂಲಕ ನಿರ್ವಹಿಸುವ ಕಾಮಗಾರಿ (3 ತಿಂಗಳ ಅವಧಿ) ಕಾಮಗಾರಿ ಅಂದಾಜುಪಟ್ಟಿ ಮೊತ್ತ ರೂ. 7,06,000.00 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 20.05.2022. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ ಮಂಗಳೂರು

DIPR / MNG / 155/ MPL / 22-23

CENTRAL UNIVERSITY OF KARNATAKA

(Established by an Act of the Parliament in 2009)

Kadaganchi, Aland Road, Kalaburagi Dist-585367- Website: www.cuk.ac.in

EXPRESSION OF INTEREST

The Expression of Interest (EoI) is hereby invited by Central University of Karnataka (CUK), from the interested vendors for leasing of **1. Canteen (Veg), 2. Canteen (Non-Veg), 3. Stationery Shop, 4. Bakery Shop, 5. Saloon Shop, 6. Grocery Shop and 8. Fruit and Juice Stall at Shopping Complex at CUK Campus.** The details can be found on the University website **www.cuk.ac.in.** Interested bidders may submit the same to the office of the Registrar, CUK latest by **31.05.2022 before 2.00 PM.** The bid will be opened on **01.06.2022** in the presence of bidders.

Sd/-Registrar

ಬಮೂಲ್ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ನಂದಿನಿ

ಬೆಂಗಳೂರು ಡೇರಿ ಪ್ರಾಂಗಣ :: ಡಾ॥ ಎಂ.ಹೆಚ್.ಮರಿಗೌಡ ರಸ್ತೆ :: ಡಿ.ಆರ್.ಕಾಲೇಜ್ ಅಂಚೆ :: ಬೆಂಗಳೂರು–560 029

ಸಂಖ್ಯೆ/ಬಮೂಲ್/2022–23 ದಿನಾಂಕ: 16.05.2022

ಪ್ರಕಟಣೆ

ವಿಷಯ: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟ ನಿ, ಇದರ ಡೇರಿ/ಉತ್ಪನ್ನ ಘಟಕ ನಿರ್ಮಾಣಕ್ಕಾಗಿ ಅಗತ್ಯ ಜಮೀನು ನೀಡುವ ಬಗ್ಗೆ.

* * * * *

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ ವ್ಯಾಪ್ತಿಯ ಹಾಲು ಉತ್ಪಾದಕರ ಹಿತದೃಷ್ಟಿಯಿಂದ ಡೇರಿ/ಉತ್ಪನ್ನ ಘಟಕ ಸ್ಥಾಪಿಸಲು ಯೋಜಿಸಿದ್ದು ಇದಕ್ಕಾಗಿ ಅಂದಾಜು 15–20 ಎಕರೆ ಸಮತಟ್ಟಾದ ಜಮೀನಿನ ಅವಶ್ಯಕತೆ ಇರುತ್ತದೆ. ಉದ್ದೇಶಿತ ಭೂಮಿ ದೊಡ್ಡಬಳ್ಳಾಪುರ ತಾಲ್ಲೂಕು ವ್ಯಾಪ್ತಿಯಲ್ಲಿದ್ದು ಸುಗಮ ಸಂಚಾರಕ್ಕೆ ಅನುಕೂಲಕರವಾಗಿರುವಂತೆ, ರಾಷ್ಟ್ರೀಯ/ರಾಜ್ಯ ಹೆದ್ದಾರಿಯ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಹಾಗೂ ದೊಡ್ಡಬಳ್ಳಾಪುರ ಶೀತಲ ಕೇಂದ್ರದ ವ್ಯಾಪ್ತಿಗೆ ಅಂದಾಜು 10 ಕಿ.ಮೀ ಸುತ್ತಳತೆಯಲ್ಲಿರಬೇಕು ಮತ್ತು ಅಂತರ್ಜಲದ ಜೊತೆಗೆ ನೀರಿನ ಮೂಲಗಳನ್ನು ಆಸುಪಾಸಿನಲ್ಲಿ ಹೊಂದಿರಬೇಕು. ಉದ್ದೇಶಿತ ಭೂಮಿ ಎಲ್ಲಾ ವಿಧದಲ್ಲೂ ಋಣಮುಕ್ತವಾಗಿರಬೇಕು (Free From All Encumbrance).

ಒಕ್ಕೂಟಕ್ಕೆ ಅಗತ್ಯವಿರುವ ಭೂಮಿಯನ್ನು ನೀಡಲು ಆಸಕ್ತಿ ಇರುವ ಜಮೀನಿನ ಮಾಲೀಕತ್ವ ಹೊಂದಿರುವ ರೈತರು/ಸಂಘ ಸಂಸ್ಥೆಗಳು ಆಸ್ತಿಯ ವಿವರ, ಇ.ಸಿ, ಖಾತಾ ಎಕ್ಸ್‌ಟ್ರಾಕ್ಟ್, ಜಮೀನಿನ ನಕಾಶೆ (ಚೆಕ್ಕುಬಂದಿ), ಸೇಲ್ ಡೀಡ್ ಪ್ರತಿ, ಟ್ಯಾಕ್ಸ್ ಪಾವತಿಸಿದ ರಶೀದಿ ಮತ್ತು ಅಗತ್ಯ ದಾಖಲಾತಿಗಳ ಪ್ರತಿಗಳನ್ನು ತಮ್ಮ ಸಹಮತಿಯೊಂದಿಗೆ ಸೀಲ್ಡ್ ಕವರ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ., ಡಾ॥ ಎಂ.ಹೆಚ್ ಮರಿಗೌಡ ರಸ್ತೆ, ಬೆಂಗಳೂರು–29 ಇವರಿಗೆ ದಿನಾಂಕ: 25.05.2022ರ ಕಚೇರಿ ಸಮಯದೊಳಗೆ ಕಳುಹಿಸಬಹುದಾಗಿರುತ್ತದೆ. ಭೂ ಮಾಲೀಕರಿಂದ ಸಲ್ಲಿಸಲಾಗುವ ಸಹಮತಿ ಪತ್ರ (Consent Letter) ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಬೆಂಗಳೂರು ಸಹಕಾರ ಹಾಲು ಒಕ್ಕೂಟದ ಪರವಾಗಿ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಛೇರಿ : 5ನೇ ಮಹಡಿ, ಟಿಟಿಎಂಸಿ ಎ ಬ್ಲಾಕ್, ಬಿಎಂಟಿಸಿ ಬಿಲ್ಡಿಂಗ್, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಫೋನ್ : 080 – 22278813/14/15/16, ಫ್ಯಾಕ್ಸ್ : 080–22213172 Website: www.ksmc.karnataka.gov.in

No. 865/KSMCL/Sand/Tumbe/2022-23 Date: 16.05.2022

ಇ–ಟೆಂಡರ್ ಆಹ್ವಾನ

ಕೆಎಸ್‌ಎಂಸಿಎಲ್ ಇವರು ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತುಂಬೆ ಅಣೆಕಟ್ಟಿನಿಂದ ಹೂಳು ತೆಗೆಯಲು ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆಯಲು ಗುತ್ತಿಗೆದಾರರು / ಏಜೆನ್ಸಿಗಳ ಆಯ್ಕೆಗಾಗಿ ಈ ಕೆಳಕಂಡಂತೆ ಇ–ಟೆಂಡರ್ ಆಹ್ವಾನಿಸುತ್ತದೆ.

ವೇಳಾಪಟ್ಟಿ

ಪ್ರಿ–ಬಿಡ್ ಮೀಟಿಂಗ್	23.05.2022 ಬೆಳಿಗ್ಗೆ 11.00 ಗಂಟೆಗೆ ಕಾರ್ಪೊರೇಟ್ ಕಛೇರಿ, ಬೆಂಗಳೂರು
ಟೆಂಡರ್ ದಸ್ತಾವೇಜು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	31.05.2022 ಸಂಜೆ 5.00 ಗಂಟೆವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	02.06.2022 ಬೆಳಿಗ್ಗೆ 11.00 ಗಂಟೆಗೆ
ಇಎಂಡಿ	ರೂ. 4,60,000/–

ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡುವುದು. ಹೆಚ್ಚಿನ ಸಹಾಯ ಮತ್ತು ನೋಂದಣಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–46010000/68948777, ಇ–ಮೇಲ್: support@eprochelpdesk.com ನ್ನು ಸಂಪರ್ಕಿಸಬಹುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಮರಳು)

DIPR/CP/521/Zenkar/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ

ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ–4ಟೆಂಡರ್/2022–23/229 ದಿನಾಂಕ :13–05–2022

ಅಲ್ಪಾವಧಿ ಇ–ಪ್ರೋಕ್ಯೂರಮೆಂಟ್–ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

1)ಹುನಗುಂದ ತಾಲ್ಲೂಕಿನಕಾಮಗಾರಿಯ ವಿವರ
- 1)Gopsani (ST) Indent No -40429 APT- 10.75 lakhs
- 2)Revadihal (GEN) Indent No-40428 APT- 13.41 lakhs
- 3)Marol Indent No-40427 APT- 70.47 lakhs
- 4)Pochapur Indent No-40426 APT- 22.76 lakhs
- 5)Krishnapura Indent No-40425 APT- 66.76 lakhs
- 6)Hulaginal Indent No-40424 APT- 71.06 lakhs
- 7)Belagal Indent No-40423 APT- 53.00 lakhs
- 8)chikkodagali LT2 Indent No-39867 APT- 111.96 lakhs

2) ಲೆಕ್ಕ ಶಿರ್ಷಿಕೆ: JJM–2215
3) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್ ಡಿ ಮೊತ್ತ ಇ–ಪ್ರೋಕ್ಯೂರಮೆಂಟ್ ಪ್ರಕಾರ
4) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 30–05–2022 ಸಾಯಂಕಾಲ 5.30 ಗಂಟೆಯ ವರೆಗೆ
5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:01–06–2022 ಮಧ್ಯಾಹ್ನ 11.00 ಗಂಟೆಯ ನಂತರ (Two Cover)
6) ಆರ್ಥಿಕ ಬಿಡ್ ತೆರೆಯುವ ದಿನಾಂಕ: 01–06–2022 11.00 ಗಂಟೆಯ ನಂತರ (Two Cover)
7) ಆರ್ಥಿಕ ಬಿಡ್ ತೆರೆಯುವ ದಿನಾಂಕ: 03–06–2022 11.00 ಗಂಟೆಯ ನಂತರ (Single Cover)
8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ

ಟಿಪ್ಪಣಿ:– 1) ಟೆಂಡರ ಮೊತ್ತಕ್ಕಿಂತ ಕಡಿಮೆ ದರವನ್ನು ನಮೂದಿಸಿದಲ್ಲಿ ಒಟ್ಟು ವ್ಯತ್ಯಾಸ ಮೊತ್ತದ DD/FDRನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ಇವರ ಹೆಸರಿನಲ್ಲಿ ಪಡೆದು ಸ್ಕ್ಯಾನ್ ಮಾಡಿ ಆನ್‌ಲೈನ್ ಮುಖಾಂತರ ಟೆಂಡರ ಜೊತೆಗೆ ಅಪ್‌ಲೋಡ್ ಮಾಡಬೇಕು. ಟೆಂಡರ ಅನುಮೋದನೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
2) ಗುತ್ತಿಗೆ ಮೊತ್ತಕ್ಕೆ 12% GST ಯನ್ನು ಸೇರಿಸಿ ಕೆಲಸದ ಆದೇಶ ನೀಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಕುನೀಮತ್ತುನೈ ವಿಭಾಗ, ಬಾಗಲಕೋಟ

ವಾ.ಸಾ.ಇ/ಬಾಗಲಕೋಟೆ/107/2022–23/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮ: ಚುರುಕುಗೊಂಡ ತನಿಖೆ • ಬಂಧಿತರಿಬ್ಬರು 10 ದಿನ ಸಿಐಡಿ ಕಸ್ಟಡಿಗೆ

ಡಿವೈಎಸ್ಪಿ ಆಪ್ತ 'ಆರ್‌ಪಿಐ' ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಅವರ ಆಪ್ತ ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್ (ಆರ್‌ಪಿಐ) ಜಿ. ಬಸವರಾಜ್ ಸೇರಿದಂತೆ ಇಬ್ಬರನ್ನು ಸೋಮವಾರ ಬಂಧಿಸಿದ್ದಾರೆ.

'ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕೋಳಿಗುಡ್ಡದ ಬಸವರಾಜ್, ನಗರ ಸಶಸ್ತ್ರ ಮೀಸಲು ಪಡೆಯಲ್ಲಿ ವೃತ್ತಿ ಆರಂಭಿಸಿದ್ದರು. ಇನ್ನೊಬ್ಬ ಬಂಧಿತ ಸಿ.ಎಂ. ನಾರಾಯಣ, ಪಿಎಸ್‌ಐ ಪರೀಕ್ಷೆ ಬರೆದಿದ್ದ ಅಭ್ಯರ್ಥಿ. ಇಬ್ಬರನ್ನು 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಿ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಬಸವರಾಜ್ ಅವರನ್ನು ನಿಯೋಜನೆ ಮೇರೆಗೆ ಪೊಲೀಸ್ ನೇಮಕಾತಿ ವಿಭಾಗಕ್ಕೆ ಕಳುಹಿಸಲಾಗಿತ್ತು. ಪ್ರಕರಣದಲ್ಲಿ ಈಗಾಗಲೇ ಬಂಧಿಸಲಾಗಿರುವ ಡಿವೈಎಸ್ಪಿ ಶಾಂತಕುಮಾರ್ ಅಧೀನದಲ್ಲಿ ಬಸವರಾಜ್ ಕೆಲಸ ಮಾಡುತ್ತಿದ್ದ. ಒಎಂಆರ್ ಪ್ರತಿಗಳನ್ನು ಇರಿಸಿದ್ದ ಕೊಠಡಿ ಭದ್ರತೆ ಜವಾಬ್ದಾರಿ ವಹಿಸಿಕೊಂಡಿದ್ದ.'

'ಒಎಂಆರ್ ಪ್ರತಿಗಳ ಟ್ರಂಕ್ ಬೀಗ ಹಾಗೂ ಕೀಗಳು ಶಾಂತಕುಮಾರ್ ಮನೆಯಲ್ಲಿ ಸಿಕ್ಕಿದ್ದವು. ಟ್ರಂಕ್‌ಗಳ ಬೀಗಗಳನ್ನು ಶಾಂತಕುಮಾರ್ ಅವರಿಗೆ ನೀಡಿರುವ ವ್ಯಕ್ತಿಗಳಲ್ಲಿ ಬಸವರಾಜ್ ಸಹ ಒಬ್ಬರು. ಜೊತೆಗೆ, ಕೆಲ ಅಭ್ಯರ್ಥಿಗಳನ್ನು ಮಧ್ಯವರ್ತಿಗಳ ಮೂಲಕ ಸಂಪರ್ಕಿಸಿ ಅಕ್ರಮ ಎಸಗಲು ನೆರವಾಗಿದ್ದರು' ಎಂದೂ ಸಿಐಡಿ ಮೂಲಗಳು ತಿಳಿಸಿವೆ.

32ನೇ ಆರೋಪಿ: 'ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ಎಸಗಿದ್ದ 22 ಅಭ್ಯರ್ಥಿಗಳ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡು, ಮತ್ತಷ್ಟು ಆರೋಪಿಗಳ ಹೆಸರು ಸೇರಿಸಲಾಗಿದೆ. ಸದ್ಯ ಬಂಧಿಸಿರುವ ಬಸವರಾಜ್, 32ನೇ ಆರೋಪಿ' ಎಂದು ಸಿಐಡಿ ಮೂಲಗಳು ಹೇಳಿವೆ.

ತಲೆಮರೆಸಿಕೊಂಡಿದ್ದ ಅಭ್ಯರ್ಥಿ: 'ಅಕ್ರಮ ಎಸಗಿದ್ದ ಅಭ್ಯರ್ಥಿ ಸಿ.ಎಂ. ನಾರಾಯಣ್, ಪ್ರಕರಣದ 12ನೇ ಆರೋಪಿ. ಪ್ರಕರಣ ದಾಖಲಾಗುತ್ತಿದ್ದಂತೆ ಪರಾರಿಯಾಗಿದ್ದ ಆತನನ್ನು ವಿಶೇಷ ತಂಡ ಬಂಧಿಸಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಕಗ್ಗಲಿಪುರದ ಚಿನ್ನಕುರ್ಚಿ ಗ್ರಾಮದ ನಾರಾಯಣ್ ಹಾಗೂ ಆತನ ಸಹೋದರ ನಾಗರಾಜ್, ಅಕ್ರಮವಾಗಿ ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಲು ಮಧ್ಯವರ್ತಿಯಾದ ಎಂಜಿನಿಯರ್ ಮಂಜುನಾಥ್ ಮೇಳಕುಂದಿಗೆ ₹ 1 ಕೋಟಿ ನೀಡಿದ್ದರು ಮಾಹಿತಿ ಇದೆ. ಅವರಿಬ್ಬರ ಒಎಂಆರ್ ಪ್ರತಿ ತಿದ್ದಿ ಅಕ್ರಮ ಎಸಗಲಾಗಿತ್ತು. ಒಎಂಆರ್ ಕಾರ್ಬನ್ ಪ್ರತಿ ಪರಿಶೀಲನೆ ವೇಳೆ ಈತನ ಅಕ್ರಮ ಪತ್ತೆಯಾಗಿತ್ತು. ನಾಗರಾಜ್‌ನನ್ನು ಈ ಹಿಂದೆಯೇ ಬಂಧಿಸಲಾಗಿತ್ತು' ಎಂದೂ ಹೇಳಿವೆ.

'ಪಿಎಸ್‌ಐ ಹುದ್ದೆಗೆ ಅಕ್ರಮವಾಗಿ ಆಯ್ಕೆಯಾಗಲು ಸಹೋದರರು, ಮಧ್ಯವರ್ತಿಯಾಗಿದ್ದ ಎಂಜಿನಿಯರ್ ಮಂಜುನಾಥ್ ಮೇಳಕುಂದಿಗೆ ₹ 1 ಕೋಟಿ ನೀಡಿದ್ದರೆಂದು ಗೊತ್ತಾಗಿದೆ. ಸಹೋದರರು ಅಕ್ರಮವಾಗಿ ಆಯ್ಕೆಯಾಗಿದ್ದು, ಒಎಂಆರ್ ಪರಿಶೀಲನೆ ವೇಳೆ ಪತ್ತೆಯಾಗಿತ್ತು' ಎಂದೂ ಮೂಲಗಳು ತಿಳಿಸಿವೆ.

ಪ್ರಭಾವಿ ರಾಜಕಾರಣಿ, ಹಿರಿಯ ಅಧಿಕಾರಿಗಳ ವಿಚಾರಣೆ?

'ಡಿವೈಎಸ್ಪಿ ಶಾಂತಕುಮಾರ್ ಹಾಗೂ ಇತರರ ವಿಚಾರಣೆ ಮುಂದುವರಿದಿದ್ದು, ಪ್ರಕರಣದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಅನುಮಾನ ಬಂದಿದೆ. ಪ್ರಭಾವಿ ರಾಜಕಾರಣಿ ಹಾಗೂ ಕೆಲ ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆಯಬೇಕಿದೆ. ಹೀಗಾಗಿ, ಅವರನ್ನು ವಿಚಾರಣೆ ಮಾಡಲು ಚಿಂತನೆ ನಡೆದಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ನಾಲ್ವರು ನ್ಯಾಯಾಂಗ ಬಂಧನಕ್ಕೆ

ಸಿಐಡಿ ಅಧಿಕಾರಿಗಳು ಬಂಧಿಸಿ ಕಸ್ಟಡಿಗೆ ಪಡೆದಿದ್ದ ಅಫಜಲ್ಪುರದ ಜಿ.ಪಿ. ರಾಘವೇಂದ್ರ, ಸೋಮನಾಥ್ ಹಿರೇಮಠ ಹಾಗೂ ಮಧ್ಯವರ್ತಿಗಳಾದ ಕೇಶವಮೂರ್ತಿ, ಶಶಿಧರ್ ಅವರನ್ನು ಸೋಮವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕ್ಷಯರೋಗ ನಿವಾರಣೆ: ರೋಗಿಗಳ ದತ್ತು ಯೋಜನೆ

ನವದೆಹಲಿ (ಪಿಟಿಐ): 2025ರ ವೇಳೆಗೆ ಕ್ಷಯರೋಗವನ್ನು (ಟಿ.ಬಿ) ನಿರ್ಮೂಲನೆ ಮಾಡುವ ಗುರಿ ಸಾಧಿಸಲು, ಜನರು ಮತ್ತು ಸಂಘ– ಸಂಸ್ಥೆಗಳು ಕ್ಷಯರೋಗಿಗಳನ್ನು ದತ್ತು ತೆಗೆದುಕೊಳ್ಳುವ ಹೊಸ ಯೋಜನೆಯನ್ನು ಕೇಂದ್ರ ಸರ್ಕಾರವು ಶೀಘ್ರದಲ್ಲೇ ಜಾರಿಗೆ ತರಲಿದೆ.

ಜೂನ್ ವೇಳೆಗೆ ಔಪಚಾರಿಕವಾಗಿ ಕ್ಷಯರೋಗಿಗಳ ದತ್ತುಯೋಜನೆಯನ್ನು ಪ್ರಾರಂಭಿಸಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಚುನಾಯಿತ ಜನ ಪ್ರತಿನಿಧಿಗಳು, ಸರ್ಕಾರೇತರ ಸಂಸ್ಥೆಗಳು, ವ್ಯಕ್ತಿಗಳು, ಸಂಸ್ಥೆಗಳು (ಸಾರ್ವಜನಿಕ ಮತ್ತು ಖಾಸಗಿ ಎರಡೂ) ಮತ್ತು ಕ್ಷಯರೋಗಿಗಳನ್ನು ಅಥವಾ ರೋಗಿಗಳಿರುವ ಬ್ಲಾಕ್‌ಗಳು, ನಗರ ವಾರ್ಡ್‌ಗಳು ಅಥವಾ ಜಿಲ್ಲೆಗಳನ್ನು ದತ್ತು ತೆಗೆದುಕೊಳ್ಳಬಹುದು. ದತ್ತು ಪಡೆದವರು ಈ ರೋಗಿಗಳಿಗೆ ಪೌಷ್ಟಿಕಾಂಶ ಇರುವ ಆಹಾರ ಮತ್ತು ಚಿಕಿತ್ಸೆ ಒದಗಿಸುವ ಕಾರ್ಯಕ್ರಮವನ್ನು ಈ ಯೋಜನೆಯು ಒಳಗೊಂಡಿದೆ.

ಈ ಸಂಬಂಧ ಆರೋಗ್ಯ ಸಚಿವಾಲಯ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸೂಚಿಸಿದೆ.

ರಾಜ್ಯದ ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು, ಮಂಡ್ಯ, ಹಾಸನ, ಕೊಡಗು, ಚಿತ್ರದುರ್ಗ, ಮಂಗಳೂರು, ಬೀದರ್, ವಿಜಯನಗರ ಸೇರಿದಂತೆ ರಾಜ್ಯದ ವಿವಿಧೆಡೆ ಭಾನುವಾರ ರಾತ್ರಿ ಮತ್ತು ಸೋಮವಾರ ಬಿರುಸಿನ ಮಳೆಯಾಗಿದೆ. ಕೆಲವೆಡೆ ಮರಗಳು ಧರೆಗುರುಳಿವೆ. ಇನ್ನೂ ಕೆಲವೆಡೆ ಮನೆ, ಅಂಗಡಿಗಳಿಗೆ ನೀರು ನುಗ್ಗಿದೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ತುಮಕೂರ್ಲಹಳ್ಳಿ ಸಮೀಪದ ಅರಣ್ಯ ಪ್ರದೇಶದಲ್ಲಿ ಸೋಮವಾರ ಸಿಡಿಲು ಬಡಿದು 153 ಕುರಿಗಳು ಹಾಗೂ ಒಂದು ಹಸು ಮೃತಪಟ್ಟಿವೆ.

ಶ್ರೀರಂಗಪಟ್ಟಣ ತಾಲ್ಲೂಕಿನ ರಾಂಪುರ ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ ವಿಷಕಂಠೇಗೌಡ ಅವರ ಪತ್ನಿ ನಾಗರತ್ನಮ್ಮ ಅವರ ಹೆಂಚಿನ ಮನೆಯ ಮೂರು ಗೋಡೆಗಳು ಕುಸಿದಿವೆ.

ಮಡಿಕೇರಿ ಸೇರಿದಂತೆ ಕೊಡಗು ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ. ಸೋಮವಾರಪೇಟೆ ತಾಲ್ಲೂಕಿನ ಹಸಿಮೆಣಸು ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ. ಗಾಳಿ ಮಳೆಗೆ ಕಾಫಿ ತೋಟಗಳಲ್ಲಿ ಮರಗಳು ಬಿದ್ದು ಹಾನಿಯಾಗಿದೆ.

ಹಾವೇರಿ ಜಿಲ್ಲೆಯ ಬ್ಯಾಡಗಿ ಹಾಗೂ ಸುತ್ತಮುತ್ತ ಉತ್ತಮ ಮಳೆಯಾಗಿದ್ದು, ಗಾಳಿಯ ರಭಸಕ್ಕೆ ಅಲ್ಲಲ್ಲಿ ವಿದ್ಯುತ್ ಕಂಬಗಳು ಧರೆಗುರುಳಿವೆ.

ಕರಾವಳಿ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗುತ್ತಿದ್ದು, ಬುಧವಾರ (ಮೇ 18) ರೆಡ್ ಅಲರ್ಟ್ ಘೋಷಿಸಲಾಗಿದೆ. ಮುಂದಿನ ಮೂರ್ನಾಲ್ಕು ದಿನ ಮಂಗಳೂರು, ಉಡುಪಿ ಜಿಲ್ಲೆಯಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಗಾಂಧಿ ಫರ್ ಗ್ರಾಮದ ಸಮೀಪ ಹೆದ್ದಾರಿ ಬದಿಯ ಮರವೊಂದು ಉರುಳಿ ಬಿದ್ದು, ಎರಡು ಗಂಟೆ ಸಂಚಾರಕ್ಕೆ ಅಡಚಣೆಯಾಗಿತ್ತು. ಬಾಳೆಹೊನ್ನೂರು ಭಾಗದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಆಲ್ದೂರು ಪಟ್ಟಣದ ವಾಹನ ನಿಲುಗಡೆ ಪ್ರದೇಶದಲ್ಲಿ ನೀರು ಹರಿಯಿತು. ಗಿರಿಶ್ರೇಣಿ, ಕಳಸ ಭಾಗದಲ್ಲಿ ಉತ್ತಮ ಮಳೆಯಾಗಿದೆ.

ಮಂಗಳೂರಿನಲ್ಲಿ ಸೋಮವಾರ ಸಂಜೆ ಭಾರೀ ಮಳೆ ಸುರಿಯಿತು. ಜಿಲ್ಲೆಯಲ್ಲಿ ಮೂರು ದಿನಗಳ ಕಾಲ ಭಾರಿ ಮಳೆಯ ಮುನ್ಸೂಚನೆ ನೀಡಲಾಗಿದೆ ಪ್ರಜಾವಾಣಿ ಚಿತ್ರ

ಶಿವಲಿಂಗ ಪತ್ತೆ: ಹಿಂದೂ ಪರ ವಕೀಲ

ಒಂದನೇ ಪುಟದಿಂದ

ಹಿಂದೂ ಕಕ್ಷಿದಾರರ ಪರ ವಕೀಲರ ಕೋರಿಕೆಯಂತೆ ನ್ಯಾಯಾಧೀಶರು ಪ್ರವೇಶ ನಿರ್ಬಂಧ ಆದೇಶ ನೀಡಿದ್ದಾರೆ.

ಕೋರ್ಟ್ ನೇಮಿಸಿದ ಕಮಿಷನರ್ ನೇತೃತ್ವದಲ್ಲಿ ಸಮೀಕ್ಷೆ ಕಾರ್ಯ ನಡೆದಿದೆ. ಸಮೀಕ್ಷೆ ಸಂದರ್ಭದಲ್ಲಿ ಎರಡೂ ಕಡೆಯ ವಕೀಲರು ಹಾಜರಿದ್ದರು.

ಪ್ರವೇಶ ನಿರ್ಬಂಧದ ಪ್ರದೇಶದ ಭದ್ರತೆಯನ್ನು ಖಾತರಿಪಡಿಸಿಕೊಳ್ಳಿ ಎಂದು ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತ ಮತ್ತು ವಾರಾಣಸಿಯಲ್ಲಿರುವ ಕೇಂದ್ರ ಮೀಸಲು ಪೊಲೀಸ್ ಪಡೆಯ ಕಮಾಂಡೆಂಟ್‌ಗೆ ನ್ಯಾಯಾಲಯ ಸೂಚಿಸಿದೆ.

ಮಸೀದಿಯ ಗೋಡೆಯ ಹೊರಭಾಗದಲ್ಲಿರುವ ಮೂರ್ತಿಗಳಿಗೆ ನಿತ್ಯವೂ ಪೂಜೆ ನಡೆಸಲು ಅವಕಾಶ ಕೊಡಬೇಕು ಎಂದು ಕೋರಿ ಮಹಿಳೆಯರ ಗುಂಪೊಂದು ಸಲ್ಲಿಸಿದ್ದ ಅರ್ಜಿಯನ್ನು ಸ್ಥಳೀಯ ನ್ಯಾಯಾಲಯವು ವಿಚಾರಣೆ ನಡೆಸುತ್ತಿದೆ. ಈ ವಿಚಾರಣೆಯ ಸಂದರ್ಭದಲ್ಲಿಯೇ ಮಸೀದಿಯೊಳಗೆ ಸಮೀಕ್ಷೆಗೆ ಆದೇಶ ನೀಡಲಾಗಿತ್ತು. ಸಮೀಕ್ಷೆಗೆ ನೇಮಿಸಿದ ಕಮಿಷನರ್ ಪಕ್ಷಪಾತಿಯಾಗಿದ್ದಾರೆ ಎಂದು ಮಸೀದಿ ಆಡಳಿತವು ಆರೋಪಿಸಿತ್ತು. ಹೀಗಾಗಿ, ಸಮೀಕ್ಷೆ ಸ್ವಲ್ಪ ಕಾಲ ಸ್ಥಗಿತಗೊಂಡಿತ್ತು.

ಸೋಮವಾರದ ಸಮೀಕ್ಷೆಯು ಬೆಳಿಗ್ಗೆ 8 ಗಂಟೆಗೆ ಆರಂಭವಾಗಿ 10.15ರವರೆಗೆ ನಡೆಯಿತು.

'ಸಮೀಕ್ಷೆ ಕೆಲಸವು ಎಲ್ಲರಿಗೂ ತೃಪ್ತಿ ತಂದಿದೆ' ಎಂದು ವಾರಾಣಸಿ ಜಿಲ್ಲಾಧಿಕಾರಿ ಕೌಶಲ್ ರಾಜ್ ಶರ್ಮಾ ಹೇಳಿದ್ದಾರೆ.

ಮುಂದಿನ ಆದೇಶ ಇಂದು?: ಸಮೀಕ್ಷೆಯ ನೇತೃತ್ವ ವಹಿಸಿದ್ದ ಕಮಿಷನರ್, ನ್ಯಾಯಾಲಯಕ್ಕೆ ವರದಿ ಕೊಡಲು ಮಂಗಳವಾರದ ವರೆಗೆ ಸಮಯ ನೀಡಲಾಗಿದೆ. ಅವರು ವರದಿ ಕೊಟ್ಟ ಬಳಿಕವೇ, ನ್ಯಾಯಾಲಯವು ಮುಂದಿನ ಆದೇಶ ನೀಡುವ ಸಾಧ್ಯತೆ ಇದೆ.

ಮಂಗಳವಾರವೇ ಆದೇಶ ಪ್ರಕಟವಾಗುವ ಸಾಧ್ಯತೆ ಇದೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ. ಮಸೀದಿಯಲ್ಲಿ ಏನು ಪತ್ತೆಯಾಗಿದೆ ಎಂಬ ಬಗ್ಗೆ ನ್ಯಾಯಾಲಯವು ಆದೇಶ ನೀಡುವವರೆಗೆ ಯಾರೂ ಏನನ್ನೂ ಹೇಳಬಾರದು ಎಂದು ಅವರು ಸೂಚಿಸಿದ್ದಾರೆ. ಮಸೀದಿಯಲ್ಲಿ ಏನು ಪತ್ತೆಯಾಯಿತು ಎಂಬ ಬಗ್ಗೆ ಯಾವುದೇ ವ್ಯಕ್ತಿ ಮಾಹಿತಿ ಬಹಿರಂಗಪಡಿಸಿದರೆ, ಪತ್ತೆಯಾದ ವಸ್ತುವಿನ ಅಧಿಕೃತತೆಯನ್ನು ದೃಢಪಡಿಸಿಕೊಳ್ಳುವುದು ಕಷ್ಟವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಮದ್ರಾಸ್ ಹೈಕೋರ್ಟ್: ವಾಟ್ಸ್‌ಆ್ಯಪ್ ಮೂಲಕ ವಿಚಾರಣೆ

ಚೆನ್ನೈ (ಪಿಟಿಐ): ಮದ್ರಾಸ್ ಹೈಕೋರ್ಟ್ ಇತಿಹಾಸದಲ್ಲಿಯೇ ಮೊದಲ ಬಾರಿಗೆ, ನ್ಯಾಯಮೂರ್ತಿಗಳು ವಾಟ್ಸ್‌ಆ್ಯಪ್ ಮೂಲಕ ಭಾನುವಾರ ಪ್ರಕರಣವೊಂದರ ವಿಚಾರಣೆ ನಡೆಸಿದರು.

ಭಾನುವಾರ ಮದುವೆ ಸಮಾರಂಭದಲ್ಲಿ ಭಾಗವಹಿಸಲು ನಾಗರ್‌ಕೋಯಿಲ್‌ಗೆ ಹೋಗಿದ್ದ ನ್ಯಾಯಮೂರ್ತಿ ಜಿ.ಆರ್.ಸ್ವಾಮಿನಾಥನ್ ಅವರು ಅಲ್ಲಿಂದಲೇ ವಾಟ್ಸ್‌ಆ್ಯಪ್ ಮೂಲಕ ಪ್ರಕರಣದ ವಿಚಾರಣೆ ನಡೆಸಿದರು. ಶ್ರೀ ಅಭೀಷ್ಟ ವರದರಾಜ ಸ್ವಾಮಿ ದೇವಸ್ಥಾನದ ಆನುವಂಶಿಕ ಧರ್ಮದರ್ಶಿ ಪಿ.ಆರ್.ಶ್ರೀನಿವಾಸನ್ ಅವರು ಉದ್ದೇಶಿತ ರಥ ಉತ್ಸವವನ್ನು ಸೋಮವಾರ ನಡೆಸದಿದ್ದರೆ ತಮ್ಮ ಗ್ರಾಮದ ಮೇಲೆ ದೇವರ ವಕ್ರದೃಷ್ಟಿ ಬೀಳಲಿದೆ ಎಂದು ಹೇಳಿ, ಅನುಮತಿಗೆ ಕೋರಿ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆಯನ್ನು ನ್ಯಾಯಮೂರ್ತಿಗಳು ನಡೆಸಿದರು.

'ಅರ್ಜಿದಾರರ ಈ ಶ್ರದ್ಧಾಪೂರ್ವಕ ಪ್ರಾರ್ಥನೆಯು ನಾಗರಕೋಯಿಲ್‌ನಿಂದ ವಾಟ್ಸ್‌ಆ್ಯಪ್ ಮೂಲಕ ತುರ್ತು ವಿಚಾರಣೆ ನಡೆಸುವಂತೆ ಮಾಡಿತು' ಎಂದು ನ್ಯಾಯಮೂರ್ತಿಗಳು ತಮ್ಮ ಆದೇಶದ ಆರಂಭದಲ್ಲಿಯೇ ಹೇಳಿದರು.

ಧರ್ಮಪುರಿ ಜಿಲ್ಲೆಯ ದೇವಸ್ಥಾನಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದ್ದು, ಬೇರೆ ಬೇರೆ ಸ್ಥಳಗಳಲ್ಲಿನ ಅರ್ಜಿದಾರರ ಪರ ವಕೀಲ ವಿ.ರಾಘವಾಚಾರಿ ಮತ್ತು ಅಡ್ವೊಕೇಟ್ ಜನರಲ್ ಆರ್. ಷಣ್ಮುಗಸುಂದರಂ ಅವರ ವಾದವನ್ನು ನಾಗರಕೋಯಿಲ್‌ನಿಂದಲೇ ಆಲಿಸಿದ ನ್ಯಾಯಮೂರ್ತಿಗಳು, ಆನುವಂಶಿಕ ಟ್ರಸ್ಟಿಗೆ ರಥೋತ್ಸವ ನಿಲ್ಲಿಸುವಂತೆ ಆದೇಶಿಸಲು ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ಅಧಿಕಾರವಿಲ್ಲ ಎಂದು ಪರಿಗಣಿಸಿ ಇಲಾಖೆ ಆದೇಶವನ್ನು ರದ್ದುಗೊಳಿಸಿದರು.

ಸರ್ಕಾರವು ನಿಗದಿಪಡಿಸಿದ ನಿಯಮಗಳು ಮತ್ತು ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ದೇವಸ್ಥಾನದ ಅಧಿಕಾರಿಗಳಿಗೆ ನ್ಯಾಯಮೂರ್ತಿಗಳು ನಿರ್ದೇಶನ ನೀಡಿದರು.

ಇದಕ್ಕೂ ಮುನ್ನ ಷಣ್ಮುಗಸುಂದರಂ ಅವರು, ಕಾರ್ಯಕ್ರಮವನ್ನು ಆಯೋಜಿಸುವುದನ್ನು ಸರ್ಕಾರ ವಿರೋಧಿಸುವುದಿಲ್ಲ. ಜನರ ಸುರಕ್ಷತಾ ಮಾನದಂಡಗಳನ್ನು ಅನುಸರಿಸಬೇಕು. ಸುರಕ್ಷತಾ ಮಾನದಂಡಗಳನ್ನು ಅನುಸರಿಸದ ಕಾರಣ, ಇತ್ತೀಚೆಗೆ ತಂಜಾವೂರು ಜಿಲ್ಲೆಯಲ್ಲಿ ಇದೇ ರೀತಿಯ ಮೆರವಣಿಗೆಯಲ್ಲಿ ದುರಂತ ಸಂಭವಿಸಿದೆ. ಅಂತಹ ಅಪಘಾತಗಳು ಮರುಕಳಿಸಬಾರದು ಎಂದು ಅವರು ಹೇಳಿದರು.

'ಅಂತರರಾಷ್ಟ್ರೀಯ ಗಡಿಯಲ್ಲಿ ಪಿಎಲ್‌ಎಯಿಂದ ಅಭಿವೃದ್ಧಿ'

ಗುವಾಹಟಿ (ಪಿಟಿಐ): ಅರುಣಾಚಲ ಪ್ರದೇಶಕ್ಕೆ ಹೊಂದಿಕೊಂಡಂತೆ ಅಂತರರಾಷ್ಟ್ರೀಯ ಗಡಿಯಲ್ಲಿ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಮೂಲಸೌಕರ್ಯ ಅಭಿವೃದ್ಧಿಪಡಿಸುತ್ತಿದೆ ಎಂದು ಭಾರತ ಸೇನೆಯ ಪೂರ್ವ ಕಮಾಂಡ್‌ನ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಆರ್.ಪಿ.ಕಲಿಟ ಅವರು ಹೇಳಿದ್ದಾರೆ.

'ಭಾರತೀಯ ಸೇನೆ ಕೂಡಾ ನಿರಂತರವಾಗಿ ತನ್ನ ಸಾಮರ್ಥ್ಯ ವೃದ್ಧಿ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿದೆ. ಟಿಬೆಟ್ ವಲಯದಲ್ಲಿ ವಾಸ್ತವ ಗಡಿರೇಖೆಗೆ ಹೊಂದಿಕೊಂಡಂತೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿವೆ. ರಸ್ತೆ, ರೈಲು, ವಾಯು ಸಂಪರ್ಕ ಸೌಲಭ್ಯವನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ತ್ವರಿತವಾಗಿ ಸೇನೆ ಕ್ರೋಡೀಕರಿಸುವಲ್ಲಿ ವಿರೋಧಿ ಬಣ ಉತ್ತಮ ಸ್ಥಿತಿಯಲ್ಲಿದೆ' ಎಂದು ಅವರು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹಲ್ಲುಗಳ ಸ್ವಚ್ಛತೆಗಾಗಿ ಐಐಎಸ್‌ಸಿಯಿಂದ ಸಣ್ಣ ರೊಬೋಟ್ ಅಭಿವೃದ್ಧಿ

ನವದೆಹಲಿ (ಪಿಟಿಐ): ಹಲ್ಲುಗಳನ್ನು ಸ್ವಚ್ಛಗೊಳಿಸಲು ಮತ್ತು ರೂಟ್‌ಕೆನಾಲ್‌ನಂತಹ ಚಿಕಿತ್ಸೆಗಳನ್ನು ಯಶಸ್ವಿಯಾಗಿ ನಿರ್ವಹಿಸುವಂತಹ ಪುಟ್ಟ (ನ್ಯಾನೊ) ರೊಬೋಟ್‌ಗಳನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

'ಅಯಸ್ಕಾಂತೀಯ ಕ್ಷೇತ್ರವನ್ನು ಬಳಸಿಕೊಂಡು ನ್ಯಾನೊ ಗಾತ್ರದ ರೊಬೋಟ್‌ಗಳು ದಂತ ಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತವೆ' ಎಂದು ಐಐಎಸ್‌ಸಿ ಸಂಶೋಧಕರ ತಂಡವು ಅಧ್ಯಯನದಿಂದ ಕಂಡುಕೊಂಡಿದೆ.

ಈ ಸಂಬಂಧ 'ಅಡ್ವಾನ್ಸ್ಡ್ ಹೆಲ್ತ್‌ಕೇರ್ ಮೆಟೀರಿಯಲ್ಸ್' ಜರ್ನಲ್‌ನಲ್ಲಿ ಅಧ್ಯಯನದ ಸಾರಾಂಶ ಪ್ರಕಟವಾಗಿದ್ದು, ಸಂಶೋಧಕರು ಕಬ್ಬಿಣ ಲೇಪಿತ ಸಿಲಿಕಾನ್ ಡೈಆಕ್ಸೈಡ್‌ನಿಂದ ಮಾಡಿದ ಹೆಲಿಕಲ್ ನ್ಯಾನೊ ರೊಬೋಟ್‌ಗಳನ್ನು ವಿನ್ಯಾಸಗೊಳಿಸಿದ್ದಾರೆ. ಕಡಿಮೆ ತೀವ್ರತೆಯ ಅಯಸ್ಕಾಂತೀಯ ಕ್ಷೇತ್ರವನ್ನು ಉತ್ಪಾದಿಸುವ ಸಾಧನವನ್ನು ಬಳಸಿ ಈ ರೊಬೋಟ್‌ಗಳನ್ನು ನಿಯಂತ್ರಿಸಬಹುದಾಗಿದೆ ಎಂದು ಅಧ್ಯಯನವು ತಿಳಿಸಿದೆ.

'ಅಧ್ಯಯನದ ಸಂದರ್ಭದಲ್ಲಿ ಹಲ್ಲಿನ ಮಾದರಿಗಳಿಗೆ ಈ ನ್ಯಾನೊ ರೊಬೋಟ್‌ಗಳನ್ನು ಚುಚ್ಚಿ, ಸೂಕ್ಷ್ಮದರ್ಶಕದ ಮೂಲಕ ಅವುಗಳ ಚಾಲನೆಯನ್ನು ಟ್ರ್ಯಾಕ್ ಮಾಡಲಾಯಿತು. ದಂತನಾಳದ ಕೊಳವೆಯಲ್ಲಿನ ಅಂಗಾಂಶದಲ್ಲಿರುವ ಸೂಕ್ಷ್ಮ ಬ್ಯಾಕ್ಟೀರಿಯಾವನ್ನೂ ರೊಬೋಟ್‌ಗಳು ನಾಶಪಡಿಸುವ ಸಾಮರ್ಥ್ಯವನ್ನು ಹೊಂದಿವೆ ಎಂಬುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಈಗಿರುವ ದಂತ ವೈದ್ಯಕೀಯ ಕ್ಷೇತ್ರದಲ್ಲಿರುವ ತಂತ್ರಜ್ಞಾನವು ಎಲ್ಲಾ ಬ್ಯಾಕ್ಟೀರಿಯಾವನ್ನು ಕೊಲ್ಲುವಷ್ಟು ಪರಿಣಾಮಕಾರಿಯಾಗಿಲ್ಲ' ಎಂದು ಐಐಎಸ್‌ಸಿಯ ಇನ್‌ಕ್ಯುಬೇಟೆಡ್ ಸ್ಟಾರ್ಟ್‌ಅಪ್‌ನ ಸಹ ಸಂಸ್ಥಾಪಕ ಮತ್ತು ನ್ಯಾನೋ ವಿಜ್ಞಾನ ಹಾಗೂ ಎಂಜಿನಿಯರಿಂಗ್ ಕೇಂದ್ರದ ಸಂಶೋಧನಾ ಸಹಾಯಕ ಷಣ್ಮುಖ ಶ್ರೀನಿವಾಸ್ ಮಾಹಿತಿ ನೀಡಿದ್ದಾರೆ.

ಹಲ್ಲಿನ ರೂಟ್ ಕೆನಾಲ್ ಚಿಕಿತ್ಸೆಯ ವೇಳೆಯಲ್ಲಿ ಎಲ್ಲಾ ಬ್ಯಾಕ್ಟೀರಿಯಾಗಳನ್ನು ಸಂಪೂರ್ಣವಾಗಿ ತೆಗೆದುಹಾಕಲು ಸಾಧ್ಯವಿಲ್ಲ. ಆದರೆ, ವಿಜ್ಞಾನಿಗಳು ಅಭಿವೃದ್ಧಿಪಡಿಸಿರುವ ನ್ಯಾನೊ ರೊಬೋಟ್‌ಗಳು ಎಲ್ಲಾ ಬ್ಯಾಕ್ಟೀರಿಯಾಗಳನ್ನು ಸಂಪೂರ್ಣವಾಗಿ ತೆಗೆದುಹಾಕುವ ಸಾಮರ್ಥ್ಯವನ್ನು ಹೊಂದಿವೆ ಎನ್ನಲಾಗಿದೆ.

ಮಳೆಗಾಗಿ ಪ್ರಾರ್ಥನೆ ಜಾರ್ಖಂಡ್ ರಾಜಧಾನಿ ರಾಂಚಿಯ ಹೊರವಲಯದಲ್ಲಿರುವ ಶಿವ ದೇವಾಲಯದ ಆವರಣದಲ್ಲಿ ಮಂಡ ಪೂಜೆ ಉತ್ಸವದ ಅಂಗವಾಗಿ ಮಳೆ, ಸಮೃದ್ಧಿ ಮತ್ತು ಉತ್ತಮ ಆರೋಗ್ಯಕ್ಕಾಗಿ ಬುಡಕಟ್ಟು ಸಮುದಾಯದ ರೈತರು ಪ್ರಾರ್ಥನೆ ಸಲ್ಲಿಸಿದರು ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಎಂಟು ಉಗ್ರರ ಸೆರೆ

ಶ್ರೀನಗರ: ಜಮ್ಮು–ಕಾಶ್ಮೀರದ ಬಂಡಿಪೋರಾ ಜಿಲ್ಲೆಯಲ್ಲಿ ಸೋಮವಾರ ಉಗ್ರರ ಸಂಚನ್ನು ವಿಫಲಗೊಳಿಸಿರುವ ಭದ್ರತಾ ಪಡೆಗಳು, ಈ ಸಂಬಂಧ ಲಷ್ಕರ್–ಎ–ತೈಯಬ (ಎಲ್‌ಇಟಿ) ಸಂಘಟನೆಯ ಎಂಟು ಉಗ್ರರನ್ನು ಬಂಧಿಸಿವೆ.

ಪಾಕಿಸ್ತಾನಿ ತರಬೇತಿ ಪಡೆದ ಉಗ್ರ ಆರಿಫ್ ಅಜಾಜ್ ಸೆಹ್ರಿ ಅಲಿಯಾಸ್ ಅಫ್ಲಾಲ್, ಹೈಬ್ರಿಡ್ ಉಗ್ರರಾದ ಅಜಾಜ್ ಅಹ್ಮದ್ ರೇಶಿ, ಶಾರಿಕ್ ಅಹ್ಮದ್ ಲೋನ್ ಹಾಗೂ ಸಹಚರರಾದ ರಿಯಾಜ್ ಅಹ್ಮದ್ ಮಿರ್, ಗುಲಾಂ ಮೊಹಮ್ಮದ್ ವಾಜಾ, ಮಕ್ಸೂದ್ ಅಹ್ಮದ್ ಮಲಿಕ್ ಮತ್ತು ಶೀಮಾ ಶಫಿ ಬಂಧಿತರು.

'ಬಂಡಿಪೋರಾದಲ್ಲಿನ ಇತ್ತೀಚಿನ ಎನ್‌ಕೌಂಟರ್‌ಗಳ ಕುರಿತು ಪೊಲೀಸರು ಹಾಗೂ ಭದ್ರತಾ ಪಡೆಗಳು ತನಿಖೆ ನಡೆಸುತ್ತಿದ್ದ ವೇಳೆ ಪಾಕಿಸ್ತಾನಿ ತರಬೇತಿ ಭಯೋತ್ಪಾದಕ, ಇಬ್ಬರು ಹೈಬ್ರಿಡ್ ಉಗ್ರರು ಹಾಗೂ ಮಹಿಳೆ ಸೇರಿ ನಾಲ್ವರು ಉಗ್ರರ ಸಹಚರರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ವಕ್ತಾರರು ತಿಳಿಸಿದರು.

ರಾಹುಲ್ ಭಟ್ ಹತ್ಯೆ: ಕಾಶ್ಮೀರಿ ಪಂಡಿತರ ಮುಂದುವರಿದ ಪ್ರತಿಭಟನೆ

ಶ್ರೀನಗರ (ಪಿಟಿಐ): ಬುದ್ಗಾಮ್ ಜಿಲ್ಲೆಯ ಚದೂರದಲ್ಲಿರುವ ಕಚೇರಿಯೊಳಗೆಯೇ ನೌಕರ ರಾಹುಲ್ ಭಟ್ ಅವರನ್ನು ಉಗ್ರರು ಗುಂಡಿಟ್ಟು ಕೊಂದಿರುವುದನ್ನು ವಿರೋಧಿಸಿ ಜಮ್ಮು–ಕಾಶ್ಮೀರದ ಗಂದರ್‌ಬಾಲ್ ಮತ್ತು ಅನಂತ್‌ನಾಗ್ ಜಿಲ್ಲೆಗಳಲ್ಲಿ ಸೋಮವಾರವೂ ಕಾಶ್ಮೀರಿ ಪಂಡಿತರ ಪ್ರತಿಭಟನೆಯು ಮುಂದುವರಿಯಿತು.

ಹಲವು ಕಾಶ್ಮೀರಿ ಪಂಡಿತರು ಗಂದರ್‌ಬಾಲ್ ಜಿಲ್ಲೆಯ ತುಲ್ಮುಲ್ಲಾದಲ್ಲಿ ತಮ್ಮ ಸಮುದಾಯದ ಸದಸ್ಯನ ಹತ್ಯೆಯನ್ನು ವಿರೋಧಿಸಲು ಸಮಾವೇಶಗೊಂಡಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಭಟನಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಪ್ರತಿಕೃತಿಗಳನ್ನು ದಹಿಸಿದರು.

ಅಭಿಜಿತ್ ಸರ್ಕಾರ್ ಹತ್ಯೆ ಪ್ರಕರಣ: ಟಿಎಂಸಿ ಶಾಸಕನಿಗೆ ಸಿಬಿಐ ಸಮನ್ಸ್

ಕೋಲ್ಕತ್ತ (ಪಿಟಿಐ): 'ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರದ ಪ್ರಕರಣಗಳ ತನಿಖೆ ನಡೆಸುತ್ತಿರುವ ಸಿಬಿಐ, ಬಿಜೆಪಿ ಕಾರ್ಯಕರ್ತ ಅಭಿಜಿತ್ ಸರ್ಕಾರ್ ಅವರ ಹತ್ಯೆಯ ತನಿಖೆಗೆ ಸಂಬಂಧಿಸಿದಂತೆ ಟಿಎಂಸಿ ಶಾಸಕ ಪರೇಶ್ ಪಾಲ್ ಅವರಿಗೆ ಸಮನ್ಸ್ ನೀಡಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

'ಸರ್ಕಾರ್ ಹತ್ಯೆಗೆ ಸಂಬಂಧಿಸಿದಂತೆ ನಗರದಲ್ಲಿರುವ ಸಿಬಿಐ ಕಚೇರಿಯಲ್ಲಿ ಅಧಿಕಾರಿಗಳ ಮುಂದೆ ಹಾಜರಾಗುವಂತೆ ಪಾಲ್ ಅವರಿಗೆ ಸೂಚಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಹಿರಿಯ ನಾಗರಿಕರಿಗೆ ರಿಯಾಯಿತಿ ರದ್ದು ರೈಲ್ವೆಗೆ ₹ 1,500 ಕೋಟಿ ಹೆಚ್ಚುವರಿ ಆದಾಯ

ನವದೆಹಲಿ (ಪಿಟಿಐ): ಹಿರಿಯ ನಾಗರಿಕರಿಗೆ ಪ್ರಯಾಣದರದಲ್ಲಿ ನೀಡುತ್ತಿದ್ದ ರಿಯಾಯಿತಿಯನ್ನು ರದ್ದುಪಡಿಸಿದ್ದರಿಂದಾಗಿ ಭಾರತೀಯ ರೈಲ್ವೆಯು ಕಳೆದ ಎರಡು ವರ್ಷಗಳಲ್ಲಿ ₹ 1,500 ಕೋಟಿ ಹೆಚ್ಚುವರಿ ಆದಾಯ ಗಳಿಸಿದೆ.

ಹಿರಿಯ ನಾಗರಿಕರಿಗೆ ಪ್ರಯಾಣದರದಲ್ಲಿ ನೀಡುತ್ತಿದ್ದ ರಿಯಾಯಿತಿಯನ್ನು ಮಾರ್ಚ್ 2020ರಲ್ಲಿ ಕೊರೊನಾ ಪರಿಸ್ಥಿತಿ ಕಾರಣದಿಂದಾಗಿ ರದ್ದುಪಡಿಸಲಾಗಿತ್ತು ಎಂದು ಆರ್‌ಟಿಐ ಅರ್ಜಿಗೆ ನೀಡಿರುವ ಉತ್ತರದಲ್ಲಿ ರೈಲ್ವೆ ಇಲಾಖೆ ತಿಳಿಸಿದೆ.

ಮಧ್ಯಪ್ರದೇಶದ ಚಂದ್ರಶೇಖರ್ ಗೌರ್ ಅರ್ಜಿ ಸಲ್ಲಿಸಿದ್ದರು. ಮಾರ್ಚ್ 20, 2020 ಮತ್ತು ಮಾರ್ಚ್ 31, 2022ರ ಅವಧಿಯಲ್ಲಿ ಸಮಾರು 7.31 ಕೋಟಿ ಹಿರಿಯ ನಾಗರಿಕ ಪ್ರಯಾಣಿಕರಿಗೆ ಟಿಕೆಟ್ ದರದಲ್ಲಿ ರಿಯಾಯಿತಿ ನೀಡಿಲ್ಲ ಎಂದು ತಿಳಿಸಿದೆ.

ಗೋವಾದಲ್ಲಿ ಮಹಿಳೆ ಕೊಲೆ: ಕರ್ನಾಟಕ ಮೂಲದ ವ್ಯಕ್ತಿ ಬಂಧನ

ಪಣಜಿ (ಪಿಟಿಐ): ಗೋವಾದಲ್ಲಿ 54 ವರ್ಷದ ಮಹಿಳೆಯೊಬ್ಬರನ್ನು ಕೊಲೆ ಮಾಡಿ ತಪ್ಪಿಸಿಕೊಂಡಿದ್ದ ಆರೋಪದ ಮೇಲೆ ಕರ್ನಾಟಕ ಮೂಲದ ಹುಸೇನ್ ಖಾನ್ (40) ಎಂಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮೇ 6 ರಂದು ದಕ್ಷಿಣ ಗೋವಾದ ಸಾನ್ವೊರ್‌ದಿಮ್ ಗ್ರಾಮದ ಬಳಿ ನಿರ್ಜನ ಪ್ರದೇಶವೊಂದರಲ್ಲಿ ರೂಪಾ ಪಾರ್ಕರ್ ಎಂಬುವವರನ್ನು ಕೊಲೆ ಮಾಡಲಾಗಿತ್ತು. ವೃತ್ತಿಯಲ್ಲಿ ಕ್ಯಾಬ್ ಚಾಲಕನಾದ ಹುಸೇನ್ ಖಾನ್ ಅವರು ಬಸ್‌ಗೆ ಕಾಯುತ್ತಿದ್ದ ರೂಪಾ ಪಾರ್ಕರ್ ಅವರಿಗೆ ಡ್ರಾಪ್ ನೀಡುವ ನೆಪದಲ್ಲಿ ಅವರನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದ. ಬಳಿಕ ಅವರ ಬಳಿ ಇದ್ದ ಚಿನ್ನಾಭರಣವನ್ನು ದರೋಡೆ ಮಾಡಿದ್ದ.

ಹುಸೇನ್ ಖಾನ್ ಚಿನ್ನಾಭರಣಗಳನ್ನು ಮಾರಾಟ ಮಾಡಿ ತನ್ನ ಸಾಲ ತೀರಿಸಿದ್ದ. ದ್ವಿಚಕ್ರ ವಾಹನವನ್ನೂ ಖರೀದಿಸಿದ್ದ ಎಂದು ದಕ್ಷಿಣ ಗೋವಾ ಎಸ್‌ಪಿ ಅಭಿಷೇಕ್ ದಾನಿಯಾ ತಿಳಿಸಿದ್ದಾರೆ.

ಲೋಕಪಾಲ: ನೂತನ ಮುಖ್ಯಸ್ಥರ ನೇಮಕಕ್ಕೆ ಪ್ರಕ್ರಿಯೆ ಆರಂಭ

ನವದೆಹಲಿ (ಪಿಟಿಐ): ಲೋಕಪಾಲ ಮುಖ್ಯಸ್ಥ ನ್ಯಾಯಮೂರ್ತಿ ಪಿನಾಕಿ ಚಂದ್ರ ಘೋಷ್ ಅವರ ಅಧಿಕಾರಾವಧಿ ಇದೇ 27ಕ್ಕೆ ಕೊನೆಗೊಳ್ಳುವುದರಿಂದ, ಮುಂದಿನ ಮುಖ್ಯಸ್ಥರ ನೇಮಕಕ್ಕೆ ಕೇಂದ್ರ ಸರ್ಕಾರ ಪ್ರಕ್ರಿಯೆಯನ್ನು ಆರಂಭಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಲೋಕಪಾಲ ಸಂಸ್ಥೆಯು ಅಧ್ಯಕ್ಷರ ನೇತೃತ್ವದಲ್ಲಿ ಎಂಟು ಸದಸ್ಯರನ್ನು ಹೊಂದಿರುತ್ತದೆ. ಅವರಲ್ಲಿ ನಾಲ್ವರು ನ್ಯಾಯಾಂಗ ಅಧಿಕಾರಿಗಳಾಗಿದ್ದರೆ, ಉಳಿದವರು ನ್ಯಾಯಾಂಗೇತರ ಅಧಿಕಾರಿಗಳು. ಪ್ರಸ್ತುತ ಲೋಕಪಾಲದಲ್ಲಿ ಆರು ಸದಸ್ಯರಿದ್ದು, ಎರಡು ಸದಸ್ಯ ಸ್ಥಾನಗಳು (ನ್ಯಾಯಾಂಗ ಅಧಿಕಾರಿ) ಎರಡು ವರ್ಷಗಳಿಗೂ ಅಧಿಕ ಸಮಯದಿಂದ ಖಾಲಿ ಇವೆ.

2019ರ ಮಾರ್ಚ್ 23ರಂದು ಪಿನಾಕಿ ಚಂದ್ರ ಘೋಷ್ ಅವರು ಲೋಕಪಾಲದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದರು. ಲೋಕಪಾಲ ಸಂಸ್ಥೆಯ ಮುಖ್ಯಸ್ಥರು ಮತ್ತೆ ಸದಸ್ಯರನ್ನು ಐದು ವರ್ಷಗಳ ಅವಧಿಗೆ ಅಥವಾ 70 ವಯಸ್ಸನ್ನು ತಲುಪುವವರೆಗೆ ನೇಮಕ ಮಾಡಲಾಗುತ್ತದೆ.

ಕ್ಷೇಮ ಕುಶಲ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಆರೋಗ್ಯವೇ ಆನಂದ ಆನಂದವೇ ಆರೋಗ್ಯ

ಡಾ. ಕಿರಣ್ ವಿ. ಎಸ್.

ಆನಂದವಾಗಿ ಬದುಕುವುದು ಪ್ರತಿಯೊಬ್ಬರ ಕನಸು. ನಾಳಿನ ಸಂತಸಕ್ಕಾಗಿ ಇಂದು ಕಷ್ಟ ಪಡಬೇಕು ಎನ್ನುವ ಧ್ಯೇಯ ಪ್ರಪಂಚದ ಬಹುತೇಕರದ್ದು. ಅಂತೆಯೇ, ಒಳ್ಳೆಯ ಆರೋಗ್ಯ ಕೂಡ. ಕಡೆಗಾಲದವರೆಗೆ ಆರೋಗ್ಯವಾಗಿ ಇರಬೇಕೆನ್ನುವ ಅಭಿಲಾಷೆ ಎಲ್ಲರದ್ದೂ ಆಗಿರುತ್ತದೆ. ಆರೋಗ್ಯಕ್ಕೂ ಆನಂದಕ್ಕೂ ಪರಸ್ಪರ ಸಂಬಂಧವಿದೆಯೇ? ಒಂದು ಮತ್ತೊಂದನ್ನು ಪ್ರಚೋದಿಸುತ್ತದೆಯೇ?

ಬಹುಕಾಲದ ದುಃಖ, ಖಿನ್ನತೆಗಳು ದೈಹಿಕ ಮತ್ತು ಮಾನಸಿಕ ಆರೋಗ್ಯಗಳನ್ನು ದುರ್ಬಲಗೊಳಿಸುತ್ತವೆ ಎಂಬುದು ಸಿದ್ಧವಾಗಿದೆ. ಇದಕ್ಕೆ ವಿಲೋಮವಾಗಿ, ಆನಂದದ ಭಾವ ಒಳ್ಳೆಯ ಆರೋಗ್ಯಕ್ಕೆ ಕಾರಣವಾಗಬಹುದು ಎಂಬ ಊಹೆ ತರ್ಕಬದ್ಧವಾದದ್ದು. ಆನಂದಕ್ಕೆ ಅನೇಕ ಆಯಾಮಗಳಿವೆ. ಸಂತಸದ ಭಾವ, ಸ್ವಾತಂತ್ರ್ಯ, ಜೀವನದ ಅರ್ಥೋದ್ದೇಶಗಳನ್ನು ಕಂಡುಕೊಳ್ಳುವಿಕೆ, ಏಳಿಗೆ, ಸಮಾಧಾನದ ಬದುಕು, ವೈಯಕ್ತಿಕ ವಿಕಸನ – ಮುಂತಾದವು ಆನಂದದ ಪರಿಭಾಷೆಗಳು. ಉತ್ತಮ ಜೀವನಶೈಲಿ, ನಿಯಮಿತ ವ್ಯಾಯಾಮ, ಕ್ರಮಬದ್ಧ ಆಹಾರ ಮೊದಲಾದ ಪದ್ಧತಿಗಳು ದೀರ್ಘಕಾಲಿಕ ಆನಂದಕ್ಕೆ ಕಾರಣವಾಗಬಲ್ಲವು. ಇವು ಸ್ವತಂತ್ರವಾಗಿಯೇ ಉತ್ತಮ ಆರೋಗ್ಯ ನೀಡಬಲ್ಲವು. ಆನಂದಕರ ಮನಸ್ಸು ಶರೀರದ ಹಾರ್ಮೋನ್‌ಗಳನ್ನು ಸಮಸ್ಥಿತಿಯಲ್ಲಿ ಇಡುತ್ತದೆ; ರೋಗನಿರೋಧಕ ಶಕ್ತಿಯನ್ನು ಬೆಳೆಸುತ್ತದೆ; ಚಯಾಪಚಯಗಳನ್ನು ನಿಯಂತ್ರಣದಲ್ಲಿ ಇಡುತ್ತದೆ. ಇವೆಲ್ಲವೂ ಆರೋಗ್ಯದ ವಿಷಯದಲ್ಲಿ ಧನಾತ್ಮಕ ಅಂಶಗಳು.

ಕಳೆದ ಶತಮಾನದ ದ್ವಿತೀಯಾರ್ಧದಲ್ಲಿ ಪಾಶ್ಚಾತ್ಯ ದೇಶಗಳಲ್ಲಿನ ಜೀವನದರ್ಶನ ಸಾಕಷ್ಟು ಬದಲಾವಣೆ ಹೊಂದಿತು. ಇಪ್ಪತ್ತನೆಯ ಶತಮಾನದ ಮೊದಲಾರ್ಧ ಎರಡು ಭೀಕರ ಮಹಾಯುದ್ಧಗಳನ್ನು ಕಂಡಿತ್ತು. ಜನಸಾಮಾನ್ಯರ ಜೀವನದ ಮೇಲೆ ಅಪಾರ ಪ್ರಭಾವ ಬೀರಿದ ಈ ಘೋರ ಯುದ್ಧಗಳು ಬದುಕಿನ ಅರ್ಥವನ್ನು ಅಲುಗಾಡಿಸಿದ್ದವು. 1954ರಲ್ಲಿ ಅಮೆರಿಕೆಯ ಪ್ರಸಿದ್ಧ ಮನೋತಜ್ಞ ಅಬ್ರಹಾಮ್ ಮಾಸ್ಲೊ ‘ಪ್ರತಿಯೊಂದು ಪ್ರಗತಿಯೂ ಜೀವವನ್ನು ಉಳಿಸಲು ಹೆಣಗುತ್ತಿದೆಯೇ ಹೊರತು ಬದುಕಿನ ಮೌಲ್ಯಾಭಿವೃದ್ಧಿಗೆ ಆಗುತ್ತಿಲ್ಲ’ ಎಂದು ಅಭಿಪ್ರಾಯ ಪಟ್ಟಿದ್ದರು. ಆನಂತರದ ದಶಕಗಳಲ್ಲಿ ಬದುಕನ್ನು ಹೆಚ್ಚು ಒಳಿತುಗೊಳಿಸುವುದು ಹೇಗೆಂಬ ಚಿಂತನೆಗಳು, ಅಧ್ಯಯನಗಳು ನಡೆದವು. ಜೀವನ ಸರಳರೇಖೆಯ ಪಯಣವಲ್ಲ; ಅದು ಹಲವಾರು ಏಳುಬೀಳುಗಳ ಮೂಲಕ ಹಾದುಹೋಗುವ ಕಸರತ್ತು. ಬದುಕಿನಲ್ಲಿ ಸಂತಸ ಹೊಂದಲು ಏಳುಬೀಳುಗಳನ್ನು ಸಮಾನವಾಗಿ ಗುರುತಿಸಬೇಕು; ಬೀಳುಗಳನ್ನು ನಿರಾಕರಿಸಬಾರದು ಎನ್ನುವುದು ಮನೋವೈದ್ಯರ ಅಭಿಪ್ರಾಯ. ಬದುಕನ್ನು ಸಹ್ಯವಾಗಿಸುವ ಮೂರು ಆಧಾರಗಳನ್ನು ತಜ್ಞರು ಗುರುತಿಸುತ್ತಾರೆ: ವೈಯಕ್ತಿಕ ಧನಾತ್ಮಕ ಅನುಭವಗಳು (ಆನಂದ, ತೃಪ್ತಿ); ವ್ಯಕ್ತಿ-ವಿಶೇಷ ಲಕ್ಷಣಗಳು (ಒಳ್ಳೆಯ ನಡತೆ, ಸಮಾಜದ ಅಂಗೀಕಾರ); ವ್ಯಕ್ತಿಯು ತೊಡಗಿಸಿಕೊಂಡ ಸಂಘಗಳು (ಕುಟುಂಬ, ಕೆಲಸದ ತಾಣ, ಸಾಮಾಜಿಕ ಚಟುವಟಿಕೆಗಳ ಕೇಂದ್ರಗಳು). ಈ ಎಲ್ಲೆಡೆ ಉತ್ತಮ ಫಲಿತಾಂಶಗಳು ದೊರೆಯುತ್ತಿದ್ದರೆ ವ್ಯಕ್ತಿಯ ಆನಂದದ ಮಟ್ಟ ಏರುತ್ತದೆ. ಅಂತೆಯೇ, ಜೀವನದ ಪಯಣ ಇಳಿಮುಖವಾದಾಗ ಈ ಎಡೆಗಳಲ್ಲಿನ ಉತ್ತಮ ಸಂಬಂಧಗಳು ವ್ಯಕ್ತಿಯ ಆಧಾರಕ್ಕೆ ನಿಲ್ಲುತ್ತವೆ; ಕಷ್ಟಗಳನ್ನು ಸಹ್ಯವಾಗಿಸುತ್ತವೆ. ಈ ರೀತಿಯಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ಬೆಂಬಲವಿರುವ ವ್ಯಕ್ತಿಗಳು ದೈಹಿಕ ಮತ್ತು ಮಾನಸಿಕ ಅನಾರೋಗ್ಯಗಳಿಂದ ಬೇಗನೆ ಚೇತರಿಸಿಕೊಳ್ಳುತ್ತಾರೆ ಎಂದು ಹಲವಾರು ಸಂಶೋಧನೆಗಳು ತಿಳಿಸಿವೆ.

ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯ. ವಿಶ್ವ ಆರೋಗ್ಯ ಸಂಸ್ಥೆ ಮಾನಸಿಕ ಆರೋಗ್ಯವನ್ನು ‘ವ್ಯಕ್ತಿಯು ತನ್ನ ಸ್ವಂತ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಬಲ್ಲ, ಜೀವನದ ಸಾಮಾನ್ಯ ಒತ್ತಡಗಳನ್ನು ನಿರ್ವಹಿಸಬಲ್ಲ, ತನಗೆ, ತನ್ನ ಕುಟುಂಬಕ್ಕೆ, ತನ್ನ ಸಮಾಜಕ್ಕೆ ಫಲದಾಯಕವಾಗುವಂತಹ ಕೆಲಸಗಳನ್ನು ಮಾಡಬಲ್ಲ, ಒಟ್ಟಾರೆ ತಾನು ವಾಸಿಸುವ ವ್ಯವಸ್ಥೆಗೆ ಧನಾತ್ಮಕ ಕಾಣಿಕೆಯನ್ನು ನೀಡಬಲ್ಲ ಸ್ಥಿತಿ’ ಎಂದು ವ್ಯಾಖ್ಯಾನಿಸಿದೆ. ಅಂದರೆ, ವೈಯಕ್ತಿಕ ಮತ್ತು ಸಾಂಘಿಕ ಜೀವನಕ್ಕೆ ನೆರವಾಗಬಲ್ಲ ಆರೋಗ್ಯಕರ ಮನಃಸ್ಥಿತಿಯನ್ನು ಮಾನಸಿಕ ಆರೋಗ್ಯ ಎನ್ನಬಹುದು.

ಸಂತಸದ ಮೂಲಗಳು ಯಾವುವು? ಯಾವುದೇ ವ್ಯಕ್ತಿ ಮೂರು ವಿಧಗಳಿಂದ ಆನಂದ ಪಡೆಯಬಹುದು: ಇತರರಿಗೆ ಒಳಿತನ್ನು ಮಾಡುವುದರಿಂದ; ತನಗೆ ನೈಪುಣ್ಯವಿರುವ ಕೆಲಸಗಳನ್ನು ಮಾಡುವುದರಿಂದ; ಮತ್ತು ತನ್ನ ಸ್ವಂತಕ್ಕೆ ಮತ್ತು ಕುಟುಂಬಕ್ಕೆ ಒಳಿತನ್ನು ಮಾಡುವುದರಿಂದ. ಈ ಮೂರೂ ರೀತಿಯ ಕೆಲಸಗಳು ದೈಹಿಕ ಮತ್ತು ಮಾನಸಿಕ ಸಂತುಲನಗಳಿಗೆ ಕಾರಣವಾಗುತ್ತವೆ. ಇದು ಉತ್ತಮ ಆರೋಗ್ಯಕ್ಕೂ, ಅನಾರೋಗ್ಯದಿಂದ ಶೀಘ್ರವಾಗಿ ಚೇತರಿಸಿಕೊಳ್ಳುವುದಕ್ಕೂ ನೆರವಾಗುತ್ತವೆ. ದೀರ್ಘಕಾಲಿಕ ಕಾಯಿಲೆಗಳಿಂದ ಬಳಲುವವರೂ ತಮ್ಮ ನೆಚ್ಚಿನ ಕೆಲಸಗಳನ್ನು ಮಾಡುವಾಗ ನೋವನ್ನು ಮರೆಯುತ್ತಾರೆ. ಅಂತಹ ಸಂದರ್ಭಗಳಲ್ಲಿ ಅವರ ಔಷಧಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಎಂದು ಸಿದ್ಧವಾಗಿದೆ. ಶರೀರದ ಸಹಜ ರೋಗನಿರೋಧಕ ವ್ಯವಸ್ಥೆ ಇಂತಹ ಸಂಧರ್ಭಗಳಲ್ಲಿ ಹೆಚ್ಚು ಚುರುಕಾಗಿರುತ್ತದೆ.

2005ರಲ್ಲಿ ಪ್ರಕಟವಾದ ಅಧ್ಯಯನವೊಂದರಲ್ಲಿ ಬ್ರಿಟನ್ನಿನ ಸಂಶೋಧಕರು ಶರೀರದ ಜೈವಿಕ ಕ್ರಿಯೆಗಳ ಮೇಲೆ ಸಂತಸದ ಮನಃಸ್ಥಿತಿಯ ಪರಿಣಾಮಗಳನ್ನು ಅಳೆದರು. ಸತತ ಮೂರು ವರ್ಷಗಳ ಕಾಲ ನಡೆಸಿದ ಈ ಸಂಶೋಧನೆಯಲ್ಲಿ ಮಧ್ಯವಯಸ್ಕ ವ್ಯಕ್ತಿಗಳ ಮೇಲೆ ಆಯಾ ದಿನದ ಕೆಲಸದ ಕೊನೆಯಲ್ಲಿ ಅವರ ಆನಂದದ ಸ್ಥಿತಿಯನ್ನು ಶರೀರದ ಸಹಜ ಸ್ಟೀರಾಯ್ಡ್ ಹಾರ್ಮೋನುಗಳ ಮಟ್ಟ; ಒತ್ತಡದ ಸಮಯದಲ್ಲಿ ಬಿಡುಗಡೆಯಾಗುವ ರಾಸಾಯನಿಕಗಳ ಮಟ್ಟ; ಹೃದಯ ಬಡಿತದ ಗತಿ; ರಕ್ತದ ಒತ್ತಡ ಮೊದಲಾದುವುಗಳ ಜೊತೆಯಲ್ಲಿ ಹೋಲಿಕೆ ಮಾಡಿದರು. ಒಂದೇ ರೀತಿಯ ಕೆಲಸ ಮಾಡುವ, ಸರಿಸುಮಾರು ಒಂದೇ ವಯಸ್ಸಿನ, ಒಂದೇ ರೀತಿಯ ಸಾಮಾಜಿಕ ಹಿನ್ನೆಲೆಯ ವ್ಯಕ್ತಿಗಳ ಮಧ್ಯೆ ಸಂತಸದ ಮನಃಸ್ಥಿತಿ ಉಳ್ಳವರು ಹೆಚ್ಚು ಆರೋಗ್ಯಶಾಲಿಗಳೂ, ಕಡಿಮೆ ಕಾಯಿಲೆ ಬೀಳುವವರೂ, ಅನಾರೋಗ್ಯಗಳಿಂದ ಬೇಗನೇ ಚೇತರಿಸಿಕೊಳ್ಳುವವರೂ ಆಗಿದ್ದರು. ಈ ರೀತಿಯ ಪರಿಣಾಮಗಳು ವೃದ್ಧಾಪ್ಯಕ್ಕೂ ವಿಸ್ತರಿಸುತ್ತವೆ ಎಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ. ಅಂದರೆ, ಸಂತಸದ ಮನಃಸ್ಥಿತಿ ಉಳ್ಳವರ ವೃದ್ಧಾಪ್ಯ ಹೆಚ್ಚು ಆರೋಗ್ಯಕರವೂ ಫಲಕಾರಿಯೂ ಮತ್ತು ಧನಾತ್ಮಕವೂ ಆಗಿರುತ್ತದೆಂದು ಅವರ ಅಭಿಮತ. ಅನಂತರ ನಡೆದಿರುವ ಹಲವಾರು ಅಧ್ಯಯನಗಳು ಈ ಮಾತನ್ನು ಪುಷ್ಟೀಕರಿಸಿವೆ.

> ಆನಂದ ಎನ್ನುವುದು ಜೀವನದ ಒಂದು ಆಯ್ಕೆ. ಅದನ್ನು ಸರಿಯಾಗಿ ರೂಢಿಸಿಕೊಳ್ಳುವುದು, ರೂಪಿಸಿಕೊಳ್ಳುವುದು ನಮ್ಮ ಕೈಲಿದೆ.

ಈ ಮಾತಿಗೆ ವಿರುದ್ಧವಾಗಿ ಋಣಾತ್ಮಕ ಯೋಚನೆಗಳ, ಸಣ್ಣಪುಟ್ಟ ವಿಷಯಗಳಿಗೂ ಆತಂಕಿತರಾಗಿ ದುಃಖಪಡುವ ವ್ಯಕ್ತಿಗಳ ಅಧ್ಯಯನಗಳೂ ನಡೆದಿವೆ. 2006ರಲ್ಲಿ ಅಮೆರಿಕೆಯಲ್ಲಿ ನಡೆಸಿದ ಸಂಶೋಧನೆಯಲ್ಲಿ ಸರಿಸುಮಾರು ಒಂದೇ ವಯಸ್ಸಿನ, ಅಜಮಾಸು ಒಂದೇ ರೀತಿಯ ಸಾಮಾಜಿಕ ಹಿನ್ನೆಲೆಯ 334 ಜನರಿಗೆ ಒಂದು ವಿಧದ ಲಸಿಕೆಯನ್ನು ನೀಡಲಾಯಿತು. ಸಂತಸದ ಮನಃಸ್ಥಿತಿಯ ಮಂದಿಯಲ್ಲಿ ಈ ಲಸಿಕೆಗೆ ಉತ್ತಮ ರೋಗನಿರೋಧಕ ಪ್ರತಿಕಾಯಗಳು ಉತ್ಪತ್ತಿಯಾದವು. ಇದಕ್ಕೆ ಪ್ರತಿಯಾಗಿ, ದುಃಖದ ಮನಸ್ಥಿತಿಯವರಲ್ಲಿ ಉತ್ಪತ್ತಿಯಾದ ಪ್ರತಿಕಾಯಗಳ ಮಟ್ಟ ಕಡಿಮೆಯಾಗಿತ್ತು.

ಆನಂದದ ಅನುಭೂತಿ ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ; ಶಾರೀರಿಕ ನೋವುಗಳ ಮಟ್ಟವನ್ನು ಇಳಿಸುತ್ತದೆ; ದೀರ್ಘಕಾಲಿಕ ಕಾಯಿಲೆಗಳನ್ನು ಸಹಿಸಿಕೊಳ್ಳಲು ನೆರವಾಗುತ್ತದೆ; ಒಟ್ಟಾರೆ, ಜೀವಿತದ ಅವಧಿಯನ್ನು ಮತ್ತು ಗುಣಮಟ್ಟವನ್ನು ಬೆಳೆಸುತ್ತದೆ. 2010ರಲ್ಲಿ ಪ್ರಕಟವಾದ ಸಂಶೋಧನೆಯಲ್ಲಿ 6856 ಜನರನ್ನು ಸುಮಾರು ಮೂವತ್ತು ವರ್ಷಗಳ ಕಾಲ ಅಧ್ಯಯನ ಮಾಡಿದಾಗ, ಸಂತಸದ ಮನಃಸ್ಥಿತಿ ಉಳ್ಳವರು ದೀರ್ಘಕಾಲ ಆರೋಗ್ಯವಾಗಿ ಬದುಕುತ್ತಾರೆ ಎಂದು ಪತ್ತೆಯಾಯಿತು. ಅಂತೆಯೇ, ಋಣಾತ್ಮಕ ಮನಃಸ್ಥಿತಿಯ ಜನರ ಆಯುಸ್ಸು ಮತ್ತು ಆರೋಗ್ಯದ ಮಟ್ಟ ಕಡಿಮೆ ಇರುತ್ತದೆ ಎಂದು ತಿಳಿಯಿತು.

ಜೀವನದ ಏಳು-ಬೀಳುಗಳನ್ನು ಸಮನಾಗಿ ನೋಡುವ ಯೋಗಿಯ ಮನಃಸ್ಥಿತಿ ಸಾಮಾನ್ಯರಿಗೆ ಸಾಧ್ಯವಾಗದೆ ಇರಬಹುದು. ಆದರೆ, ಸುಖದಲ್ಲಿ ತೀರಾ ಹಿಗ್ಗದೆ, ದುಃಖದಲ್ಲಿ ತೀರಾ ಕುಗ್ಗದೆ ಇರುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಸಾಧ್ಯ. ಆನಂದವೆನ್ನುವುದು ಜೀವನದ ಒಂದು ಆಯ್ಕೆ. ಅದನ್ನು ಸರಿಯಾಗಿ ರೂಢಿಸಿಕೊಳ್ಳುವುದು, ರೂಪಿಸಿಕೊಳ್ಳುವುದು ನಮ್ಮ ಕೈಲಿದೆ. ಸಂತಸದ ಮನಃಸ್ಥಿತಿ ಆರೋಗ್ಯಕರ ಬದುಕಿಗೆ ರಹದಾರಿಯಾಗುತ್ತದೆ ಎನ್ನುವುದು ವೈಜ್ಞಾನಿಕವಾಗಿ ರೂಪಿತವಾದ ಸತ್ಯ. ❖

ಟೊಮೆಟೊ ಜ್ವರ ಆತಂಕ ಬೇಡ

ಡಾ. ಕೆ. ಬಿ. ರಂಗಸ್ವಾಮಿ

ಕೊರೊನಾದ ಬೆನ್ನಲ್ಲೇ ಇದೀಗ ಕೇರಳದ ಕೊಲ್ಲಂ ಪ್ರದೇಶದಲ್ಲಿ ಕಾಣಿಸಿಕೊಂಡಿರುವ ‘ಟೊಮೆಟೊ ಜ್ವರ’ ಜನಸಾಮಾನ್ಯರ ಆತಂಕಕ್ಕೆ ಕಾರಣವಾಗಿದೆ. ಸುಮಾರು ಎಂಬತ್ತಕ್ಕಿಂತಲೂ ಅಧಿಕ ಮಕ್ಕಳಲ್ಲಿ ಈ ಜ್ವರದ ಲಕ್ಷಣಗಳು ಕಾಣಿಸಿಕೊಂಡಿವೆ. ಈ ನಿಟ್ಟಿನಲ್ಲಿ ಕೇರಳಕ್ಕೆ ಲಗತ್ತಾಗಿರುವ ನಮ್ಮ ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಚಾಮರಾಜನಗರ, ಕೊಡಗು ಮುಂತಾದ ಜಿಲ್ಲೆಗಳಿಗೆ ಕೇರಳದಿಂದ ಆಗಮಿಸುವ ಪ್ರಯಾಣಿಕರು ಮತ್ತವರ ಮಕ್ಕಳ ಮೇಲೆ ಕಣ್ಗಾವಲು ಇರಿಸುವಂತೆ ರಾಜ್ಯ ಸರ್ಕಾರ ಸ್ಥಳೀಯ ಜಿಲ್ಲಾಡಳಿತಕ್ಕೆ ಸೂಚಿಸಿದೆ.

ಏನಿದು ಟೊಮೆಟೊ ಜ್ವರ?

ಐದು ವರ್ಷದ ಒಳಗಿನ ಮಕ್ಕಳಲ್ಲಷ್ಟೇ ಕಾಣಿಸಿಕೊಂಡಿರುವ ‘ಟೊಮೆಟೊ ಜ್ವರ’ ಒಂದು ವೈರಾಣುವಿನ ಜ್ವರವೋ ಅಥವಾ ಡೆಂಗಿ ಮತ್ತು ಚಿಕನ್‌ಗುನ್ಯಾ ವೈರಾಣುಗಳ ಜ್ವರದ ಅನಂತರದ ಒಂದು ಸಮಸ್ಯೆಯೋ ಎಂಬುದರ ಕುರಿತು ತಜ್ಞರಲ್ಲೇ ಜಿಜ್ಞಾಸೆ ಉಂಟಾಗಿದೆ. ಆದರೆ ಕೊರೊನಾಕ್ಕೂ ಈ ಜ್ವರಕ್ಕೂ ಯಾವುದೇ ಸಂಬಂಧವಿಲ್ಲ. ಟೊಮೆಟೊ ಜ್ವರವನ್ನು ‘ಟೊಮೆಟೊ ಫ್ಲೂ’ ಎಂತಲೂ ಕರೆಯಲಾಗುತ್ತದೆ. ಆದರೆ ಈ ಜ್ವರಕ್ಕೂ ಟೊಮೆಟೊಗೂ ಏನೂ ಸಂಬಂಧವಿಲ್ಲ!

ರೋಗಲಕ್ಷಣಗಳು

ಟೊಮೆಟೊ ಜ್ವರದ ಕೆಲವು ರೋಗಲಕ್ಷಣಗಳೆಂದರೆ ತೀವ್ರ ಸ್ವರೂಪದ ಜ್ವರ, ವಾಕರಿಕೆ, ವಾಂತಿ, ಹಸಿವಿಲ್ಲದಿರುವಿಕೆ, ಮೈ ಕೈ ನೋವು, ಕೀಲು ನೋವು, ಬಳಲಿಕೆ, ಹೊಟ್ಟೆ ನೋವು, ಭೇದಿ, ನಿರ್ಜಲೀಕರಣ ಇತ್ಯಾದಿ. ಇದರ ಪ್ರಮುಖ ರೋಗಲಕ್ಷಣಗಳೆಂದರೆ ಚರ್ಮದ ಮೇಲೆ ಕಾಣಿಸಿಕೊಳ್ಳುವ ದದ್ದುಗಳು ಮತ್ತು ನೀರ್ಗುಳ್ಳೆಗಳು. ಅಂಗೈ, ಮೊಣಕಾಲು, ನಿತಂಬ ಮುಂತಾದ ಭಾಗಗಳಲ್ಲಿ ಕಾಣಿಸಿಕೊಳ್ಳುವ ಈ ದದ್ದುಗಳು ಮತ್ತು ನೀರ್ಗುಳ್ಳೆಗಳು ಟೊಮೆಟೊ ಹಣ್ಣಿನಂತೆ ಕೆಂಬಣ್ಣದಲ್ಲಿರುವುದರಿಂದ ಇದಕ್ಕೆ ‘ಟೊಮೆಟೊ ಜ್ವರ’ ಎನ್ನಲಾಗುತ್ತದೆ.

ಚಿಕಿತ್ಸೆ–ಮುಂಜಾಗ್ರತಾ ಕ್ರಮಗಳು

ಟೊಮೆಟೊ ಜ್ವರದ ರೋಗಲಕ್ಷಣಗಳು ಕಾಣಿಸಿಕೊಂಡ ಮಗುವನ್ನು ಪ್ರತ್ಯೇಕವಾಗಿರಿಸಿ ಚಿಕಿತ್ಸೆ ನೀಡಬೇಕು. ಇದಕ್ಕೆ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇಲ್ಲದಿರುವುದರಿಂದ ಕೇವಲ ರೋಗಲಕ್ಷಣಗಳನ್ನಾಧರಿಸಿದ ಚಿಕಿತ್ಸೆಯಷ್ಟೇ ಸಾಕಾಗುತ್ತದೆ. ಯಾವುದೇ ಕಾರಣಕ್ಕೂ ಉದಾಸೀನ ಪ್ರವೃತ್ತಿ ತೋರದೆ ಮಗುವನ್ನು ತಕ್ಷಣವೇ ವೈದ್ಯರಿಗೆ ತೋರಿಸಬೇಕು. ಜ್ವರಕ್ಕೆ ಪ್ಯಾರಾಸಿಟಮಾಲ್‌ನಂಥ ಔಷಧವನ್ನು ಸಮರ್ಪಕ ಪ್ರಮಾಣದಲ್ಲಿ ನೀಡಬೇಕು. ಮಗು ನಿರ್ಜಲೀಕರಣಕ್ಕೊಳಗಾಗುವುದರಿಂದ ಹಣ್ಣಿನ ರಸ, ಶರಬತ್ತು, ಎಳನೀರು ಮುಂತಾದ ದ್ರವಪದಾರ್ಥಗಳನ್ನು ಯಥೇಚ್ಛವಾಗಿ ನೀಡಬೇಕು.

ಫಿಟ್ಸ್, ಪ್ರಜ್ಞಾಹೀನತೆ ಮುಂತಾದ ಇತರೆ ರೋಗಲಕ್ಷಣಗಳು ಕಾಣಿಸಿಕೊಂಡ ಕೂಡಲೇ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿರಿಸಿ ಚಿಕಿತ್ಸೆ ನೀಡಬೇಕು. ನೀರ್ಗುಳ್ಳೆಗಳು ಸಾಮಾನ್ಯವಾಗಿ ತಾವಾಗಿಯೇ ಒಡೆದು ಬತ್ತಿ ಹೋಗುವುದರಿಂದ ಇವುಗಳನ್ನು ಕೆರೆಯುವುದನ್ನಾಗಲೀ ಹಿಚುಕುವುದನ್ನಾಗಲೀ ಮಾಡಬಾರದು. ವೈಯಕ್ತಿಕ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಮಗುವಿನ ನಿಕಟ ಸಂಪರ್ಕದಲ್ಲಿರುವವರ ಬಗ್ಗೆಯೂ ನಿಗಾ ವಹಿಸಬೇಕು. ಯಾವುದೇ ರೀತಿಯ ಆತಂಕ ಪಡುವ ಅಗತ್ಯವಿಲ್ಲ. ❖

ನೋವಿನ ‘ಕಥೆ’

ಡಾ. ಪಲ್ಲವಿ ಹೆಗಡೆ

ಶರೀರ ಮತ್ತು ಮನಸ್ಸು ತಮ್ಮ ಸೌಖ್ಯವನ್ನು ಕಳೆದುಕೊಂಡರೆ ವೈವಿಧ್ಯಮಯ ನೋವಿನ ಅನುಭವವಾಗುತ್ತದೆ. ಸುಲಲಿತವಾಗಿ ಓಡಾಡಿ, ಸುಖವಾಗಿದ್ದ ವ್ಯಕ್ತಿಗೆ ಪೆಟ್ಟು, ಅಪಘಾತದಂತಹ ಆಕಸ್ಮಿಕಗಳಿಂದಲೂ ಕೈಕಾಲು, ದೇಹದ ನೋವು ಕಾಡಬಹುದು. ದಿನಚರಿಯ ಆಹಾರ, ನಿದ್ರೆ ಮತ್ತು ಚಟುವಟಿಕೆಗಳ ವ್ಯತ್ಯಾಸದಿಂದಲೂ ನೋವು ಕಾಡಬಹುದು. ಇಂತಹ ಬದಲಾವಣೆಯನ್ನು ಗುರುತಿಸಿ ಸರಿಪಡಿಸಬೇಕು. ನೋವು ಅನುಭವಿಸುತ್ತಾ ನೋವಿನ ಮೂಲವನ್ನು ನಿರ್ಲಕ್ಷಿಸುವುದು ಮತ್ತೊಂದು ರೋಗಕ್ಕೆ ಕಾರಣವಾಗಬಹುದು. ನೋವಿನ ಸಂವೇದನೆಯನ್ನು ಕೊಲ್ಲುವ ಔಷಧಗಳ ಸತತ ಸೇವನೆಯಿಂದ ಶರೀರದ ಅಂಗಾಂಶಗಳು ಮತ್ತಷ್ಟು ಹಾನಿಯಾಗುವುದು ನಿಶ್ಚಿತ. ನೋವು, ನಮ್ಮೊಳಗಿನ ಯಾವುದೋ ಅಸೌಖ್ಯದ ಮೊದಲ ಸೂಚನೆ, ಅಪಾಯದ ಮೊದಲ ಕರೆಗಂಟೆ. ಆದ್ದರಿಂದ ಯಾವುದೇ ನೋವಿರಲಿ, ತತ್‌ಕ್ಷಣ ಮೂಲಕಾರಣವನ್ನು ಪರಿಹರಿಸಿ.

ಕಾರಣಕ್ಕೆ ತಕ್ಕಂತೆ ಪರಿಹಾರ: ಚಲಿಸುವ ವಾಹನದಿಂದ ಬಿದ್ದಿದ್ದು, ಮೆಟ್ಟಿಲಿನಿಂದ ಬಿದ್ದಿದ್ದು, ಭಾರವಾದ ವಸ್ತುಗಳಿಂದ ಪೆಟ್ಟು, ಮುಷ್ಟಿಯಿಂದ ಹೊಡೆತ ಇಂತಹ ಅನಿರೀಕ್ಷಿತ ನೋವುಗಳಿಗೆ ಮೊದಲ ಮತ್ತು ಸಂಪೂರ್ಣ ಚಿಕಿತ್ಸೆ ತುಪ್ಪ ಅಥವಾ ಎಳ್ಳೆಣ್ಣೆ, ಇವುಗಳಲ್ಲಿ ಲಭ್ಯವಿರುವ ಒಂದನ್ನು ನೋವಾದ ಜಾಗಕ್ಕೆ ಮೃದುವಾಗಿ ಮತ್ತು ಧಾರಾಳವಾಗಿ ಸವರಿ ತಣ್ಣೀರುಪಟ್ಟಿ ಅಥವಾ ಮಂಜುಗಡ್ಡೆ ಅಥವಾ ಚಂದನದಂತಹ ಶೀತಲಲೇಪ ಹಚ್ಚಿ ಶೀತಚಿಕಿತ್ಸೆ ಮಾಡುವುದರಿಂದ ತ್ವರಿತವಾಗಿ ಆರಾಮವಾಗಬಹುದು. ಅರ್ಧ ಮುಕ್ಕಾಲುಗಂಟೆಯಲ್ಲಿ ನೋವು ನಿವಾರಣೆಯಾಗದಿದ್ದರೆ ಮೂಳೆ ಅಥವಾ ಮಜ್ಜೆ ಘಾಸಿಗೊಂಡಿದ್ದು, ಮುಂದಿನ ಸೂಕ್ತಕ್ರಮ ಅಗತ್ಯ.

ಗಾಳಿಯಲ್ಲಿ ಓಡಾಟ, ಪ್ರಯಾಣ, ಆಟ, ದೀರ್ಘನಡಿಗೆ, ಈಜು ಮುಂತಾದ ಕಾರಣಗಳಿಂದ ಕೈಕಾಲು, ಮೈನೋವು ಕಾಣಿಸಿಕೊಂಡಿದ್ದರೆ ಒಂದು ಮೃದುಸುಖವಾದ ತೈಲಾಭ್ಯಂಗ ಮತ್ತು ಹೂಬಿಸಿನೀರಿನ ಸ್ನಾನ ಹಿತ ತರುತ್ತದೆ. ಬೆಚ್ಚಗಿನ ಎಳ್ಳೆಣ್ಣೆಯನ್ನು ಅಂಗೈಯಲ್ಲಿ ತುಂಬಿಕೊಂಡು, ಸ್ವತಃ, ಒತ್ತಡ ಹಾಕದೆ ದೇಹವಿಡೀ ಸವರಿಕೊಳ್ಳುವುದಕ್ಕೆ ಹತ್ತು ಹದಿನೈದು ನಿಮಿಷಗಳೇ ಸಾಕು. ದೇಹವು ಎಣ್ಣೆಯನ್ನು ಹೀರಿಕೊಳ್ಳುತ್ತದೆ. ನಂತರ ಕಡಲೆಹಿಟ್ಟು ಅಥವಾ ಮೃದುಮಾರ್ಜಕದಿಂದ ತೊಳೆಯಬಹುದು. ಸ್ನಾನ ಮುಗಿಸುವಷ್ಟರಲ್ಲಿ ನೋವು ಶಮನವಾಗಿರುತ್ತದೆ. ನೀರನ್ನೂ, ಇತರ ದ್ರವ-ಘನಾಹಾರವನ್ನೂ ಸೇವಿಸದೆ, ಖಾಲಿಹೊಟ್ಟೆಯಲ್ಲಿ ಇದನ್ನು ಮಾಡುವುದು ಪರಿಣಾಮಕಾರಿ. ಸ್ನಾನದ ನಂತರ ಪಾಯಸ, ಖೀರು, ತುಪ್ಪದ ಅನ್ನದಂತಹ ಆಹಾರವಿರಲಿ.

ಬಿಸಿಲಿಗೆ ಮೈಯೊಡ್ಡಿ, ಓಡಾಡಿ, ತಲೆ-ಮೈನೋವು ಕಾಣಿಸಿಕೊಂಡಿದ್ದರೆ ತುಪ್ಪದ ತಿಳಿ ಅಥವಾ ತುಪ್ಪವನ್ನು ಕರಗಿಸಿ ತಲೆಗೆ, ಇಡೀ ಮೈಗೆ ನೆನೆಯುವಷ್ಟು ಹಚ್ಚಿಕೊಂಡು ತಣ್ಣೀರಿನಲ್ಲಿ ತಲೆ, ಮೈ ಸ್ನಾನ ಮಾಡುವುದು ಆರಾಮದಾಯಕ. ಸ್ನಾನ ಮಾಡಿ ಬೆಣ್ಣೆಸಕ್ಕರೆ, ತುಪ್ಪಸಕ್ಕರೆ, ಹಾಲುಸಕ್ಕರೆ, ಹಾಲು–ಅನ್ನ ಆಹಾರವಾಗಿ ಸೂಕ್ತ. ಉಪ್ಪು-ಹುಳಿ-ಖಾರರಸಗಳು ಮತ್ತೆ ವೇದನೆಯನ್ನು ಹೆಚ್ಚಿಸಬಹುದು.

ಮಕ್ಕಳಾಟವನ್ನು ನಿಯಂತ್ರಿಸುವುದು ಕಷ್ಟ. ಇಡೀ ದಿನದ ಆಟೋಟಗಳಿಂದ ಮಕ್ಕಳಿಗೆ ಕೈಕಾಲು ಮೈ ನೋವು ಸಹಜ. ನಿತ್ಯವೂ ಎಳ್ಳೆಣ್ಣೆ ಸವರಿ ಸ್ನಾನ ಮಾಡಿಸುವುದು, ರಾತ್ರಿ ಮಲಗುವಾಗ ಕಾಲು, ಪಾದಗಳಿಗೆ ತುಪ್ಪ ಸವರುವ ಅಭ್ಯಾಸ ನೋವು, ಆಯಾಸ, ಅನಿದ್ರೆಯನ್ನು ನಿವಾರಿಸುತ್ತದೆ. ಇದು ವಯಸ್ಕರಿಗೂ ಹಿತಕರ.

ದಿವಸವೂ ಕೆಲವು ತಾಸು ಪಯಣಿಸುವವರು, ಭಾರವೆತ್ತುವವರು, ದೈಹಿಕಶ್ರಮಪಡುವವರು ದಿನಚರಿಯಲ್ಲಿ ಇಡೀ ಶರೀರಕ್ಕೆ ಎಳ್ಳೆಣ್ಣೆ ಹಚ್ಚಿ ಸ್ನಾನ ಮಾಡುವುದರಿಂದ, ಕೈಕಾಲು ಮೈನೋವಿನಿಂದ ಮುಕ್ತಿ ಪಡೆಯಬಹುದು. ಆಹಾರದಲ್ಲಿ ಮಾಂಸ, ಹಾಲು, ತುಪ್ಪ, ಎಣ್ಣೆಯ ಜಿಡ್ಡು ಅಗತ್ಯ. ವೃದ್ಧಾಪ್ಯದಲ್ಲಿ ಕಾಡುವ ನೋವುಗಳಿಗೆ ಬೆಚ್ಚಗಿನ ಎಳ್ಳೆಣ್ಣೆ, ವಾತಹರತೈಲದಿಂದ ತಲೆ, ಶರೀರ, ಪಾದಗಳಿಗೆ ಸವರುವ ಅಭ್ಯಾಸದಿಂದ ಸುಖ ಕಾಣಬಹುದು. ತಾಜಾ ಬಿಸಿ ಆಹಾರದಲ್ಲಿ ವಿಶೇಷವಾಗಿ ತುಪ್ಪ, ಹಾಲಿನ ಉಪಯೋಗ ನರಮಂಡಲಗಳ ಕಾರ್ಯಗಳಿಗೆ ಸಹಕಾರಿ. ರಾತ್ರಿ ತಡವಾಗಿ ಮಲಗುವ ಅಭ್ಯಾಸ, ನಿದ್ರೆಯ ಕೊರತೆ, ಇತರ ಕಾರಣಗಳಿಂದ ನಿದ್ರಾಹೀನತೆ ಉಂಟಾಗಿದ್ದರೆ ನೋವು ಕಾಣಿಸಿಕೊಳ್ಳುವುದು. ಇಂತಹವರು ರಾತ್ರಿ ಸಕಾಲದಲ್ಲಿ ನಿದ್ರೆ ಮಾಡುವುದೇ ಸಂಪೂರ್ಣ ಪರಿಹಾರ. ಹಗಲು ನಿದ್ರಿಸುವಾಗ ಯಾವ ಆಹಾರವನ್ನೂ ಸೇವಿಸದೆ ನಿದ್ರೆ ತೀರುವವರೆಗೆ ಮಲಗುವುದು ಕ್ಷೇಮ. ದೀರ್ಘಕಾಲದ ನಿದ್ರೆಯ ಕೊರತೆಯಿಂದ ಸದಾ ಕೈಕಾಲು ಮೈನೋವು ಕಾಡಬಹುದು. ಇವರಿಗೆ ಔಷಧಸಿದ್ಧತೈಲಗಳಿಂದ ಅಭ್ಯಂಜನ, ತುಪ್ಪಹಾಲಿನ ಆಹಾರ, ಮನಸ್ಸನ್ನು ತಿಳಿಗೊಳಿಸಿ ನಿದ್ರೆಗೆ ಪೂರಕವಾಗುವ ಜೀವನಶೈಲಿಯನ್ನು ರೂಢಿಸಬೇಕಾಗುತ್ತದೆ.

ದಿನವಿಡೀ ಕೂರುವುದರಿಂದ, ಶಾರೀರಿಕ ಚಟುವಟಿಕೆ ಮಾಡದಿರುವುದರಿಂದ, ನಿತ್ಯವೂ ಹಗಲುನಿದ್ರೆಯಿಂದ, ವ್ಯಾಯಾಮರಹಿತ ಜೀವನಶೈಲಿಯಿಂದಲೂ ನೋವುಗಳು ಕಾಡಬಹುದು. ಇಂತಹವರು ಜೀರ್ಣಕ್ರಿಯೆಗೆ ಸುಲಭವಾಗುವಂತೆ ಹಸಿವನ್ನು ಗಮನಿಸಿಯೇ ಸೇವಿಸುವ ಅಭ್ಯಾಸ ಮಾಡಿಕೊಳ್ಳಬೇಕು. ನಿತ್ಯವೂ ಸಾಸಿವೆ ಎಣ್ಣೆ, ಬಿಸಿ ಎಳ್ಳೆಣ್ಣೆ ಹಚ್ಚಿ ಏದುಸಿರು, ಬೆವರುವಂತೆ ಶರೀರಕ್ಕೆ ಆಯಾಸವೆನಿಸುವಂತೆ ವ್ಯಾಯಾಮ, ಶ್ರಮ, ಕೆಲಸಮಾಡಬೇಕು. ನಂತರ ಬಿಸಿನೀರಿನಿಂದ ಸ್ನಾನಮಾಡಬೇಕು. ಲವಲವಿಕೆಯಿಂದ, ಚಟುವಟಿಕೆಗಳಿಂದ ಈ ನೋವು ಮಾಯವಾಗುತ್ತದೆ.

ಹಸಿನಾರು, ಜಿಗುಟಾದ ಆಹಾರ, ಮೊಳಕೆಬಂದ ಹಸಿಕಾಳು, ಆಲೂಗಡ್ಡೆ, ಗೆಣಸಿನಂತಹ ಗೆಡ್ಡೆ, ಪುಟಾಣಿ/ಹುರಿಗಡಲೆ, ಹುರಿಗಾಳುಗಳು, ಅವರೆ, ಗ್ರೀನ್ ಪೀ, ಕಡ್ಲೆಪುರಿಯಂತಹ ಒಣಕಲು ಆಹಾರಸೇವನೆಯಿಂದ ಕಾಲು ಮೈನೋವು ಕಾಡಬಹುದು. ಇದಕ್ಕೆ ಪ್ರತಿಯಾಗಿ ಆಹಾರದಲ್ಲಿ ಉತ್ತಮ ಗುಣಮಟ್ಟದ (ರಿಫೈನ್ಡ್ ಆಯಿಲ್ ಅಲ್ಲ) ಸೋಸಿದ ಎಣ್ಣೆ, ತುಪ್ಪ, ಮಾಂಸ ಬೇಯಿಸಿದ ನೀರು, ಛರ್ಬಿ, ಮಜ್ಜೆ ಸೇವಿಸಬಹುದು. ಒಗ್ಗರಣೆ ಹಾಕಿದ ಜೀರಿಗೆಸಾರು, ಶುಂಠಿಸಾರು, ದಾಳಿಂಬೆ ಸಾರು ಹಿತ. ಇವುಗಳಿಂದ ನರಗಳು ಶಾಂತವಾಗುತ್ತವೆ. ನೋವು ಶಮನವಾಗುತ್ತದೆ. ದೀರ್ಘಕಾಲದ ಕೈಕಾಲು, ಮೈ ನೋವುಗಳಿಗೆ ದಿನಚರಿಯ ಆಹಾರ, ನಿದ್ರೆ, ಚಟುವಟಿಕೆಗಳ ತಪ್ಪಾದ ಅಭ್ಯಾಸವು ಕಾರಣವಾಗಿರುತ್ತದೆ. ಕಾರಣಗಳನ್ನು ಗುರುತಿಸಿ ಸರಿಪಡಿಸುವುದರ ಜೊತೆಗೆ ಚಿಕಿತ್ಸೆಯೂ ಅವಶ್ಯ. ವಾತಹರ ತೈಲ, ಘೃತಗಳಿಂದ ಆಂತರಿಕಚಿಕಿತ್ಸೆ, ಅಭ್ಯಂಗ, ಉದ್ವರ್ತನ, ಉತ್ಸಾದನ, ಉಪನಾಹದಂತಹ ಸ್ವೇದ, ಲೇಪ, ಬಂಧನ, ನಿರೂಹ-ಸ್ನೇಹಬಸ್ತಿಗಳ ಚಿಕಿತ್ಸೆ ಪರಿಹಾರ ನೀಡಬಹುದು.

ನೋವು ಎಂಬ ಲಕ್ಷಣವು ಎಲ್ಲಿ ಕಾಣಿಸಿದೆ ಎಂಬುದು ಮುಖ್ಯ. ಎಲ್ಲ ನೋವುಗಳೂ, ಎಲ್ಲರ ನೋವೂ ಒಂದೇ ಅಲ್ಲ. ಕಾರಣಕ್ಕೆ ತಕ್ಕ ಲಕ್ಷಣ ಮತ್ತು ಪರಿಹಾರವು ಪರಸ್ಪರ ಸಂಬಂಧಪಟ್ಟಿದೆ.

ಮಾಂಸಖಂಡಗಳು, ರಕ್ತನಾಳಗಳು, ನರಮಂಡಲ, ಮೂಳೆ, ಮೃದ್ವಸ್ಥಿ, ಮಜ್ಜೆ, ಎಲ್ಲವೂ ನೋವಿನ ಆಕರಗಳು. ಪ್ರತಿ ಅಂಗಾಂಶಗಳ ಅಗತ್ಯ ಮತ್ತು ಆರೈಕೆ ಬೇರೆ.

ಸಾಮಾನ್ಯವಾಗಿ ನೋವು ಶರೀರದಲ್ಲಿ ವ್ಯಕ್ತವಾಗುವುದು. ಮನಸ್ಸಿನ ವೇದನೆಯೂ ದೇಹದ ಮೂಲಕವೇ ತೋರ್ಪಡುತ್ತದೆ. ಸದಾ ಆನಂದವಾಗಿರುವಷ್ಟು ನ್ಯಸ್ತ ಬದುಕು ಅಸಾಧ್ಯವೇನಲ್ಲ. ಚಿಂತನೆಗಳು ಆರೋಗ್ಯಕರ. ಚಿಂತೆ ನೋಯುವಂತೆ ಮಾಡುತ್ತದೆ. ಮನಸ್ಸಿನ ಮೂಲದ ದೇಹದ ನೋವಿಗೆ ತೀವ್ರತೆ ಜಾಸ್ತಿ. ಇಂತಹ ಮಾನಸಿಕ ಮೂಲದ ಯಾತನೆಗಳಿಗೆ ಪರಿಹಾರವೂ ವ್ಯಕ್ತಿಗತ. ನೋವುನಿವಾರಕ ಮಾತ್ರೆಗಳಿಗೆ ದಾಸನಾಗುವುದು ಮತ್ತೊಂದು ಅನಾರೋಗ್ಯಕ್ಕೆ ತುತ್ತಾಗಬಹುದು.

ಸಕಾಲ ತಾಜಾ ಹಿತಮಿತ ಆಹಾರ, ರಾತ್ರಿ ಬೇಗನಿದ್ರೆ, ಹಗಲಿಡೀ ಸಂತೃಪ್ತಿದಾಯಕ ಕಾಯಕ ಶರೀರ-ಮನಸ್ಸಿನ ನೋವಿನ ಮೂಲವನ್ನು ದೂರವಿರಿಸಬಲ್ಲದು. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦
ನಮ್ಮ ಸಮಸ್ಯೆಯೆಂದರೆ, ಅತ್ಯಂತ ದೊಡ್ಡ ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸಲಾಗದೇ ಇರುವುದಲ್ಲ. ಬದಲಿಗೆ, ಅತ್ಯಂತ ಚಿಕ್ಕ ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದು.
-ಅರಿಸ್ಟಾಟಲ್

ಬ್ಯಾಡ್ಮಿಂಟನ್ ಬೆಳವಣಿಗೆಗೆ ಸ್ಫೂರ್ತಿ ತುಂಬಿದ ಚಾಂಪಿಯನ್ ಪಟ್ಟ

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಗುಂಗಿನಲ್ಲಿರುವ ಭಾರತದ ಕ್ರೀಡಾಪ್ರೇಮಿಗಳ ಚಿತ್ತವನ್ನು ತಮ್ಮತ್ತ ಸೆಳೆಯುವಲ್ಲಿ ಬ್ಯಾಡ್ಮಿಂಟನ್ ತಂಡವು ಸಫಲವಾಗಿದೆ. ಇದೇ ಮೊದಲ ಬಾರಿಗೆ ಪ್ರತಿಷ್ಠಿತ ಥಾಮಸ್ ಕಪ್ ಜಯಿಸಿದ ಭಾರತ ತಂಡದ ಸಾಧನೆಯೇ ಇದಕ್ಕೆ ಕಾರಣ. ಬ್ಯಾಂಕಾಕ್‌ನಲ್ಲಿ ಭಾನುವಾರ ನಡೆದ ಟೂರ್ನಿಯ ಫೈನಲ್‌ನಲ್ಲಿ ಇಂಡೊನೇಷ್ಯಾ ತಂಡವನ್ನು ಸೋಲಿಸಿದ ಕಿದಂಬಿ ಶ್ರೀಕಾಂತ್ ನೇತೃತ್ವದ ಬಳಗವು ದೇಶದ ಕ್ರೀಡಾಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿತು. ಟೂರ್ನಿ ಆರಂಭವಾದ 73 ವರ್ಷಗಳ ಅವಧಿಯಲ್ಲಿ ಭಾರತ ತಂಡವು ಇದೇ ಮೊದಲ ಸಲ ಫೈನಲ್ ಪ್ರವೇಶಿಸಿತ್ತು. 1979ರಲ್ಲಿ ಸೆಮಿಫೈನಲ್ ಪ್ರವೇಶಿಸಿದ ನಂತರ ಈ ಸಾಧನೆ ಮೂಡಿಬಂದಿದೆ. ಬ್ಯಾಡ್ಮಿಂಟನ್ ವಿಶ್ವಕಪ್ ಎಂದೇ ಬಿಂಬಿತವಾಗಿರುವ ಈ ಟೂರ್ನಿಯಲ್ಲಿ ಇದುವರೆಗೆ ಇಂಡೊನೇಷ್ಯಾ 14, ಚೀನಾ 10, ಮಲೇಷ್ಯಾ 5 ಸಲ ಚಾಂಪಿಯನ್ ಆಗಿವೆ. ಡೆನ್ಮಾರ್ಕ್ ಮತ್ತು ಜಪಾನ್ ತಲಾ ಒಂದು ಬಾರಿ ಪ್ರಶಸ್ತಿ ಜಯಿಸಿವೆ. ಈ ದೇಶಗಳ ಸಾಲಿಗೆ ಈಗ ಭಾರತವೂ ಸೇರಿದೆ. ಟೂರ್ನಿಯಲ್ಲಿ 'ಸಿ' ಗುಂಪಿನಲ್ಲಿ ಕಣಕ್ಕಿಳಿದಿದ್ದ ಭಾರತವು ಎಂಟರ ಘಟ್ಟದಲ್ಲಿ ಮಲೇಷ್ಯಾ, ನಾಲ್ಕರ ಹಂತದಲ್ಲಿ ಡೆನ್ಮಾರ್ಕ್ ಸವಾಲುಗಳನ್ನು ಮೆಟ್ಟಿ ನಿಂತಿದ್ದು ಕೂಡ ಐತಿಹಾಸಿಕ ಸಾಧನೆ. ಇದಕ್ಕಾಗಿ ಕಿದಂಬಿ ಶ್ರೀಕಾಂತ್, ಯುವ ಆಟಗಾರ ಲಕ್ಷ್ಯ ಸೇನ್, ಎಚ್.ಎಸ್. ಪ್ರಣಯ್, ಎಂ.ಆರ್. ಅರ್ಜುನ್, ಧ್ರುವ ಕಪಿಲ್, ಕೃಷ್ಣಪ್ರಸಾದ ಗರಗ, ವಿಷ್ಣುವರ್ಧನ ಗೌಡ ಪಂಜಾಲಾ, ಸಾತ್ವಿಕ್ ಸಾಯಿರಾಜ್ ರಾಂಕಿ ರೆಡ್ಡಿ- ಚಿರಾಗ್ ಶೆಟ್ಟಿ ಜೋಡಿ, ತರಬೇತುದಾರ ವಿಮಲ್ ಕುಮಾರ್ ಮತ್ತು ನೆರವು ಸಿಬ್ಬಂದಿ ಅಭಿನಂದನಾರ್ಹರು. ಈ ಗೆಲುವಿನಿಂದಾಗಿ ಭಾರತದಲ್ಲಿ ಪುರುಷರ ವಿಭಾಗದ ಬ್ಯಾಡ್ಮಿಂಟನ್ ಆಟಕ್ಕೆ ಆನೆ ಬಲ ಬಂದಂತಾಗಿದೆ. ಇದರ ಹಿಂದೆ 1980ರಲ್ಲಿ ಭಾರತಕ್ಕೆ ಮೊದಲ ಸಲ ಆಲ್ ಇಂಗ್ಲೆಂಡ್ ಕಿರೀಟದ ಕಾಣಿಕೆ ನೀಡಿದ ಕನ್ನಡಿಗ ಪ್ರಕಾಶ್ ಪಡುಕೋಣೆ ಮತ್ತು 2001ರಲ್ಲಿ ಆಲ್ ಇಂಗ್ಲೆಂಡ್ ಚಾಂಪಿಯನ್ ಆದ ಹೈದರಾಬಾದಿನ ಪುಲ್ಲೇಲ ಗೋಪಿಚಂದ್ ಅವರ ಪ್ರೇರಣೆ ಇದೆ.

ಈ ಗೆಲುವಿನಿಂದಾಗಿ ಭಾರತದಲ್ಲಿ ಪುರುಷರ ವಿಭಾಗದ ಬ್ಯಾಡ್ಮಿಂಟನ್ ಆಟಕ್ಕೆ ಭೀಮಬಲ ಬಂದಂತಾಗಿದೆ

ಈ ಎರಡು ದಶಕಗಳಲ್ಲಿ ಪುರುಷರ ವಿಭಾಗದಲ್ಲಿ ಉತ್ತಮ ಆಟಗಾರರು ಪ್ರವರ್ಧಮಾನಕ್ಕೆ ಬಂದರೂ ದೊಡ್ಡಮಟ್ಟದ ಟೂರ್ನಿಗಳಲ್ಲಿ ಜಯದ ಸಾಧನೆ ದಾಖಲಾಗಿದ್ದು ಕಡಿಮೆ. ಅದರಲ್ಲೂ ಕಳೆದ ಒಂದು ದಶಕದಲ್ಲಿ ಮಹಿಳಾ ವಿಭಾಗದಲ್ಲಿ; ಒಲಿಂಪಿಕ್ ಕ್ರೀಡಾಕೂಟಗಳಲ್ಲಿ ಸೈನಾ ನೆಹ್ವಾಲ್ ಅವರು ಒಂದು ಪದಕ ಮತ್ತು ಸಿಂಧು ಎರಡು ಪದಕಗಳನ್ನು ಗೆದ್ದರು. ಅಲ್ಲದೆ ಸಿಂಧು ವಿಶ್ವ ಚಾಂಪಿಯನ್ ಕೂಡ ಆದರು. ಇದರಿಂದಾಗಿ ಮಹಿಳಾ ಬ್ಯಾಡ್ಮಿಂಟನ್ ಸಶಕ್ತವಾಗಿದೆ. ಆದರೆ ಪುರುಷರ ವಿಭಾಗದಲ್ಲಿ ಇಂತಹ ಸಾಧನೆ ಮೂಡಿಬರುತ್ತಿಲ್ಲವೆಂಬ ಕೊರಗು ಈಗ ದೂರವಾಗಿದೆ. 2021ರಲ್ಲಿ ಶ್ರೀಕಾಂತ್ ಮತ್ತು ಲಕ್ಷ್ಯ ಸ್ಪೇನ್‌ನಲ್ಲಿ ನಡೆದ ಬಿಡಬ್ಲ್ಯುಎಫ್ ವಿಶ್ವಕಪ್ ಟೂರ್ನಿಯಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದಿದ್ದರು. ಎಚ್.ಎಸ್.ಪ್ರಣಯ್, ಸಾತ್ವಿಕ್ ಸಾಯಿರಾಜ್ ರಾಂಕಿ ರೆಡ್ಡಿ-ಚಿರಾಗ್ ಶೆಟ್ಟಿ ಜೋಡಿಯು ಈ ಎರಡು ವರ್ಷಗಳಲ್ಲಿ ಸೂಪರ್ ಸೀರಿಸ್‌ಗಳು ಸೇರಿದಂತೆ ಪ್ರಮುಖ ಟೂರ್ನಿಗಳಲ್ಲಿ ಮಿಂಚಿದೆ. ಅವರೆಲ್ಲರ ಅನುಭವ ಮತ್ತು ತಂಡದಲ್ಲಿರುವ ಮಧುರ ಬಾಂಧವ್ಯವು ಥಾಮಸ್ ಕಪ್ ಜಯಭೇರಿಗೆ ಕಾರಣವೆಂದರೆ ಅತಿಶಯೋಕ್ತಿಯಲ್ಲ. ಇದರಿಂದಾಗಿ ಈಗ ಭಾರತವು ಎರಡೂ ವಿಭಾಗಗಳಲ್ಲಿ ವಿಶ್ವದ ಬಲಿಷ್ಠ ರಾಷ್ಟ್ರಗಳಿಗೆ ಸಡ್ಡು ಹೊಡೆಯಲು ಶಕ್ತವಾಗಿರುವುದು ಆಶಾದಾಯಕ ಬೆಳವಣಿಗೆ. ಇದರ ಶ್ರೇಯವು ಬೆಂಗಳೂರು ಮತ್ತು ಹೈದರಾಬಾದ್ ನಗರಗಳಿಗೆ ಸಲ್ಲಬೇಕು. ಯುವ ಸಾಧಕ ಲಕ್ಷ್ಯ ಸೇನ್ ಅವರು ಪ್ರಕಾಶ್ ಪಡುಕೋಣೆ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಉಳಿದ ಬಹುತೇಕ ಆಟಗಾರರು ಹೈದರಾಬಾದ್‌ನಲ್ಲಿ ಗೋಪಿಚಂದ್ ಅಕಾಡೆಮಿಯಲ್ಲಿ ಬೆಳೆದವರು. ಇಬ್ಬರು ದಿಗ್ಗಜರು ತಮ್ಮ ನಿವೃತ್ತಿಯ ನಂತರವೂ ದೇಶದ ಬ್ಯಾಡ್ಮಿಂಟನ್ ಕ್ರೀಡೆಯನ್ನು ಹರಿಯುವ ನದಿಯನ್ನಾಗಿಸಿದ್ದಾರೆ. ಪ್ರತಿವರ್ಷ ಹೊಸ ಪ್ರತಿಭೆಗಳು ಒಂದಿಲ್ಲೊಂದು ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುತ್ತಿರುವುದು ಆಶಾದಾಯಕ. ಕೇಂದ್ರ ಕ್ರೀಡಾ ಇಲಾಖೆಯು ನೀಡುತ್ತಿರುವ ಅನುದಾನಕ್ಕೆ ತಕ್ಕ ಪ್ರತಿಫಲವೂ ಸಿಗುತ್ತಿದೆ. ಈ ವರ್ಷ ಕಾಮನ್‌ವೆಲ್ತ್ ಗೇಮ್ಸ್, ಮುಂದಿನ ವರ್ಷ ಏಷ್ಯನ್ ಗೇಮ್ಸ್ ಮತ್ತು 2024ರಲ್ಲಿ ಪ್ಯಾರಿಸ್ ಒಲಿಂಪಿಕ್ಸ್ ಆಯೋಜನೆಗೊಳ್ಳಲಿವೆ. ಈ ಪ್ರತಿಷ್ಠಿತ ವೇದಿಕೆಗಳಲ್ಲಿ ಪದಕಗಳ ಬೇಟೆಯಾಡಲು ಭಾರತದ ಬ್ಯಾಡ್ಮಿಂಟನ್ ಪಟುಗಳಿಗೆ ಥಾಮಸ್ ಕಪ್ ವಿಜಯವು ಸ್ಫೂರ್ತಿಯಾಗಲಿದೆ.

ದಿನದ ಟ್ವೀಟ್

ಕೋವಿಡ್ ದುಷ್ಪರಿಣಾಮ

2020ರಲ್ಲಿ ಎಲ್ಲರ ಗಮನ ಕೋವಿಡ್-19ನತ್ತ ಇದ್ದಾಗ, ಜಾಗತಿಕವಾಗಿ ಸುಮಾರು 1 ಕೋಟಿ ಜನರು ಕ್ಷಯರೋಗದ ಸೋಂಕಿಗೆ ಒಳಗಾದರು ಮತ್ತು 15 ಲಕ್ಷ ಮಂದಿ ಆ ಕಾರಣದಿಂದ ಸಾವಿಗೀಡಾದರು. ಇದು, 2005ರ ನಂತರ ಈ ಕಾಯಿಲೆಯಿಂದ ಸಾವಿನ ಸಂಖ್ಯೆ ಏರಿದ ಮೊದಲ ವರ್ಷವೂ ಹೌದು. ಈ ಹೆಚ್ಚಳಕ್ಕೆ ಬಹುಶಃ ಪರೀಕ್ಷೆ ಮತ್ತು ಚಿಕಿತ್ಸಾ ಸೇವೆಗಳ ಮೇಲೆ ಕೋವಿಡ್- 19 ಬೀರಿದ ಪ್ರಭಾವ ಕಾರಣ ಇರಬಹುದು.

ಡಾ. ಜೆಸ್ಸಿಕಾ ಹಸ್ಸನ್, ಮನಃಶಾಸ್ತ್ರಜ್ಞೆ

ಕಿಡಿನುಡಿ

ನಗರಗಳಲ್ಲಿನ ಕಟು ವಾಸ್ತವ. ಗಬ್ಬುನಾರುವ ಶೌಚಾಲಯಗಳ ಕಾರಣದಿಂದ ಮಹಿಳೆಯರು ಬೇಸಿಗೆಯಲ್ಲಿ ಸಹ ಸರಿಯಾಗಿ ನೀರು ಕುಡಿಯುವುದಿಲ್ಲ. ಇದು ನಿರ್ಜಲೀಕರಣ, ಅಪಸ್ಮಾರ, ಕಡಿಮೆ ರಕ್ತದೊತ್ತಡ, ಬಿಸಿಲಿನ ಆಘಾತಕ್ಕೆ ಕಾರಣವಾಗುತ್ತದೆ.

ಕೋಟ ನೀಲಿಮಾ, ಲೇಖಕಿ, ಸಂಶೋಧಕಿ

25 ವರ್ಷಗಳ ಹಿಂದೆ

ಶನಿವಾರ, 17-5-1997

- **ಮಹಿಳಾ ಮೀಸಲು ಮಸೂದೆಗೆ ತೀವ್ರ ಪ್ರತಿಭಟನೆ**

ನವದೆಹಲಿ, ಮೇ 16- ಸಂಸತ್ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಲು ಅವಕಾಶ ಕಲ್ಪಿಸುವ ಸಂವಿಧಾನದ 81ನೇ ತಿದ್ದುಪಡಿ ಮಸೂದೆಯನ್ನು ಆಳುವ ಪಕ್ಷ ಸೇರಿದಂತೆ ಇತರ ಎಲ್ಲ ಪಕ್ಷಗಳ ತೀವ್ರ ವಿರೋಧದ ನಡುವೆ ಇಂದು ರಾತ್ರಿ 7.30ಕ್ಕೆ ಸದನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡುವ ಮುನ್ನ ಲೋಕಸಭೆಯಲ್ಲಿ ಚರ್ಚೆಗೆ ಇಡಲಾಯಿತು.

ಇದಕ್ಕೆ ಮೊದಲು ಈ ಮಸೂದೆಯನ್ನು ಪರಿಶೀಲನೆಗೆ ಎತ್ತಿಕೊಳ್ಳುವ ಬಗೆಗೆ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಲು ಪ್ರಧಾನಿ ಇಂದ್ರಕುಮಾರ್ ಗುಜ್ರಾಲ್ ಅವರಿಗೆ ಆಳುವ ಪಕ್ಷಗಳ ಹಿಂದುಳಿದ ವರ್ಗ ಮತ್ತು ಮುಸ್ಲಿಂ ಸದಸ್ಯರು ಅವಕಾಶ ನೀಡದೇ ಹೋದ ಅಪರೂಪದ ಘಟನೆ ನಡೆಯಿತು.

- **ರಥಯಾತ್ರೆ- ರಾಜ್ಯಸಭೆಯಲ್ಲಿ ಭಾರಿ ಕೋಲಾಹಲ**

ನವದೆಹಲಿ, ಮೇ 16 (ಯುಎನ್‌ಐ)- ಬಿಜೆಪಿ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಅವರು ಈ ತಿಂಗಳ 18ರಂದು ಆರಂಭಿಸಲು ಉದ್ದೇಶಿಸಿರುವ 'ಸ್ವರ್ಣ ಜಯಂತಿ ರಥಯಾತ್ರೆ' ವಿಷಯ ಇಂದು ರಾಜ್ಯಸಭೆಯಲ್ಲಿ ಪ್ರಸ್ತಾಪವಾಗಿ ಭಾರಿ ಕೋಲಾಹಲಕ್ಕೆ ಕಾರಣವಾಯಿತು.

ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಸಮಾಜವಾದಿ ಪಕ್ಷದ ನಾಯಕ ಮಹಮ್ಮದ್ ಅಜಂ ಖಾನ್ ಅವರು, 'ಈ ರಥಯಾತ್ರೆಯಿಂದ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ಹೆಚ್ಚುವ ಸಾಧ್ಯತೆಯಿದೆ. ಜೊತೆಗೆ ಇದರಿಂದ ದೇಶದ ಕೋಮು ಸಾಮರಸ್ಯಕ್ಕೆ ತೀವ್ರ ಧಕ್ಕೆಯಾಗಲಿದೆ. ರಥಯಾತ್ರೆ ನಡೆದದ್ದೇ ಆದಲ್ಲಿ 1992ರ ಡಿಸೆಂಬರ್ ಆರರ ಘಟನೆ ಮರುಕಳಿಸಲಿದೆ' ಎಂದು ಭೀತಿ ವ್ಯಕ್ತಪಡಿಸಿದರು.

50 ವರ್ಷಗಳ ಹಿಂದೆ

ಬುಧವಾರ, 17-5-1972

- **'ಪ್ರತಿ ಆರ್ಥಿಕ ವ್ಯವಸ್ಥೆ'ಯಾದ ಕಪ್ಪುಹಣ ಹೊರತೆಗೆಯಲು ಎಲ್ಲ ಕ್ರಮ: ಚವಾಣ್**

ನವದೆಹಲಿ, ಮೇ 16- ಕಪ್ಪುಹಣವು ರಾಷ್ಟ್ರದಲ್ಲಿ ಪ್ರತಿ ಆರ್ಥಿಕ ವ್ಯವಸ್ಥೆಯಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಕೇಂದ್ರ ಹಣಕಾಸು ಸಚಿವ ಶ್ರೀ ವೈ.ಬಿ. ಚವಾಣ್ ಅವರು ಇಂದು ರಾಜ್ಯಸಭೆಯಲ್ಲಿ ಒಪ್ಪಿಕೊಂಡರು.

ಕಪ್ಪುಹಣವನ್ನು ಹೊರತೆಗೆಯುವ ಬಗ್ಗೆ ಎಲ್ಲ ಹಂತಗಳಲ್ಲೂ ಹಾಗೂ ದಿಸೆಗಳಲ್ಲೂ ದೀರ್ಘಾವಧಿ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದೂ ಅವರು ಹೇಳಿದರು.

ಪ್ರಶ್ನೋತ್ತರ ಕಾಲದಲ್ಲಿ ಕಪ್ಪುಹಣ ಕುರಿತ ಪ್ರಶ್ನೆಗಳ ಸುರಿಮಳೆಗೆ ಉತ್ತರ ಕೊಡುತ್ತಿದ್ದ ಶ್ರೀ ಚವಾಣ್ ಅವರು 'ವಾಂಛೂ ಸಮಿತಿಯು ತನ್ನ ಮಧ್ಯಂತರ ವರದಿಯಲ್ಲಿ ಶಿಫಾರಸು ಮಾಡಿರುವ ನೋಟು ಚಲಾವಣೆ ರದ್ದತಿಯ ಶಿಫಾರಸನ್ನು ಸರ್ಕಾರ ಒಪ್ಪಿಕೊಂಡಿಲ್ಲ' ಎಂದರು.

ಒಡವೆ- ವಸ್ತುಗಳ ಕೊಳ್ಳುವಿಕೆಗೆ ಹೆಚ್ಚಾಗಿ ಕಪ್ಪುಹಣವನ್ನು ಬಳಸಲಾಗಿದೆಯೆಂದೂ ಆ ದಿಸೆಯಲ್ಲಿಯೇ ನಾವು ಪ್ರಯತ್ನ ನಡೆಸಬೇಕಾಗಿದೆಯೆಂದೂ ಅವರು ಹೇಳಿದರು.

- **ಆರ್‌ಎಸ್‌ಎಸ್ ನಿಷೇಧಕ್ಕೆ ಒತ್ತಾಯ**

ನವದೆಹಲಿ, ಮೇ 16- ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರ್‌ಎಸ್‌ಎಸ್) ನಿಷೇಧಿಸುವುದಕ್ಕೆ ಈಗಿನ ಸಂಸತ್ ಅಧಿವೇಶನದಲ್ಲೇ ಮಸೂದೆಯೊಂದನ್ನು ತರುವಂತೆ ನಾನಾ ರಾಜಕೀಯ ಪಕ್ಷಗಳಿಗೆ ಸೇರಿದ ಸಂಸತ್ತಿನ 150 ಮಂದಿ ಸದಸ್ಯರು ಇಂದು ಪ್ರಧಾನಿ ಅವರನ್ನು ಒತ್ತಾಯಪಡಿಸಿದ್ದಾರೆ.

ಪ್ರಧಾನಿ ಅವರಿಗೆ ಜಂಟಿಯಾಗಿ ಬರೆದ ಪತ್ರದಲ್ಲಿ ಅವರು 'ಇತ್ತೀಚೆಗೆ ಉಸ್ಮಾನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ಜಾರ್ಜ್ ರೆಡ್ಡಿ ಎಂಬುವರ ಕೊಲೆಯಾಗಿರುವ ಬಗ್ಗೆ (ಆರ್‌ಎಸ್‌ಎಸ್ ಗೂಂಡಾಗಳ ಗುಂಪೊಂದು ಕೊಲೆ ಮಾಡಿದೆಯೆಂದು ಆಪಾದಿಸಲಾಗಿದೆ) ಸಿಬಿಐನಿಂದ ತನಿಖೆ ನಡೆಯಬೇಕು' ಎಂದು ಒತ್ತಾಯಪಡಿಸಿದ್ದಾರೆ.

ವಂಶವಾದಕ್ಕೆ ಉತ್ತೇಜನ ಇಲ್ಲವೆಂಬ ಪ್ರಧಾನಿ ಮೋದಿ ಮಾತಿಗೆ ಕಿಮ್ಮತ್ತಿಲ್ಲವೇ?

ಬಿಜೆಪಿಯಲ್ಲೂ ಇದೆ ಕುಟುಂಬ ರಾಜಕಾರಣ

ಗತಿಬಿಂಬ

ವೈ.ಗ.ಜಗದೀಶ್

'**ಕುಟುಂಬ** ರಾಜಕಾರಣ ಹುಟ್ಟುಹಾಕಿದ್ದೇ ಕಾಂಗ್ರೆಸ್. ಇದರ ವಿರುದ್ಧ ನಾವು ಹೋರಾಡುತ್ತಿದ್ದೇವೆ. ವಂಶವಾದ ಪ್ರೋತ್ಸಾಹಿಸುತ್ತಲೇ ಇದ್ದರೆ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯವಿಲ್ಲ. ನಮ್ಮ ಪಕ್ಷದಲ್ಲಿ ಪರಿವಾರ-ವಾದಕ್ಕೆ ಉತ್ತೇಜನ ಇಲ್ಲ...'

ಬಿಜೆಪಿಯ ಸಂಸದರನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ ಮಾತಿದು.

ಅದನ್ನೇ ಮತ್ತೊಂದು ರೂಪದಲ್ಲಿ ಪುನರುಚ್ಚರಿಸಿದ್ದ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, 'ಬದಲಾವಣೆಗೆ ಒಳಗಾಗುವ ಪಕ್ಷ ಉಳಿಯುತ್ತದೆ. ಬದಲಾವಣೆಗೆ ತಕ್ಕಂತೆ ಬಿಜೆಪಿ ಬದಲಾಗಿದೆ. ಆದರೆ, ಕಾಂಗ್ರೆಸ್ ಹಾಗೆಯೇ ಇದೆ. ಹೀಗಾಗಿ ಕಾಂಗ್ರೆಸ್‌ನಲ್ಲಿ ಯುವ ನಾಯಕರು ಯಾರು ಎಂದರೆ ಸೋನಿಯಾ ಗಾಂಧಿ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ... ಇಂತಹ ನಾಯಕರ ಪುತ್ರರೇ ಇದ್ದಾರೆ. ಜನ್ಮ ಪ್ರಮಾಣಪತ್ರ, ಮದುವೆ ಪ್ರಮಾಣ-ಪತ್ರಗಳಿದ್ದರೆ ಕಾಂಗ್ರೆಸ್‌ನಲ್ಲಿ ನಾಯಕರಾಗಬಹುದು. ಬಿಜೆಪಿಯಲ್ಲಿ ಇಂತಹ ಉದಾಹರಣೆಗಳು ವಿರಳ. ನಮ್ಮಲ್ಲಿ ಕಾರ್ಯಕರ್ತರೇ ನಾಯಕರಾಗುವ ಅವಕಾಶ ಇದೆ' ಎಂದಿದ್ದರು.

'ಮೋದಿ ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು' ಎಂದು ಪಕ್ಷದ ಕಾರ್ಯಕರ್ತರು ಬಯಸುತ್ತಾರೆ. ಕರ್ನಾಟಕದಲ್ಲಿ ಬಿಜೆಪಿಯೊಳಗಿರುವ ರಾಜಕಾರಣದ ವಂಶವೃಕ್ಷ ಮುಂದಿಟ್ಟುಕೊಂಡು ಪಕ್ಷದ ನಾಯಕರ ಮಾತುಗಳನ್ನು ಪುಟಕ್ಕಿಟ್ಟರೆ, ಪಕ್ಷಕ್ಕೆ ಅಂಟಿರುವ ಕಿಲುಬು ಕಣ್ಣಿಗೆ ಕುಕ್ಕುತ್ತದೆ. ಮೋದಿ-ಸಂತೋಷ್ ಮಾತನ್ನು ಜತೆಗಿಟ್ಟುಕೊಂಡು ಕರ್ನಾಟಕದ ರಾಜಕೀಯ ಗಮನಿಸಿದರೆ, ಅವರ ನುಡಿ-ನಡೆಗೆ ತಾಳಮೇಳವೇ ಇಲ್ಲ. 'ಕಾಂಗ್ರೆಸ್ ಹಾಗೂ ವಿವಿಧ ಪ್ರಾದೇಶಿಕ ಪಕ್ಷಗಳು ಕುಟುಂಬ ರಾಜಕಾರಣವನ್ನೇ ಆಶ್ರಯಿಸಿವೆ. ನಮ್ಮ ಪಕ್ಷದಲ್ಲಿ ಇಂತಹ ಕುಟುಂಬ ರಾಜಕಾರಣಕ್ಕೆ ಬೆಂಬಲ ಇಲ್ಲ' ಎಂದು ಮೋದಿಯವರು ಪ್ರವಚನ ನೀಡುತ್ತಲೇ ಇದ್ದಾರೆ.

ಮೋದಿ ಹೇಳುವುದರಲ್ಲಿ ಸತ್ಯ ಇದೆ. ಕಾಂಗ್ರೆಸ್ ಪಕ್ಷದ ತಾಯಿಬೇರೇ ಕುಟುಂಬದ ಮೇಲೆ ನಿಂತಿದೆ. ಕರ್ನಾಟಕದ ವಿಷಯಕ್ಕೆ ಬಂದರೆ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವ ಕುಮಾರ್, ಎಂ.ಬಿ. ಪಾಟೀಲ, ರಾಮಲಿಂಗಾರೆಡ್ಡಿ, ಶಾಮನೂರು ಶಿವಶಂಕರಪ್ಪ ಸೇರಿದಂತೆ ಅನೇಕರು ತಮ್ಮ ಮಕ್ಕಳು ಅಥವಾ ಸೋದರರನ್ನು ಮುನ್ನೆಲೆಗೆ ತಂದವರು. ಜೆಡಿಎಸ್ ಬಗ್ಗೆ ಮಾತನಾಡುವಂತೆಯೇ ಇಲ್ಲ. ಕುಟುಂಬ ರಾಜಕಾರಣವೇ ಈ ಎರಡು ಪಕ್ಷಗಳಲ್ಲಿ ವಿಜೃಂಭಿಸುತ್ತಿದೆ ಎಂಬ ಕಾರಣಕ್ಕೆ ಕರ್ನಾಟಕದ ಜನ ಕಾಂಗ್ರೆಸ್, ಜೆಡಿಎಸ್‌ನತ್ತ ಒಲವನ್ನು ಕಡಿಮೆ ಮಾಡಿದ್ದರು. ಬಿಜೆಪಿಯಲ್ಲಿ ನೈಜ ಕಾರ್ಯಕ-ರ್ತರಿಗೆ ನಾಯಕರಾಗುವ ಅವಕಾಶ ಸಿಗುತ್ತದೆ ಎಂದೇ ನಂಬಿದ್ದರು. ಈಗಿನ ರಾಜಕೀಯ ಕಾಲಾಳುಗಳನ್ನು ಲೆಕ್ಕ ಹಾಕಿದರೆ ಕಮಲ ಪಾಳಯದಲ್ಲೂ ಕುಟುಂಬ ರಾಜಕಾರಣದ ತಕಥೈ ಕುಣಿತ ಎದ್ದು ಕಾಣಿಸುವಂತಿದೆ.

ಲೋಕಸಭೆ ಚುನಾವಣೆ ವೇಳೆಯಲ್ಲಿ ಕುಟುಂಬ ರಾಜಕಾರಣಕ್ಕೆ ಮಣೆ ಹಾಕುವುದಿಲ್ಲ ಎಂಬ 'ಘೋಷಣೆ'ಯನ್ನೇನೊ ಬಿಜೆಪಿ ಮೊಳಗಿಸಿತು. ಕರ್ನಾಟಕದಲ್ಲಿ ಬಿಜೆಪಿಯನ್ನು ಪ್ರಬಲವಾಗಿ ಕಟ್ಟಲು ದುಡಿದಿದ್ದ ದಿವಂಗತ ಎಚ್.ಎನ್.ಅನಂತಕುಮಾರ್ ಅವರ ವಿಷಯದಲ್ಲಿ ಮಾತ್ರ ಈ ನಿಯಮ ಕಟ್ಟುನಿಟ್ಟಾಗಿ ಪಾಲನೆಯಾಯಿತು. ಇದೇ ಕಾರಣ ಮುಂದೊಡ್ಡಿ ಅನಂತಕುಮಾರ್ ಅವರ ಪತ್ನಿ ತೇಜಸ್ವಿನಿ ಅವರಿಗೆ ಟಿಕೆಟ್ ನಿರಾಕರಿಸಲಾಯಿತು. ಕುಟುಂಬ ಬಿಟ್ಟು ಕಾರ್ಯಕರ್ತ-ರನ್ನು ಕಣಕ್ಕೆ ಇಳಿಸಿ ಗೆಲ್ಲಿಸಲಾಯಿತೇ ಎಂದರೆ, ಕಡೆಗೆ ಟಿಕೆಟ್ ಕೊಟ್ಟಿದ್ದು ಬಸವನಗುಡಿ ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಅವರ ಅಣ್ಣನ ಮಗ ತೇಜಸ್ವಿ ಸೂರ್ಯ ಅವರಿಗೆ. ಈ ನಿಯಮ ಈಗ ಸಚಿವೆಯಾಗಿರುವ ಶಶಿಕಲಾ ಜೊಲ್ಲೆ ಅವರ ಪತಿ, ಹಾಲಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಹಾಗೂ ಬಿ.ಎಸ್.ಯಡಿಯೂರಪ್ಪ ಅವರ ಮಗ, ಸಂಸದ ಬಿ.ವೈ.ರಾಘವೇಂದ್ರ, ತುಮಕೂರು ನಗರ ಶಾಸಕ ಜ್ಯೋತಿ ಗಣೇಶ್ ಅವರ ತಂದೆ ತುಮಕೂರಿನ ಸಂಸದ ಜಿ.ಎಸ್. ಬಸವರಾಜು ಅವರ ವಿಷಯಕ್ಕೆ ಅನ್ವಯವಾಗಲೇ ಇಲ್ಲ. ಬಿಜೆಪಿಯ ದ್ವಂದ್ವ ನಿಲುವು ಇಲ್ಲಿ ಜಾಹೀರುಗೊಂಡಿತು.

ಈಗ ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರನ್ನು ಕಣಕ್ಕೆ ಇಳಿಸಲು ಬಿಜೆಪಿ ಪ್ರಮುಖರ ಸಮಿತಿ ಸಭೆ ಶಿಫಾರಸು ಮಾಡಿದೆ. ವಿಧಾನಸಭೆಯ ಉಪಚುನಾವಣೆಗಳಲ್ಲಿ ವಿಜಯೇಂದ್ರ ಪ್ರವೇಶವಾದರೆ ಸಾಕು ಗೆಲುವು ಶತಃಸಿದ್ಧ ಎಂಬ ವಾದ ಮುಂದಿಟ್ಟುಕೊಂಡು 'ಕರ್ನಾಟಕದ ಚಾಣಕ್ಯ' ಎಂಬ ಬಿರುದನ್ನುಸ್ವಯಂ ವಿಜಯೇಂದ್ರ ಅಂಟಿ-ಸಿಕೊಂಡಿದ್ದಾರೆ. ಅಂತಹ ಸಾಮರ್ಥ್ಯ ತಮಗಿದೆ ಎಂದು ಹೇಳಿಸಿಕೊಳ್ಳುವ ಅವರು ನೇರವಾಗಿ ಚುನಾವಣೆ ಎದುರಿಸುವ ಗೈರತ್ತು ತೋರಬೇಕಿತ್ತು. ಅದನ್ನು ಬಿಟ್ಟು ಹಿಂಬಾಗಿಲಿನಿಂದ ಶಾಸಕರಾಗಲು ಹೊರಟಿರುವುದು ಅವರ ಸಾಮರ್ಥ್ಯಕ್ಕೆ ತಕ್ಕ ನಡೆಯಲ್ಲ.

ವಂಶವಾದಕ್ಕೆ ಪ್ರೋತ್ಸಾಹ ನೀಡುವುದಿಲ್ಲ ಎಂದು ಮೋದಿಯವರು ಖುಲ್ಲಂಖುಲ್ಲಾ ಹೇಳಿದರೂ ಯಡಿಯೂರಪ್ಪ ಕುಟುಂಬ ಈ ನಿಯಮದಿಂದ ಅತೀತವಾಗಿಯೇ ಉಳಿಯಲಿದೆ. ಏಕೆಂದರೆ ಯಡಿಯೂರಪ್ಪ ಶಿಕಾರಿಪುರದ ಶಾಸಕರು, ಮಗ ಬಿ.ವೈ.ರಾಘವೇಂದ್ರ ಶಿವಮೊಗ್ಗ ಸಂಸದರು. ಈಗ ವಿಜಯೇಂದ್ರ ಪರಿಷತ್ತಿನ ಸದಸ್ಯರಾದರೆ ಒಂದೇ ಕುಟುಂಬಕ್ಕೆ ಮೂರು ಮನೆಗಳಲ್ಲಿ ಜಾಗ ಕೊಟ್ಟಂತಾಗುತ್ತದೆ.

ಏರುವಯಸ್ಸಿನಲ್ಲಿರುವ ಯಡಿಯೂರಪ್ಪ ಅವರಿಗೆ ತಾವು ಗಟ್ಟಿಯಾಗಿರುವಾಗಲೇ ತಮ್ಮ ಮಗ ವಿಜಯೇಂದ್ರ ಅವರನ್ನು ಮಂತ್ರಿ ಮಾಡಲೇಬೇಕು ಎಂಬ ಹಟ ಬಂದಿದೆ. 'ವಿಜಯೇಂದ್ರನನ್ನು ಮಂತ್ರಿ ಮಾಡದೇ ಇದ್ದರೆ 2023ರಲ್ಲಿ ನಡೆಯಬೇಕಾದ ವಿಧಾನಸಭೆ ಚುನಾವಣೆಯಲ್ಲಿ ಪ್ರಚಾರದ ಕಡೆ ಮುಖ ಹಾಕುವುದಿಲ್ಲ' ಎಂದು ಯಡಿಯೂರಪ್ಪ ಅವರು ಅಮಿತ್ ಶಾ ಅವರ ಮುಂದೆ ಕಟ್ಟುನಿಟ್ಟಾಗಿ ಹೇಳಿದ್ದರಿಂದಲೇ ಈ ಬೆಳವಣಿಗೆ ನಡೆದಿದೆ ಎಂಬ ಮಾತುಗಳೂ ಇವೆ. ಇಂತಹ ಬೆದರಿಕೆಗೆ ಬಗ್ಗಿ ವಿಜಯೇಂದ್ರ ಅವರಿಗೆ ಮಣೆ ಹಾಕಿದ್ದೇ ಹೌದಾದರೆ ಬಿಜೆಪಿ ನಾಯಕರು ಅಷ್ಟು ದುರ್ಬಲರೇ ಎಂಬ ಪ್ರಶ್ನೆ ಎದುರಾಗುತ್ತದೆ. ಹಾಗಂತ, ಬಿಜೆಪಿಯಲ್ಲಿ ಯಡಿಯೂರಪ್ಪ ಅವರೊಬ್ಬರದ್ದೇ ವಂಶವಾದವಲ್ಲ; ಅನೇಕ ಕುಟುಂಬಗಳು ಬಿಜೆಪಿಯಲ್ಲಿ ವಿಜೃಂಭಿಸುತ್ತಾ, ವಂಶವಾದದಲ್ಲೇ ಕಮಲವನ್ನು ಹುದುಗಿಸಿಟ್ಟಿವೆ.

ಸಚಿವ ಮುರುಗೇಶ ನಿರಾಣಿ ಅವರ ತಮ್ಮ ಹಣಮಂತ ನಿರಾಣಿ, ಶಾಸಕ ಜಗದೀಶ ಶೆಟ್ಟರ್ ಅವರ ತಮ್ಮ ಪ್ರದೀಪ ಶೆಟ್ಟರ್, ಅಪ್ಪಚ್ಚು ರಂಜನ್ ಅವರ ಅಣ್ಣ ಸುಜಾ ಕುಶಾಲಪ್ಪ ವಿಧಾನ ಪರಿಷತ್ತಿನ ಸದಸ್ಯರು. ಸಚಿವೆ ಶಶಿಕಲಾ ಜೊಲ್ಲೆ ಅವರ ಪತಿ ಅಣ್ಣಾಸಾಹೇಬ ಜೊಲ್ಲೆ ಸಂಸದ. ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ವಿಧಾನಸಭೆಯಲ್ಲಿದ್ದಾರೆ. ಸಂಸದ ಉಮೇಶ ಜಾಧವ್ ಪುತ್ರ ಅವಿನಾಶ್ ಜಾಧವ್ ಶಾಸಕರು.

ಹಾವೇರಿ ಸಂಸದ ಶಿವಕುಮಾರ್ ಉದಾಸಿ ಅವರ ತಂದೆ ಸಿ.ಎಂ. ಉದಾಸಿ, ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ ಅವರ ತಂದೆ ಚಂದ್ರಕಾಂತ ಬೆಲ್ಲದ ಶಾಸಕರಾಗಿದ್ದವರು. ವಿಧಾನಪರಿಷತ್ತಿನ ಸಭಾಪತಿಯಾಗಿದ್ದ ಡಿ.ಎಚ್. ಶಂಕರಮೂರ್ತಿ ಅವರ ಮಗ ಡಿ.ಎಸ್. ಅರುಣ್ ವಿಧಾನಪರಿಷತ್ತಿನ ಸದಸ್ಯರು. ಸಚಿವ ಉಮೇಶ ಕತ್ತಿ ಅವರ ತಮ್ಮ ರಮೇಶ ಕತ್ತಿ ಒಮ್ಮೆ ಸಂಸದರಾಗಿದ್ದರು. ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಅಳಿಯ ಹರ್ಷವರ್ಧನ ನಂಜನಗೂಡಿನ ಶಾಸಕ.

ಇಲ್ಲಿ ಪ್ರಸ್ತಾಪಿಸಲೇಬೇಕಾದ ಇನ್ನೊಂದು ಅಂಶವೆಂದರೆ, ಬಳ್ಳಾರಿಯಲ್ಲಿ ಸಾಮ್ರಾಜ್ಯ ಕಟ್ಟಿದ ರೆಡ್ಡಿ ಸೋದರರ ದರ್ಬಾರ್. 2008ರ ವಿಧಾನಸಭೆ ಚುನಾವಣೆ ಹೊತ್ತಿಗೆ ಬಳ್ಳಾರಿಯನ್ನು ಕೇಂದ್ರೀಕರಿಸಿ ಸಾಮ್ರಾಜ್ಯ ಕಟ್ಟಿದ್ದ ಜಿ. ಜನಾರ್ದನ ರೆಡ್ಡಿ, ಅಂದು ಬಲಿಷ್ಠ ನಾಯಕರಾಗಿದ್ದ ಯಡಿಯೂರಪ್ಪ ಅವರನ್ನೇ ಅಲ್ಲಾಡಿಸುವ ಮಟ್ಟಕ್ಕೆ ಬೆಳೆದಿದ್ದರು. ಈಗಲೂ ಶಾಸಕರಾಗಿರುವ ಜಿ.ಕರುಣಾಕರ ರೆಡ್ಡಿ, ಜಿ. ಸೋಮಶೇಖರ ರೆಡ್ಡಿ ಆಗಲೂ ಗೆದ್ದಿದ್ದರು. ಜನಾರ್ದನ ರೆಡ್ಡಿ ಪರಿಷತ್ತಿನ ಸದಸ್ಯರಾಗಿದ್ದರು. ದೆಹಲಿ ಮಟ್ಟದಲ್ಲಿ ಪ್ರಭಾವ ಹೊಂದಿದ್ದ ಸುಷ್ಮಾ ಸ್ವರಾಜ್ ಕೃಪಾಶೀರ್ವಾದ ಇವರ ಮೇಲಿತ್ತು. ಬಿಜೆಪಿಯ ಬುಡಕ್ಕೆ ಕೈಯಿಡುವ ಆರ್ಥಿಕ ಶಕ್ತಿ ಹೊಂದಿದ್ದ ಜನಾರ್ದನ ರೆಡ್ಡಿ ಅವರ ಪ್ರಾಬಲ್ಯದ ಎದುರು ಬಿಜೆಪಿ ವರಿಷ್ಠರೇ ಹೈರಾಣಾಗಿದ್ದರು. ಗಣಿ ಹಗರಣ ಹೊರಗೆ ಬಾರದೇ ಇದ್ದರೆ, ಈ ಕುಟುಂಬವೇ ಕರ್ನಾಟಕವನ್ನು ತನ್ನ ಕೈವಶ ಮಾಡಿಕೊಳ್ಳುವ ಅಪಾಯವಿತ್ತು.

ಹೀಗೆ ಬಿಜೆಪಿಯಲ್ಲಿ ಕುಟುಂಬ ರಾಜಕಾರಣ ತನ್ನದೇ ಆದ ಪ್ರಭಾವವನ್ನು ಹೊಂದಿದೆ. ವಂಶವಾದಕ್ಕೆ ಆಸ್ಪದವೇ ಇಲ್ಲ ಎಂದು ಮೋದಿ-ಸಂತೋಷ್ ಹೇಳುತ್ತಿರುವ ಹೊತ್ತಿನಲ್ಲಿ ಬಿಜೆಪಿಯಲ್ಲಿ ಅದು ಬೆಳೆಯುತ್ತಲೇ ಇದೆ.

ಚುರುಮುರಿ



'ವಿಶ್ವ'ಕೋಶ!

• ಲಿಂಗರಾಜು ಡಿ.ಎಸ್.

'**ಸಾ ನಮಸ್ಕಾರ.** ಎಲ್ಲ ಸಾಹಿತ್ಯ ಪ್ರಕಾರವೂ ಅದೆ, ಆದರೆ ರಾಜಕೀಯ ಸಾಹಿತ್ಯವೇ ಇಲ್ಲ ಅಂದಿದೀರಲ್ಲಾ ಯಾಕೆ?' ತುರೇಮಣೆ ಸಂದರ್ಶನ ಶುರು ಮಾಡಿದರು.

'ನೋಡ್ರೀ, ಪಕ್ಷದೊಳಗಿನ ಅಕ್ರಮ, ಭ್ರಷ್ಟಾಚಾರ ತೊಳೆಯಕ್ಹೋದಾಗ ಕಸ, ದುರ್ವಾಸನೆ ಬಂದೇ ಬತ್ತದೆ! ಇದುನ್ನೆಲ್ಲಾ ಜನಕ್ಕೆ ತಿಳಿಸೋ ರಾಜಕೀಯ ಸಾಹಿತ್ಯದ 'ವಿಶ್ವಕೋಶ' ನಿಘಂಟು ಮಾಡ್ತಿದೀನಿ!' ಅಂದ್ರು.

'ಸಾ ನಿಮ್ಮ ಪುಸ್ತಕದಿಂದ ಒಂದೆರಡು ನುಡಿಮುತ್ತು ಹೇಳಿಸಾ. ನಿಮ್ಮ ಪ್ರಕಾರ ಸಂಪುಟ ವಿಸ್ತರಣೆ ಅಂದ್ರೇನು?'

'ಕಾಯೋ ಆಟಕ್ಕೆ ಸಮ್ ಪುಟಗಳ ಸೇರಿಕೆ ಅಷ್ಟೇ! ಆಕಾಂಕ್ಷಿಗಳ ಮೂಗಿಗೆ ತುಪ್ಪ ಹಚ್ಚೋದು ಅಂತೂ ಅನ್ನಬೌದು!'

'ಸಾ ಪಕ್ಷಾಂತರ ಅಂದ್ರೇನು?'

'ಪಕ್ಷಿಗಳು ಮುನಿಸಿಗ್ಯಂಡು ಪಕ್ಷದಿಂದ ಅಂತರ ಕಾಯ್ದುಕೊಳ್ಳೋದೇ ಪಕ್ಷಾಂತರ'.

'ಶಾಸನಸಭೆ ಅಂದ್ರೇನು ಅರ್ಥ ಸಾ?'

'ಶಾಸನವನ್ನು ಕುಲಗೆಡಿಸಿ ಬೆತ್ತಲೆ ಮಾಡೋಕ್ಕೆ ಅಂತಲೇ ಆಯ್ಕೆಯಾಗಿರೋ ನಾಯಕರ ಗುಂಪು ಅಂತ ಕನ್ರಿ'.

'ದುರದೃಷ್ಟ ಅಂದ್ರೇನು ಸಾ?'

'ನೋಡ್ರಿ, ಯಾರೂ ಯಾವಾಗ್ಲೂ ತಪ್ಪಿಸಿ-ಕೊಳ್ಳೋಕೆ ಆಗದೇ ಇರುವಂಥಾ ಅದೃಷ್ಟ ಅಂದ್ರೆ ದುರದೃಷ್ಟ. ಇದಕ್ಕೆ ಉದಾಹರಣೆ ನಾನು!'

'ಪಕ್ಷ ವಿರೋಧಿ ಧೋರಣೆ ಅಂದ್ರೇನು ಸಾ?'

'ಬಣ್ಣದ ಮಾತು ಬಿಟ್ಟು ಸತ್ಯ ಹೇಳಿದೋರಿಗೆ ಸಿಕ್ಕೋ ಮರ್ಯಾದೆ'.

'ಪಾರದರ್ಶಕ ತನಿಖೆ ಅರ್ಥ ಏನು ಸಾ?'

'ಅದು ಪ್ಯಾರ್ ದರ್ಶಕ ತನಿಖೆ ಕಣ್ರೀ! ಬೇಕಾದೋರನ್ನ ಉಳಿಸಕ್ಕೆ ನಡೆಯೋ ಜಗನ್ನಾಟಕ ಅಷ್ಟೇ'.

'ಕೋಮುವಾರು ಪದಕ್ಕೇನರ್ಥ?'

'ನೋಡ್ರೀ, ನಮ್ಮ ದೇಶ ನಾಶ ಮಾಡಕ್ಕೆ ಶತ್ರುದೇಶದವರ ಸಹಾಯ ಪಡೆಯೋ ವಿಧಾನವೇ ಕೋಮುವಾರ್'.

'ಕೊನೇದಾಗಿ, ಸಮ್ಮಿಶ್ರ ಸರ್ಕಾರ ಅಂದ್ರೇನು?'

'ವಿರೋಧಿಗಳೆಲ್ಲಾ ಸೇರಿ ನಡೆಸೋ ಕಿಚಡಿ ಸರ್ಕಾರ ಅಂತ'.

'ನಿಮ್ಮ ರಾಜಕೀಯ ಸಾಹಿತ್ಯಕ್ಕೆ ಒಳ್ಳೇದಾಗ್ಲಿ ಸಾ, ನಮಸ್ಕಾರ'.

ಸಂಗತ

ಇದೋ ಇಲ್ಲಿದೆ ಪುಸ್ತಕದ ಮರ!

ಕೊಂಬೆಯಲ್ಲಿ ನೇತಾಡುವ ಪುಸ್ತಕಗಳಲ್ಲಿ ತಮಗೆ ಬೇಕಾದುದನ್ನು ಆಯ್ದುಕೊಳ್ಳುವ ಮಕ್ಕಳು, ಹಣ್ಣನ್ನು ತಿಂದು ಮುಗಿಸುವಂತೆ ಪುಸ್ತಕದ ಎಲ್ಲ ಪುಟಗಳನ್ನೂ ತನ್ಮಯದಿಂದ ಓದುತ್ತಾರೆ

• ರಾಜಗುರು ಎಸ್.

ಮಹಾರಾಷ್ಟ್ರದ ಅತ್ಯಂತ ಹಿಂದುಳಿದ ಜಿಲ್ಲೆ ಎನಿಸಿರುವ ಗಡ್‌ಚಿರೋಲಿಯ ಭಮ್ರಗಡ ತಾಲ್ಲೂಕಿನ ಕೊಯಂಗುಡದ ಪ್ರಾಥಮಿಕ ಶಾಲೆಯ ಆವರಣದಲ್ಲಿರುವ ಮರದಲ್ಲಿ ಹಣ್ಣುಗಳ ಬದಲಿಗೆ ಪುಸ್ತಕಗಳು ನೇತಾಡುತ್ತಿವೆ! ಬೇಸಿಗೆಯ ರಜೆ ಇದ್ದರೂ ಪ್ರತಿದಿನ ಮುಂಜಾನೆ ಶಾಲೆಗೆ ಓಡಿಬರುವ ಮಕ್ಕಳು, ಮರದ ರೆಂಬೆ- ಕೊಂಬೆಗಳಲ್ಲಿ ನೇತಾಡುವ ಬಣ್ಣಬಣ್ಣದ ಪುಸ್ತಕಗಳನ್ನು ಬಿಡಿಸಿಕೊಂಡು ತನ್ಮಯರಾಗಿ ಓದುತ್ತಾ ಕಾಲ ಕಳೆಯುತ್ತಿದ್ದಾರೆ.

ಜಿಲ್ಲಾ ಪಂಚಾಯಿತಿ ಸ್ಥಾಪಿಸಿರುವ ಈ ಶಾಲೆಯಲ್ಲಿ 175 ಮಕ್ಕಳಿದ್ದಾರೆ. ವಿಜ್ಞಾನ, ಜನಪದ, ಕೃಷಿ, ನೀತಿ ಕತೆ, ಕಾರ್ಟೂನ್, ಲಾವಣಿಪದ, ಗ್ರಾಮೀಣ ಆಟೋಟ, ನಕ್ಷತ್ರಯಾನ, ಬಾಹ್ಯಾಕಾಶ ಕೌತುಕ, ಚಾಲಕರಹಿತ ಕಾರು, ಸೈಬೋರ್ಗ್, ತ್ರೀಡಿ ಚಿತ್ರ... ಹೀಗೆ ಹತ್ತು ಹಲವು ಆಕರ್ಷಕ ವಿಷಯಗಳ ಕುರಿತ ಪುಸ್ತಕಗಳನ್ನು ಮರದಲ್ಲಿ ನೇತುಹಾಕಿ, ಮಕ್ಕಳನ್ನು ಪಠ್ಯಪುಸ್ತಕಗಳ ಓದಿನಿಂದ ಆಚೆಗೆ ತಂದು ಹೊರಗೊಂದು ವೈಶಿಷ್ಟ್ಯಪೂರ್ಣ ಜಗತ್ತಿದೆ, ಕಲಿಯಲು, ಆನಂದಿಸಲು ಅನೇಕ ವಿಷಯಗಳಿವೆ ಎಂದು ತೋರಿಸಿಕೊಡುತ್ತಿದ್ದಾರೆ ಶಾಲೆಯ ಶಿಕ್ಷಕ ವಿನೀತ್ ಪದ್ಮಾವರ್. ಮರಕ್ಕೆ 'ಪುಸ್ತಕಾಂಚ ಜಾಡ್' (ಪುಸ್ತಕದ ಮರ) ಎಂದು ಹೆಸರಿಟ್ಟಿದ್ದೇವೆ ಎಂದು ಅವರು ಉತ್ಸಾಹದಿಂದ ನುಡಿಯುತ್ತಾರೆ.

'ಹಣ್ಣಿನ ಮರದಿಂದ ಹಣ್ಣು ಕಿತ್ತುಕೊಂಡು ತಿನ್ನುವುದಕ್ಕೂ ಮುಂಚೆ ಅದು ಸಿಹಿಯಾಗಿದೆಯೋ ಇಲ್ಲವೋ ಎಂಬ ಕುತೂಹಲವಿರುವಂತೆ, ಶಾಲೆಗೆ ಓಡೋಡಿ ಬರುವ ಮಕ್ಕಳು ತಾವು ಕೈಹಾಕಿ ಕೊಂಬೆಯಿಂದ ಬಿಡಿಸಿಕೊಂಡ ಪುಸ್ತಕ ಓದಲು ತೊಡಗಿದಾಗ ಖುಷಿ ನೀಡುತ್ತದೋ ಇಲ್ಲವೋ ಎಂಬ ಕುತೂಹಲ ಪ್ರದರ್ಶಿಸುವುದನ್ನು ಕಂಡಾಗ ನಮ್ಮ ಕೆಲಸ ಸಾರ್ಥಕವಾದಂತೆ ಭಾಸವಾಗುತ್ತದೆ' ಎನ್ನುವ ವಿನೀತ್, 'ಪ್ರತೀ ಮೂರು ದಿನಗಳಿಗೆ ಹೊಸ ಪುಸ್ತಕಗಳು ಕೊಂಬೆಯಲ್ಲಿ ನೇತಾಡುತ್ತಿರುತ್ತವೆ' ಎಂಬ ಮಾಹಿತಿ ನೀಡುತ್ತಾರೆ.

ಬೇಕಾದ ಪುಸ್ತಕವನ್ನು ಆಯ್ಕೆ ಮಾಡಿಕೊಳ್ಳುವ ಮಕ್ಕಳು ಇಡೀ ಹಣ್ಣನ್ನು ತಿಂದು ಮುಗಿಸುವಂತೆ ಪುಸ್ತಕದ ಎಲ್ಲ ಪುಟಗಳನ್ನೂ ತನ್ಮಯದಿಂದ ಓದುತ್ತಾರೆ. ಬೆಳೆಯುವ ಮಕ್ಕಳಲ್ಲಿ ಅಪಾರ ಕುತೂಹಲ ಇರುತ್ತದೆ. ಪ್ರಕೃತಿಯ ವಿಸ್ಮಯಗಳ ಬಗ್ಗೆ ಅನೇಕ ಪ್ರಶ್ನೆ, ಅನುಮಾನಗಳು ಇರುತ್ತವೆ. ಅವುಗಳಿಗೆಲ್ಲ ಒಬ್ಬರೇ ಶಿಕ್ಷಕರ ಬಳಿ ಉತ್ತರಗಳಿರುವುದಿಲ್ಲ. ಆಗ ಈ ಪುಸ್ತಕಗಳು ನೆರವಿಗೆ ಬರುತ್ತವೆ ಎನ್ನುವ ಶಾಲೆಯ ಶಿಕ್ಷಕರು, ಮಕ್ಕಳಿಗೆ ವಿಜ್ಞಾನ- ತಂತ್ರಜ್ಞಾನ ಕುರಿತಾದ ಪುಸ್ತಕಗಳು ಹೆಚ್ಚು ಹಿಡಿಸಿವೆ, ಆದರೆ ಅವೆಲ್ಲವೂ ಇಂಗ್ಲಿಷ್‌ನಲ್ಲಿವೆ, ಮಾತೃಭಾಷೆ ಮರಾಠಿಯಲ್ಲಿ ಇಲ್ಲ ಎಂಬ ನೋವು ತೋಡಿಕೊಳ್ಳುತ್ತಾರೆ.

ಮರದಲ್ಲೀಗ ತ್ರೀಡಿ ಪುಸ್ತಕಗಳ ಹೊಸ ಫಸಲು ಬಂದಿದ್ದು ಅವುಗಳಿಗೆ ಭಾರಿ ಬೇಡಿಕೆ ಉಂಟಾಗಿದೆ. ತ್ರೀಡಿ ಆಯಾಮದ ಕತೆ ಪುಸ್ತಕಗಳನ್ನು ಓದಲು ತ್ರೀಡಿ ಕನ್ನಡಕಗಳನ್ನೂ ನೀಡುತ್ತಿರುವ ಶಾಲೆಯ ಆಡಳಿತ ಮಂಡಳಿಯು ಮಕ್ಕಳಲ್ಲಿರುವ ಪುಸ್ತಕಾಸಕ್ತಿಯನ್ನು ಕಂಡು ದಂಗಾಗಿದೆ. 'ನನಗೆ, ನನಗೆ ಎಂದು ಮಕ್ಕಳು ಪುಸ್ತಕಕ್ಕಾಗಿ ಕಿತ್ತಾಡಿಕೊಂಡದ್ದೂ ಇದೆ. ತ್ರೀಡಿ ಕನ್ನಡಕ ಧರಿಸಿ, ಪುಸ್ತಕ ಹಿಡಿದು ಕೂತರೆ ಮಧ್ಯಾಹ್ನದ ಊಟದ ಪರಿವೆಯೂ ಮಕ್ಕಳಿಗೆ ಇರುವುದಿಲ್ಲ' ಎನ್ನುತ್ತಾರೆ ಮರಾಠಿ ಶಿಕ್ಷಕಿ ಶೀತಲ್ ಡೊಂಗ್ರೆ.

ಗಾಳಿ, ಮಳೆ, ದೂಳಿನಿಂದ ರಕ್ಷಿಸಲು ವಾರಾಂತ್ಯದಲ್ಲಿ ಪುಸ್ತಕಗಳನ್ನು ಶಾಲಾ ಕೊಠಡಿಯ ಕಪಾಟಿನಲ್ಲಿ ಇಡಲಾಗುತ್ತದೆ. ಸೋಮವಾರದಿಂದ ಶುಕ್ರವಾರದವರೆಗೆ ಮಕ್ಕಳು ಅಲ್ಲಿಗೇ ಬಂದು ಓದಿ, ಓದಿದ್ದು ಮುಗಿದ ನಂತರ ಹಿಂತಿರುಗಿ ಕೊಂಬೆಗೆ ನೇತು ಹಾಕಬೇಕು ಎಂಬ ನಿಯಮವಿದೆ. ಪುಸ್ತಕ ಓದಿ ಮುಗಿಸಿದ ಮಕ್ಕಳು ತಾವು ಓದಿದ ಪುಸ್ತಕದ ಹೆಸರು, ಕತೆಯ ಸಾರಾಂಶ ಮತ್ತು ತಮಗೇನನ್ನಿಸಿತು ಹಾಗೂ ಪ್ರಶ್ನೆಗಳೇನಿವೆ ಎಂಬುದನ್ನು ಶನಿವಾರದಂದು ಇತರ ಸಹಪಾಠಿಗಳೆದುರು ಹೇಳಬೇಕು. ಇದನ್ನು ಮಕ್ಕಳು ಅತ್ಯಂತ ಖುಷಿಯಿಂದ ಮಾಡುತ್ತಿದ್ದಾರೆ. ಸಾಮಾನ್ಯ ದಿನಗಳಲ್ಲಿ ಶಾಲೆ ತಪ್ಪಿಸಿಕೊಳ್ಳುತ್ತಿದ್ದ ಮಕ್ಕಳೂ ಈಗ ಪುಸ್ತಕದ ಮರಕ್ಕೆ ಆಕರ್ಷಿತರಾಗಿದ್ದಾರೆ ಎನ್ನುವ ಗ್ರಾಮ ಪಂಚಾಯಿತಿ ಸದಸ್ಯ ನರಸಿಂಗ ರಾವ್, ಪಂಚಾಯಿತಿ ವತಿಯಿಂದ ರಾತ್ರಿಯ ವೇಳೆಯೂ ಮಕ್ಕಳ ಓದಿಗೆ ವ್ಯವಸ್ಥೆ ಕಲ್ಪಿಸಲು ಪ್ರಯತ್ನ ನಡೆದಿದೆ ಎಂದಿದ್ದಾರೆ.

ತಮ್ಮ ಇಬ್ಬರು ಮಕ್ಕಳು ಮರಾಠಿ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳನ್ನು ಸಲೀಸಾಗಿ ಓದುವುದನ್ನು ರೂಢಿಸಿಕೊಳ್ಳುತ್ತಿದ್ದಾರೆ ಎನ್ನುವ ರಕ್ಷಕ್ ಮಾನೆ, ಶಾಲೆಯ ಪ್ರಯತ್ನವನ್ನು ಮನಸಾರೆ ಹೊಗಳುತ್ತಾರೆ. ನಾಲ್ಕು ಮತ್ತು ಐದನೇ ತರಗತಿಗಳಲ್ಲಿ ಓದುತ್ತಿರುವ ಶೀತಲ್ ಮತ್ತು ರಾಮಸ್ವರೂಪ್, 'ನಮಗೆ ತ್ರೀಡಿಯಲ್ಲಿರುವ ಸೂಪರ್‌ಮ್ಯಾನ್, ಸ್ಪೈಡರ್‌ಮ್ಯಾನ್ ಕಾಮಿಕ್ಸ್ ತುಂಬಾ ಇಷ್ಟ. ಏಲಿಯನ್ಸ್ ಬಗೆಗಿನ ಪುಸ್ತಕಗಳು ನಮಗೆ ಬೇಕು' ಎನ್ನುತ್ತಾರೆ. ಶಿಕ್ಷಕರು ಮಾಡಿದ ಪುಟ್ಟ ಪ್ರಯತ್ನ ಮಕ್ಕಳಲ್ಲಿ ಓದಿನ ಅಭಿರುಚಿ ಬೆಳೆಸುವಲ್ಲಿ ದೊಡ್ಡ ಪರಿಣಾಮವನ್ನೇ ಉಂಟುಮಾಡಿದೆ.

ಕೇವಲ 30 ಪುಸ್ತಕಗಳಿಂದ ಶುರುವಾದ ಪುಸ್ತಕದ ಮರದಲ್ಲೀಗ 300 ಪುಸ್ತಕಗಳಿವೆ. ಯುನಿಸೆಫ್ ಮತ್ತು ಖಾಸಗಿ ಸಹಭಾಗಿತ್ವದಿಂದಾಗಿ ಮಹಾರಾಷ್ಟ್ರದ ಅನೇಕ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಶಾಲೆಗಳಲ್ಲಿ ಗ್ರಂಥಾಲಯಗಳಿವೆ. ಮಕ್ಕಳಲ್ಲಿ ಪುಸ್ತಕಪ್ರೀತಿ ಮತ್ತು ಓದಿನ ಅಭಿರುಚಿ ಬೆಳೆಸುವ ಕೊಯಂಗುಡ ಶಾಲೆಯ ಶಿಕ್ಷಕನ ವಿನೂತನ ಪ್ರಯತ್ನ ದೇಶದ ಇತರ ರಾಜ್ಯಗಳೂ ಅನುಕರಿಸಬಹುದಾದ ಸುಲಭ ಮಾದರಿಯಾಗಿದೆ.

ವಾಚಕರ ವಾಣಿ

ಕಾಂಗ್ರೆಸ್‌ನವರು ಪ್ರಶ್ನಿಸಬೇಕಿರುವುದು...

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ತಾಯಿಯ ಬ್ಯಾಂಕ್ ಖಾತೆಗೆ ಸರ್ಕಾರದ ಯಾವ ಯೋಜನೆ ಅಡಿ ₹ 1 ಲಕ್ಷ ಜಮಾ ಆಗಿದೆ?' ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ಕಾಂಗ್ರೆಸ್ಸಿಗರೇ, ಪ್ರಧಾನಿಯವರ ವಾಗ್ದಾನ ಮರೆತಿರಾ?! 'ದೇಶವಾಸಿಗಳಾದ ಪ್ರತೀ ನಾಗರಿಕರ ಖಾತೆಗೆ ₹ 15 ಲಕ್ಷ ಜಮಾ!' ಎಂದು ಈ ಹಿಂದೆ ಅವರು ಹೇಳಿದ್ದು, ಅದರ ಬಾಬ್ತು ಚಾಲನೆಯ ಮೊದಲ ಕಂತಾಗಿ ಕಟೀಲ್ ಅವರ ತಾಯಿಯ ಬ್ಯಾಂಕ್ ಖಾತೆಗೆ ₹ 1 ಲಕ್ಷ ಜಮಾ ಆಗಿರಬಹುದು!

ಕಾಂಗ್ರೆಸ್ಸಿಗರು ಅದನ್ನೇ ಪ್ರಶ್ನೆ ಮಾಡುವುದಲ್ಲ. 'ಉಳಿದ ₹ 14 ಲಕ್ಷ ಯಾವಾಗ ಜಮಾ ಮಾಡುವಿರಿ?' ಎಂದು ಪ್ರಶ್ನಿಸಲಿ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಕಾಂಗ್ರೆಸ್ ಇನ್ನೂ ಪಾಠ ಕಲಿತಿಲ್ಲವೇ?

'ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್‌ಗಷ್ಟೇ ಸಾಧ್ಯ. ಪ್ರಾದೇಶಿಕ ಪಕ್ಷಗಳಿಗೆ ಸಿದ್ಧಾಂತವಿಲ್ಲ, ಹೋರಾಡುವುದಕ್ಕೆ ಅವುಗಳಿಂದ ಸಾಧ್ಯವಿಲ್ಲ' ಎಂದಿದ್ದಾರೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ (ಪ್ರ.ವಾ., ಮೇ 16). ಅವರ ಈ ಅಭಿಪ್ರಾಯ ಕೇಳಿದರೆ ಕಾಂಗ್ರೆಸ್ ಪಕ್ಷ ಇನ್ನೂ ಪಾಠ ಕಲಿತಿಲ್ಲವೆಂದೇ ಅನ್ನಿಸುತ್ತದೆ! ಡಿಎಂಕೆ, ಟಿಎಂಸಿ, ಟಿಆರ್‌ಎಸ್, ಎಎಪಿಯಂತಹ ಪ್ರಾದೇಶಿಕ ಪಕ್ಷಗಳು ಇಂದು ಜನಮಾನಸದಲ್ಲಿ ವಿಶ್ವಾಸ ಗಳಿಸಿ ಅಧಿಕಾರ ಹಿಡಿದಿವೆ. ಅಂಥ ಪ್ರಾದೇಶಿಕ ಪಕ್ಷಗಳ ಬೆಂಬಲವಿಲ್ಲದೆ ಇಂದು ಯಾವ ರಾಷ್ಟ್ರೀಯ ಪಕ್ಷವೂ ಅಧಿಕಾರಕ್ಕೆ ಬರಲಾಗದು. ಪ್ರಾದೇಶಿಕ ಪಕ್ಷವೆಂದರೆ ಅದು ಆಯಾ ರಾಜ್ಯದ ಸ್ವಾಭಿಮಾನದ ಸಂಕೇತವಾಗಿದೆಯಷ್ಟೆ.

ಇಷ್ಟು ವರ್ಷ ಕೇಂದ್ರದಲ್ಲಿ ಅಧಿಕಾರ ನಡೆಸಿದ ಕಾಂಗ್ರೆಸ್, ಬಿಜೆಪಿಯು ಭಾಷೆ, ನೀರು, ರೈಲು, ತೆರಿಗೆ ಹಂಚಿಕೆಯಂತಹ ವಿಚಾರಗಳಲ್ಲಿ ಅನ್ಯಾಯ ಮಾಡುತ್ತಲೇ ಬಂದಿವೆ. ಹೀಗಾಗಿ ಒಕ್ಕೂಟ ವ್ಯವಸ್ಥೆಯ ನಮ್ಮ ದೇಶದಲ್ಲಿ ಆಯಾ ರಾಜ್ಯದ ಜನರು ಸಂವಿಧಾನಾತ್ಮಕವಾಗಿಯೇ ಪ್ರಾದೇಶಿಕ ಪಕ್ಷ ಕಟ್ಟಿಕೊಂಡು ತಮ್ಮ ಸ್ವಾಭಿಮಾನವನ್ನು ಮೆರೆಯುತ್ತಿ-ದ್ದಾರೆ. ತಮ್ಮ ಹಕ್ಕನ್ನು ಪಡೆಯುತ್ತಿದ್ದಾರೆ. ಕೇಂದ್ರ ಸರ್ಕಾರದ ನಿಲುವನ್ನು ಪ್ರಶ್ನಿಸುತ್ತಾರೆ. ಹೀಗಾಗಿ ಇಂದು ಯಾರೂ ಪ್ರಾದೇಶಿಕ ಪಕ್ಷಗಳನ್ನು ಕಡೆಗಣಿಸುವಂತಿಲ್ಲ. ಇಂತಹುದರಲ್ಲಿ ರಾಹುಲ್ ಗಾಂಧಿ ಅವರು ಪ್ರಾದೇಶಿಕ ಪಕ್ಷಗಳನ್ನು ಅನುಮಾನಿಸುತ್ತಿರುವುದು ಅವರ ರಾಜಕೀಯ ಭವಿಷ್ಯಕ್ಕೆ ಒಳ್ಳೆಯದಲ್ಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸರ್ಕಾರಿ ನೌಕರಿ: ಮನೋಭಾವ ಬದಲಾಗಲಿ

ಸರ್ಕಾರಿ ಇಲಾಖೆಗಳು ಇರುವುದು ಜನರಿಗೆ ಸೇವೆ ಒದಗಿಸಲು ಮತ್ತು ಅವರ ಅಗತ್ಯಗಳನ್ನು ಪೂರೈಸಲು. ಆದರೆ ಕಾಲಕ್ರಮೇಣ ಆ ಸೇವಾ ಮನೋಭಾವ ಕರಗಿಹೋಗಿ, ಹಣ ಗಳಿಕೆಯು ಪ್ರಧಾನ ಆಗತೊಡಗಿದೆ. ಸೇವಾ ಭದ್ರತೆಗಾಗಿ, ಆರ್ಥಿಕವಾಗಿ ಸುಸ್ಥಿತಿಗೆ ಬರಲು ಸರ್ಕಾರಿ ನೌಕರಿ ಬೇಕು ಎಂಬ ಸ್ಥಿತಿ ಈಗ ಇದೆ. ಸರ್ಕಾರಿ ಉದ್ಯೋಗದ ಆಕಾಂಕ್ಷಿಗಳೆಲ್ಲರೂ ಹೀಗೇ ಆಲೋಚಿಸಿದರೆ ಸರ್ಕಾರಿ ಸೇವೆ ಎಂಬುದು ಸಮಾಜದ ಪಾಲಿಗೆ ನಿಷ್ಪ್ರಯೋಜಕವಾಗುತ್ತದೆ. ಆದ್ದರಿಂದ ಈಗಿನ ಯುವಕ, ಯುವತಿಯರಲ್ಲಿ ನಾವು ಬೇರೂರಿಸಬೇಕಾಗಿರುವುದು ಸರ್ಕಾರಿ ಸೇವೆಯ ಪರಿಕಲ್ಪನೆಯನ್ನೇ ವಿನಾ ಸರ್ಕಾರಿ ಕೆಲಸದ ಬಗೆಗಿನ ವ್ಯಾಮೋಹವನ್ನಲ್ಲ.

ರಾಕೇಶ್ ಎನ್.ಎಸ್., ಬೆಂಗಳೂರು

ಆ್ಯಸಿಡ್ ದಾಳಿ: ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲಿ

ಪ್ರೀತಿ ನಿರಾಕರಿಸಿದ ಕಾರಣಕ್ಕೆ ಯುವತಿಯೊಬ್ಬಳ ಮೇಲೆ ಆ್ಯಸಿಡ್ ಎರಚಿ ಪರಾರಿಯಾಗಿದ್ದ ಆರೋಪಿ ನಾಗೇಶ್‌ನನ್ನು ಬೆಂಗಳೂರಿನ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ತಮಿಳುನಾಡಿನಲ್ಲಿ ಬಂಧಿಸಿದ್ದು ಶ್ಲಾಘನೀಯ. ಪ್ರೀತಿ- ಪ್ರೇಮ, ಕೌಟುಂಬಿಕ ಕಲಹಗಳಿಂದ ಈ ಹಿಂದೆಯೂ ಅನೇಕ ಅಮಾಯಕ ಯುವತಿಯರು, ಮಹಿಳೆಯರು ಇಂತಹ ವಿಕೃತ ಕೃತ್ಯಕ್ಕೆ ಬಲಿಯಾಗಿದ್ದಾರೆ. ಒಬ್ಬಿಬ್ಬರು ಮಾಡುವ ಇಂತಹ ಕೃತ್ಯಗಳು ಇಡೀ ಪುರುಷ ಸಮುದಾಯವೇ ತಲೆ ತಗ್ಗಿಸುವಂತೆ ಮಾಡುತ್ತವೆ.

ನಾಗೇಶ್‌ನಂತಹ ವಿಕೃತ ಮನಃಸ್ಥಿತಿಯವರಿಗೆ ತಕ್ಕ ಶಿಕ್ಷೆಯಾಗಬೇಕು. ಕಠಿಣ ಶಿಕ್ಷೆಯಾಗುವಂತಹ ಕಾನೂನುಗಳನ್ನು ಜಾರಿಗೊಳಿಸಬೇಕಾಗಿದೆ. ಆಗಮಾತ್ರ ಆ್ಯಸಿಡ್ ದಾಳಿ ಪ್ರಕರಣಗಳು ಕೊನೆಯಾಗಲಿವೆ. ಯಥಾಪ್ರಕಾರ ಎಲ್ಲ ಅಪರಾಧ ಪ್ರಕರಣಗಳಂತೆ ಆ್ಯಸಿಡ್ ದಾಳಿಯನ್ನೂ ಪರಿಗಣಿಸಿದರೆ, ಇಂತಹ ವಿಕೃತಗಳು ಮುಂದುವರಿಯುತ್ತವೆ. ಆ್ಯಸಿಡ್ ದಾಳಿ ಸಂತ್ರಸ್ತರಿಗೆ ನೀಡುತ್ತಿರುವ ಮಾಸಿಕ ಪಿಂಚಣಿ ಮೊತ್ತವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೆಚ್ಚಿಸಿದ್ದಾರೆ. ಅಲ್ಲದೆ, ಅವರಿಗೆ ನಿವೇಶನ, ಮನೆ ಮತ್ತು ಸ್ವಯಂ ಉದ್ಯೋಗಕ್ಕೆ ನೆರವು ನೀಡುವ ಬಗ್ಗೆ ಘೋಷಣೆ ಮಾಡಿರುವುದು ಸ್ವಾಗತಾರ್ಹ. ನೊಂದವರ ಜತೆ ಸರ್ಕಾರ ಸದಾ ನಿಲ್ಲುತ್ತದೆ ಎಂದು ಹೇಳುತ್ತಿದ್ದ ಬೊಮ್ಮಾಯಿ, ಆ್ಯಸಿಡ್ ಸಂತ್ರಸ್ತೆಯರ ನೆರವಿಗೆ ನಿಲ್ಲುವ ಮೂಲಕ ತಮ್ಮ ಮಾತನ್ನು ಉಳಿಸಿಕೊಂಡಿದ್ದಾರೆ.

ರತ್ನಾ ಮೂರ್ತಿ, ತುಮಕೂರು

ಸುರಕ್ಷತೆ ಆಡಿಟ್ ಕಡ್ಡಾಯವಾಗಲಿ

ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತೆಯ ಕೊರತೆ ಇದೆ ಎನ್ನುವುದಕ್ಕೆ ಬೆಂಗಳೂರಿನ ಬಸ್ ನಿಲ್ದಾಣದಲ್ಲಿದ್ದ ಜಾಹೀರಾತು ಫಲಕದ ತಂತಿಯ ಮೂಲಕ ವಿದ್ಯುತ್ ಪ್ರವಹಿಸಿ, 28 ವರ್ಷದ ಯುವಕ ಮೃತಪಟ್ಟಿರುವುದು (ಪ್ರ.ವಾ., ಮೇ 16) ನಿದರ್ಶನವಾಗಿದೆ. ಮತ್ತೊಂದು ಮಗದೊಂದು ವಿದ್ಯುತ್ ಅವಘಡ ಸಂಭವಿಸುತ್ತಲೇ ಇವೆ. ಅಷ್ಟಕ್ಕೂ ಬಸ್ ನಿಲ್ದಾಣ ದಲ್ಲಿದ್ದ ಅಕ್ರಮ ಸಂಪರ್ಕ ಬೆಸ್ಕಾಂ ಸಿಬ್ಬಂದಿಗೆ ಕಾಣಿಸಲಿಲ್ಲವೇ? ಜಾಹೀರಾತು ಕಂಪನಿಯು ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದು ಒಪ್ಪುವಂಥದ್ದಲ್ಲ. ಆದರೆ, ಸಾರ್ವಜನಿಕ ಸ್ಥಳಗಳಲ್ಲಿ ಆಗಾಗ್ಗೆ 'ಸುರಕ್ಷತೆ ಬಗ್ಗೆ ಆಡಿಟ್' ನಡೆಸಲು ಬೆಸ್ಕಾಂ ಮುಂದಾಗಿದ್ದರೆ ಇಂಥ ಅಕ್ರಮಗಳನ್ನು ಮುಂಚಿತವಾಗಿಯೇ ಪತ್ತೆ ಹಚ್ಚಿ ಸರಿಪಡಿಸಬಹುದಿತ್ತಲ್ಲವೇ? ಸುರಕ್ಷತೆ ಬಗ್ಗೆ ಜನರು ಸಂಬಂಧಪಟ್ಟವರಿಗೆ ಮನವಿ ಮಾಡಿಕೊಳ್ಳುವುದು ಅಥವಾ ಮಾಧ್ಯಮಗಳು ಸುದ್ದಿ ಪ್ರಕಟ ಮಾಡಿದ ನಂತರವಷ್ಟೇ ಅಧಿಕಾರಿಗಳು ಎಚ್ಚೆತ್ತುಕೊಳ್ಳುವುದು ಯಾವ ನ್ಯಾಯ?

ಡಾ. ಜಿ.ಬೈರೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುಡಿತದ ಅಭ್ಯಾಸ ಮಹಿಳೆಯರಲ್ಲಿ ಅತ್ಯಲ್ಪ

ದೇಶದ ಒಟ್ಟು ಪುರುಷರಲ್ಲಿ ಸರಾಸರಿ ಶೇ 18.8ರಷ್ಟು ಮಂದಿ ಕುಡಿತದ ಅಭ್ಯಾಸವಿರಿಸಿಕೊಂಡಿದ್ದಾರೆ ಎನ್ನುತ್ತದೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ–5ರ ವರದಿ. ಈ ಸಮೀಕ್ಷೆ ಅಡಿ ಇದೇ ಮೊದಲ ಬಾರಿಗೆ ಕುಡಿತದ ಅಭ್ಯಾಸವಿರುವವರ ದತ್ತಾಂಶಗಳನ್ನು ಸೇರಿಸಲಾಗಿದೆ. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕುಡಿತದ ಅಭ್ಯಾಸವಿರುವವರ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಮಹಿಳೆಯರಲ್ಲಿ ಕುಡಿತದ ಅಭ್ಯಾಸವಿರುವವರ ದತ್ತಾಂಶವನ್ನೂ ಈ ವರದಿಯಲ್ಲಿ ನೀಡಲಾಗಿದೆ. ಪುರುಷರಿಗೆ ಹೋಲಿಸಿದರೆ, ದೇಶದ ಎಲ್ಲಾ ರಾಜ್ಯಗಳಲ್ಲಿ ಕುಡಿತದ ಅಭ್ಯಾಸವಿರುವ ಮಹಿಳೆಯರ ಪ್ರಮಾಣ ತೀರಾ ಕಡಿಮೆ ಇದೆ.

ದೇಶದ ಪುರುಷರಲ್ಲಿ ಕುಡಿತದ ಅಭ್ಯಾಸ

ನಗರ → 16.5% ಕುಡಿತದ ಅಭ್ಯಾಸ ಇರುವವರ ಪ್ರಮಾಣ

ಗ್ರಾಮೀಣ → 19.9% ಕುಡಿತದ ಅಭ್ಯಾಸ ಇರುವವರ ಪ್ರಮಾಣ

ಸರಾಸರಿ → 18.8% ಕುಡಿತದ ಅಭ್ಯಾಸ ಇರುವವರ ಪ್ರಮಾಣ

ದೇಶದ ಮಹಿಳೆಯರಲ್ಲಿ ಕುಡಿತದ ಅಭ್ಯಾಸ

ನಗರ → 0.6% ಕುಡಿತದ ಅಭ್ಯಾಸ ಇರುವವರ ಪ್ರಮಾಣ

ಗ್ರಾಮೀಣ → 1.6% ಕುಡಿತದ ಅಭ್ಯಾಸ ಇರುವವರ ಪ್ರಮಾಣ

ಸರಾಸರಿ → 1.3% ಕುಡಿತದ ಅಭ್ಯಾಸ ಇರುವವರ ಪ್ರಮಾಣ

ಪುರುಷರಲ್ಲಿ ಕುಡಿತದ ಪ್ರಮಾಣ (ಶೇಕಡವಾರು ಪ್ರಮಾಣದಲ್ಲಿ)

0-10% | 10.1-20% | 20.1-40% | 40.1% ಗಿಂತಲೂ ಹೆಚ್ಚು



ರಾಜ್ಯ	ನಗರ	ಗ್ರಾಮೀಣ	ಸರಾಸರಿ
ಹಿಮಾಚಲ ಪ್ರದೇಶ	30.4	32.1	31.9
ಅವಿಭಜಿತ ಜಮ್ಮು–ಕಾಶ್ಮೀರ	7.7	9.2	8.8
ಪಂಜಾಬ್	19.7	24.8	22.8
ಹರಿಯಾಣ	15.7	16.2	16.1
ದೆಹಲಿ	21.6	22.9	21.6
ರಾಜಸ್ಥಾನ	9.3	11.6	11
ಗುಜರಾತ್	4.6	6.8	5.8
ಮಹಾರಾಷ್ಟ್ರ	13	14.7	13.9
ಗೋವಾ	38.2	34.9	36.9
ಕರ್ನಾಟಕ	15.3	17.4	16.5
ಕೇರಳ	18.7	21	19.9
ತಮಿಳುನಾಡು	21.5	29.2	25.4
ಉತ್ತರಾಖಂಡ	21.7	27.5	25.5
ಉತ್ತರ ಪ್ರದೇಶ	13.2	15.1	14.6
ಪಶ್ಚಿಮ ಬಂಗಾಳ	18.9	17.7	18.1
ಮಧ್ಯಪ್ರದೇಶ	13.2	18.6	17.1
ತೆಲಂಗಾಣ	33.9	49	43.3
ಛತ್ತೀಸಗಢ	28.6	36.7	34.8
ಒಡಿಶಾ	22.7	30.2	28.8
ಆಂಧ್ರಪ್ರದೇಶ	20.5	24.5	23.3
ಬಿಹಾರ	14	15.8	15.5
ಜಾರ್ಖಂಡ್	24.6	38.7	35
ಸಿಕ್ಕಿಂ	37.6	41.1	39.8
ಅರುಣಾಚಲ ಪ್ರದೇಶ	44.3	54.3	52.7
ನಾಗಾಲ್ಯಾಂಡ್	26.8	22.5	24
ಮಣಿಪುರ	34.6	39.2	37.5
ಅಸ್ಸಾಂ	21.3	25.9	25.1
ಮಿಜೋರಾಂ	22.8	25.2	23.8
ತ್ರಿಪುರಾ	26.9	35.9	33.1
ಮೇಘಾಲಯ	28.5	33.5	32.4

- ದೇಶದ ಎಲ್ಲಾ ರಾಜ್ಯಗಳ ಪುರುಷರಲ್ಲಿ ಕುಡಿತದ ಅಭ್ಯಾಸ ಒಂದೇ ರೀತಿಯಲ್ಲಿ ಇಲ್ಲ. ಕೆಲವು ರಾಜ್ಯಗಳಲ್ಲಿ ಈ ಪ್ರಮಾಣ ಅತ್ಯಧಿಕವಾಗಿದ್ದರೆ, ಕೆಲವು ರಾಜ್ಯಗಳಲ್ಲಿ ತೀರಾ ಕಡಿಮೆ ಇದೆ
- ದೇಶದ ನಗರ ಪ್ರದೇಶಗಳಿಗೆ ಹೋಲಿಸಿದರೆ, ಗ್ರಾಮೀಣ ಪ್ರದೇಶದಲ್ಲಿ ಕುಡಿತದ ಅಭ್ಯಾಸವಿರುವ ಪುರುಷರ ಪ್ರಮಾಣ ಹೆಚ್ಚು. ಕೆಲವು ರಾಜ್ಯಗಳಲ್ಲಿ ಈ ವ್ಯತ್ಯಾಸ ಕಡಿಮೆ ಇದೆ. ಕೆಲವು ರಾಜ್ಯಗಳಲ್ಲಿ ಹೆಚ್ಚು
- ಅರುಣಾಚಲ ಪ್ರದೇಶದಲ್ಲಿ ಶೇ 54ಕ್ಕಿಂತಲೂ ಹೆಚ್ಚು ಪುರುಷರಿಗೆ ಕುಡಿತದ ಅಭ್ಯಾಸವಿದೆ. ಇದು ಬೇರೆಲ್ಲಾ ರಾಜ್ಯಗಳಿಗಿಂತ ಹೆಚ್ಚು
- ಈಶಾನ್ಯ ಭಾರತದ ರಾಜ್ಯಗಳ ಪುರುಷರಲ್ಲಿ ಕುಡಿತದ ಪ್ರಮಾಣ ಹೆಚ್ಚು. ಕೆಲವು ರಾಜ್ಯಗಳ ಪುರುಷರಲ್ಲಿ ಕುಡಿತದ ಅಭ್ಯಾಸ ಇರುವವರ ಪ್ರಮಾಣ ಶೇ 40ಕ್ಕಿಂತಲೂ ಹೆಚ್ಚು
- ಪೂರ್ವ ಕರಾವಳಿಯ ರಾಜ್ಯಗಳಲ್ಲೂ ಕುಡಿತದ ಅಭ್ಯಾಸವಿರುವ ಪುರುಷರ ಪ್ರಮಾಣ ಹೆಚ್ಚು ಇದೆ. ಈ ರಾಜ್ಯಗಳಿಗೆ ಹೋಲಿಸಿದರೆ, ಪಶ್ಚಿಮ ಕರಾವಳಿಯ ರಾಜ್ಯಗಳಲ್ಲಿ ಕುಡಿತದ ಅಭ್ಯಾಸವಿರುವ ಪುರುಷರ ಪ್ರಮಾಣ ಕಡಿಮೆ

ಮಹಿಳೆಯರಲ್ಲಿ ಕುಡಿತದ ಪ್ರಮಾಣ (ಶೇಕಡವಾರು ಪ್ರಮಾಣದಲ್ಲಿ)

0.1-5% | 5.1-10% | 10.1% ಗಿಂತಲೂ ಹೆಚ್ಚು



ರಾಜ್ಯ	ನಗರ	ಗ್ರಾಮೀಣ	ಸರಾಸರಿ
ಹಿಮಾಚಲ ಪ್ರದೇಶ	0.3	0.7	0.6
ಅವಿಭಜಿತ ಜಮ್ಮು–ಕಾಶ್ಮೀರ	0.1	0.2	0.2
ಪಂಜಾಬ್	0.3	0.4	0.3
ಹರಿಯಾಣ	0.3	0.2	0.3
ದೆಹಲಿ	0.5	0.3	0.5
ರಾಜಸ್ಥಾನ	0.3	0.3	0.3
ಗುಜರಾತ್	0.3	0.8	0.6
ಮಹಾರಾಷ್ಟ್ರ	0.3	0.5	0.4
ಗೋವಾ	5.6	5.3	5.5
ಕರ್ನಾಟಕ	0.9	1	0.9
ಕೇರಳ	0.2	0.3	0.2
ತಮಿಳುನಾಡು	0.2	0.4	0.3
ಉತ್ತರಾಖಂಡ	0.3	0.4	0.3
ಉತ್ತರ ಪ್ರದೇಶ	0.3	0.3	0.3
ಪಶ್ಚಿಮ ಬಂಗಾಳ	0.8	1.3	1.1
ಮಧ್ಯಪ್ರದೇಶ	0.5	1.2	1
ತೆಲಂಗಾಣ	2.6	9	6.7
ಛತ್ತೀಸಗಢ	1.3	6.1	5
ಒಡಿಶಾ	1.4	4.9	4.3
ಆಂಧ್ರಪ್ರದೇಶ	0.3	0.6	0.5
ಬಿಹಾರ	0.5	0.4	0.4
ಜಾರ್ಖಂಡ್	2	7.4	6.1
ಸಿಕ್ಕಿಂ	12.7	18.4	16.2
ಅರುಣಾಚಲ ಪ್ರದೇಶ	14.9	25.9	24.2
ನಾಗಾಲ್ಯಾಂಡ್	1.5	0.7	0.9
ಮಣಿಪುರ	1	0.8	0.9
ಮಿಜೋರಾಂ	1	0.8	0.9
ತ್ರಿಪುರಾ	0.8	8.4	6.2
ಅಸ್ಸಾಂ	2.6	8.2	7.3
ಮೇಘಾಲಯ	1	1.6	1.5

- ದೇಶದ ಬಹುತೇಕ ರಾಜ್ಯಗಳಲ್ಲಿ ಕುಡಿತದ ಅಭ್ಯಾಸವಿರುವ ಮಹಿಳೆಯರ ಪ್ರಮಾಣ ಒಂದೇ ರೀತಿಯಲ್ಲಿದೆ. ಬಹುತೇಕ ರಾಜ್ಯಗಳಲ್ಲಿ ಕುಡಿತದ ಅಭ್ಯಾಸವಿರುವ ಮಹಿಳೆಯರ ಪ್ರಮಾಣ ಶೇ 1ಕ್ಕಿಂತಲೂ ಕಡಿಮೆ ಇದೆ
- ದೇಶದ ನಗರ ಪ್ರದೇಶಗಳಿಗೆ ಹೋಲಿಸಿದರೆ, ಗ್ರಾಮೀಣ ಪ್ರದೇಶದಲ್ಲಿ ಕುಡಿತದ ಅಭ್ಯಾಸವಿರುವ ಮಹಿಳೆಯರ ಪ್ರಮಾಣ ಹೆಚ್ಚು. ಕೆಲವು ರಾಜ್ಯಗಳಲ್ಲಿ ಈ ವ್ಯತ್ಯಾಸ ಕಡಿಮೆ ಇದೆ. ಕೆಲವು ರಾಜ್ಯಗಳಲ್ಲಿ ಹೆಚ್ಚು
- ಅರುಣಾಚಲ ಪ್ರದೇಶದಲ್ಲಿ ಕುಡಿತದ ಅಭ್ಯಾಸವಿರುವ ಮಹಿಳೆಯರ ಪ್ರಮಾಣ ಶೇ 24ಕ್ಕಿಂತಲೂ ಹೆಚ್ಚು. ಇದು ದೇಶದ ಬೇರೆಲ್ಲಾ ರಾಜ್ಯಗಳಿಗಿಂತ ಹೆಚ್ಚು
- ಕೇರಳದಲ್ಲಿ ಕುಡಿತದ ಅಭ್ಯಾಸವಿರುವ ಮಹಿಳೆಯರ ಪ್ರಮಾಣ ಶೇ 0.2ರಷ್ಟು ಮಾತ್ರ. ಇದು ದೇಶದ ಎಲ್ಲಾ ರಾಜ್ಯಗಳಿಗಿಂತ ಕಡಿಮೆ
- ಈಶಾನ್ಯ ಭಾರತ ಮತ್ತು ಪೂರ್ವ ಕರಾವಳಿಯ ರಾಜ್ಯಗಳಲ್ಲಿ ಕುಡಿತದ ಅಭ್ಯಾಸವಿರುವ ಮಹಿಳೆಯರ ಪ್ರಮಾಣ ಹೆಚ್ಚು. ಈ ರಾಜ್ಯಗಳಿಗೆ ಹೋಲಿಸಿದರೆ, ಪಶ್ಚಿಮ ಕರಾವಳಿಯ ರಾಜ್ಯಗಳಲ್ಲಿ ಕುಡಿತದ ಅಭ್ಯಾಸವಿರುವ ಮಹಿಳೆಯರ ಪ್ರಮಾಣ ಕಡಿಮೆ

ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5 ವರದಿ | ಪ್ರಜಾವಾಣಿ ಗ್ರಾಫಿಕ್ಸ್

ನಿಷೇಧವಿದ್ದರೂ ಮದ್ಯಪಾನ

ಗುಜರಾತ್, ಬಿಹಾರ, ಮಿಜೋರಾಂ ಮತ್ತು ನಾಗಾಲ್ಯಾಂಡ್‌ಗಳಲ್ಲಿ ಎಲ್ಲಾ ಸ್ವರೂಪದ ಮದ್ಯಪಾನ ನಿಷೇಧ ಜಾರಿಯಲ್ಲಿದೆ. ಆದರೆ ಈ ನಾಲ್ಕೂ ರಾಜ್ಯಗಳಲ್ಲಿ ನಿಷೇಧದ ನಡುವೆಯೂ ಕುಡಿತದ ಅಭ್ಯಾಸ ಇದೆ. ಈ ರಾಜ್ಯಗಳಲ್ಲಿ ನಿಷೇಧವಿದ್ದರೂ, ಮದ್ಯ ದೊರೆಯುತ್ತದೆ ಎಂಬುದನ್ನು ಈ ಸಮೀಕ್ಷೆಯ ವರದಿ ತೋರಿಸಿದೆ.

ಗುಜರಾತಿನ ಶೇ 5.8ರಷ್ಟು ಪುರುಷರು, ಶೇ 0.9ರಷ್ಟು ಮಹಿಳೆಯರು ಕುಡಿತದ ಅಭ್ಯಾಸ ಇರಿಸಿಕೊಂಡಿದ್ದಾರೆ. ಪಶ್ಚಿಮ ಮತ್ತು ವಾಯವ್ಯ ಭಾರತದ ರಾಜ್ಯಗಳಲ್ಲಿ ಕುಡಿತದ ಅಭ್ಯಾಸ ಇರಿಸಿಕೊಂಡಿರುವ ಮಹಿಳೆಯರ ಪ್ರಮಾಣ ಗುಜರಾತಿನಲ್ಲೇ ಹೆಚ್ಚು.

ಬಿಹಾರದ ಶೇ 15.5ರಷ್ಟು ಪುರುಷರು ಮತ್ತು ಶೇ 0.4ರಷ್ಟು ಮಹಿಳೆಯರು ಕುಡಿತದ ಅಭ್ಯಾಸವಿರಿಸಿಕೊಂಡಿದ್ದಾರೆ ಎಂದು ವರದಿಯಲ್ಲಿ ವಿವರಿಸಲಾಗಿದೆ. ನಿಷೇಧ ಜಾರಿಯಲ್ಲಿರುವ ನಾಗಾಲ್ಯಾಂಡ್ ಮತ್ತು ಮಿಜೋರಾಂಗಳಲ್ಲಿ ಕುಡಿತದ ಅಭ್ಯಾಸವಿರುವ ಪುರುಷರ ಪ್ರಮಾಣ ಶೇ 24ರಷ್ಟಿದೆ. ಎರಡೂ ರಾಜ್ಯಗಳ ಶೇ 0.9ರಷ್ಟು ಮಹಿಳೆಯರು ಕುಡಿತದ ಅಭ್ಯಾಸವಿರಿಸಿಕೊಂಡಿದ್ದಾರೆ.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 122

ಅಗ್ನಿಗಾಹುತಿಯಾದ ಸತೀದೇವಿ

ಪುತ್ರಿ ಸತಿಯೊಂದಿಗೆ ಅನ್ಯೋನ್ಯವಾಗಿ ಸುಖಸಂಸಾರ ಮಾಡುತ್ತಿದ್ದ ಅಳಿಯ ರುದ್ರನ ಮೇಲಿನ ದ್ವೇಷ ದಕ್ಷಬ್ರಹ್ಮನಿಗೆ ಹೋಗಲಿಲ್ಲ. ಅವನು ಶಿವನನ್ನು ನಿಷ್ಕಾರಣವಾಗಿ ನಿಂದಿಸುತ್ತಿದ್ದ. ತಿಳಿವಳಿಕೆಯಿಲ್ಲದೆ ಅಹಂಕಾರದಿಂದ ಮೆರೆಯುತ್ತಿದ್ದ. ರುದ್ರದೇವ ತನ್ನ ಮಾವನ ಅವಿವೇಕವನ್ನು ಬಹಳ ಕಾಲ ಸಹಿಸುತ್ತಾ ಬಂದ.

ಹೀಗಿರಲು ಒಂದು ದಿನ ದಕ್ಷಬ್ರಹ್ಮ ಯಾಗವೊಂದನ್ನು ಪ್ರಾರಂಭಿಸಿದ. ಆ ಯಾಗಕ್ಕೆ ನನಗೆ (ಬ್ರಹ್ಮ) ಮತ್ತು ವಿಷ್ಣು ಸೇರಿದಂತೆ ಎಲ್ಲಾ ದೇವತೆಗಳನ್ನೂ ಆಹ್ವಾನಿಸಿದ. ಆದರೆ ತನ್ನ ಅಳಿಯ ಹರನನ್ನೂ, ತನ್ನ ಪುತ್ರಿಯಾದ ಸತೀದೇವಿಯನ್ನೂ ಕರೆಯಲಿಲ್ಲ. ಸತಿ ತುಂಬಾ ನೊಂದುಕೊಂಡಳು. ಹೇಗಾದರೂ ತಂದೆಯ ಯಜ್ಞದಲ್ಲಿ ಪಾಲ್ಗೊಳ್ಳಬೇಕೆಂದು ಸತೀದೇವಿ ನಿರ್ಧರಿಸಿದಳು. ಇದಕ್ಕಾಗಿ ಪತಿಯಾದ ಶಿವನಿಂದ ಅಪ್ಪಣೆಯನ್ನು ಪಡೆದು ತನ್ನ ತಂದೆಯ ಮನೆಗೆ ಬಂದಳು. ಯಜ್ಞದಲ್ಲಿ ತನ್ನ ಪತಿಯಾದ ರುದ್ರನಿಗೆ ಹವಿರ್ಭಾಗ ಕೊಡದಿರುವುದನ್ನು ನೋಡಿ ಖಿನ್ನಳಾದಳು. ಇಂಥ ಸಂದರ್ಭದಲ್ಲಿ ದಕ್ಷ ತನ್ನ ಮಗಳೆಂಬುದನ್ನೂ ಲೆಕ್ಕಿಸದೆ, ಸತಿದೇವಿಯನ್ನು ಆದರಿಸಲಿಲ್ಲ. ಬದಲಿಗೆ ಮತ್ತಷ್ಟು ಅವಮಾನಮಾಡಿದ. ಇದರಿಂದ ಮತ್ತಷ್ಟು ನೊಂದ ಸತೀದೇವಿಯು ಅಲ್ಲಿ ಸೇರಿದ್ದ ರುದ್ರದ್ವೇಷಿಗಳನ್ನೆಲ್ಲಾ ನಿಂದಿಸಿ, ಆಕ್ರೋಶ ವ್ಯಕ್ತಪಡಿಸಿದಳು. ಯಜ್ಞಾಗ್ನಿಗೆ ಬಿದ್ದು ಶರೀರತ್ಯಾಗ ಮಾಡಿದಳು.

ಹೀಗೆ ಸತಿದೇವಿ ದೇಹತ್ಯಾಗ ಮಾಡಿದುದನ್ನು ಕೇಳಿ ದೇವದೇವನಾದ ಶಿವನಿಗೆ ಮಹಾಕ್ರೋಧವುಂಟಾಯಿತು. ಮಹತ್ತಾದ ತನ್ನ ಜಟೆಯನ್ನು ಭೂಮಿಗೆ ಅಪ್ಪಳಿಸಿ, ಅದರಿಂದ ವೀರಭದ್ರನನ್ನು ಸೃಜಿಸಿದ. ಸೇನಾ ಪರಿವಾರವನ್ನೂ ಸೃಷ್ಟಿಸಿದ. ಆಗ ವೀರಭದ್ರನು 'ನಾನು ಮಾಡಬೇಕಾದ ಕಾರ್ಯವೇನು? ನನಗೇನಪ್ಪಣೆ' ಎಂದು ಕೇಳಿದ. ದಕ್ಷಯಜ್ಞಕ್ಕೆ ಹೋಗಿ ಅಲ್ಲಿ ಸೇರಿರುವವರೆಲ್ಲರಿಗೂ ಅಪಮಾನ ಮಾಡಿ, ಯಜ್ಞನಾಶ ಮಾಡು – ಎಂದು ಅಪ್ಪಣೆ ಮಾಡಿದ. ಶಿವನ ಆಜ್ಞೆಯಂತೆ ಮಹಾಬಲಶಾಲಿಯಾದ ವೀರಭದ್ರ ತನ್ನ ಸೈನ್ಯದೊಂದಿಗೆ ದಕ್ಷನ ಯಜ್ಞಶಾಲೆಗೆ ಹೋದ.

ಅಲ್ಲಿ ವೀರಭದ್ರನ ಆಜ್ಞೆಯಂತೆ ಶಿವಸೇನೆಯು ಯಜ್ಞಕಾರ್ಯವನ್ನು ಧ್ವಂಸಗೊಳಿಸಿತು. ವೀರಭದ್ರ ಅಲ್ಲಿ ಸೇರಿರುವವರೆಲ್ಲರನ್ನೂ ಒಬ್ಬರನ್ನೂ ಬಿಡದೆ ಉಗ್ರವಾಗಿ ಶಿಕ್ಷಿಸಿದ. ದಕ್ಷಬ್ರಹ್ಮನ ಶಿರಸ್ಸನ್ನು ಕತ್ತರಿಸಿದ್ದಲ್ಲದೆ, ಅದನ್ನು ಯಾಗಾಗ್ನಿ ಕುಂಡಕ್ಕೆ ಹಾಕಿ ಹೋಮಮಾಡಿದ. ಹೀಗೆ ವೀರಭದ್ರ ಯಜ್ಞಧ್ವಂಸ ಮಾಡಿದ ಬಳಿಕ ಶಿವನ ಬಳಿ ಹೋಗಿ, ನಮಸ್ಕರಿಸಿ ನಿಂತ.

'ಎಲೈ ನಾರದಮುನಿ! ಹೀಗೆ ವಿಷ್ಣುವೇ ಮೊದಲಾದ ದೇವತೆಗಳು ನೋಡುತ್ತಿದ್ದಂತೆಯೇ ಅವರನ್ನು ತಿರಸ್ಕರಿಸಿ ವೀರಭದ್ರ ಮತ್ತವನ ಶಿವಗಣಗಳು ದಕ್ಷನ ಯಜ್ಞವನ್ನು ಧ್ವಂಸಮಾಡಿದರು. ಜಗತ್ಪ್ರಭುವಾದ ರುದ್ರನು ಕೋಪಗೊಂಡರೆ ಎಂದಿಗೂ ಸುಖವಾಗುವುದಿಲ್ಲ' ಎಂದ ಬ್ರಹ್ಮ.

ಘಟನೆ ನಂತರ ದೇವತೆಗಳೆಲ್ಲ ರುದ್ರನನ್ನು ಸ್ತುತಿಸಿದಾಗ, ದೀನವತ್ಸಲನಾದ ಶಿವನು ಪ್ರಸನ್ನನಾದ. ಅವರೆಲ್ಲರ ವಿಜ್ಞಾಪನೆ ಸಫಲವಾಗುವಂತೆ ಮಾಡಿದ. ಲೀಲಾಮಯನೂ ಮಹಾತ್ಮನೂ ಆದಂಥ ಶಂಕರನು ಮೊದಲಿನಂತೆಯೇ ದೇವತೆಗಳಲ್ಲಿ ಕೃಪೆಯನ್ನು ತೋರಿಸಿದ. ಕೃಪಾಮಯನಾದ ಶಂಕರನು ದಕ್ಷಬ್ರಹ್ಮನನ್ನು ಬದುಕಿಸಿದ. ಮತ್ತೆ ದಕ್ಷ ತನ್ನ ಯಜ್ಞವನ್ನು ಯಶಸ್ವಿಯಾಗಿ ಮಾಡುವಂತೆ ಕರುಣೆ ತೋರಿದ. ವಿಶ್ವದೇವತೆಗಳೆಲ್ಲಾ ಆ ಯಜ್ಞದಲ್ಲಿ ಶಿವನನ್ನು ಶುದ್ಧಾಂತಃಕರಣದಿಂದ ವಿಶೇಷವಾಗಿ ಪೂಜಿಸಿ, ಪುನೀತರಾದರು.

ಯಜ್ಞಾಗ್ನಿಯಲ್ಲಿ ಬಿದ್ದು ದಹಿಸುತ್ತಿದ್ದ ಸತೀದೇಹದಿಂದ ಹೊರಹೊರಟ ಅಗ್ನಿಜ್ವಾಲೆಯು ಅಲ್ಲಿನ ಒಂದು ಪರ್ವತದ ಮೇಲೆ ಬಿದ್ದಿತು. ಸಮಸ್ತ ಲೋಕಕ್ಕೂ ಸುಖವನ್ನುಂಟುಮಾಡುವ ಆ ಜ್ವಾಲೆಯನ್ನು ದೇವತೆಗಳು ಭಕ್ತಿಯಿಂದ ಪೂಜಿಸಿದರು. ಆ ಜ್ವಾಲೆಯು ಜ್ವಾಲಾಮುಖಿಯೆಂದು ಪ್ರಸಿದ್ಧಳಾದ ಪರಮೇಶ್ವರಿಯಾದಳು. ಆ ದೇವಿಯು ಸಕಲ ಇಷ್ಟಾರ್ಥಗಳನ್ನು ಕೊಡುವವಳಲ್ಲದೆ, ಕೇವಲ ದರ್ಶನ ಮಾತ್ರದಿಂದಲೇ ಸಕಲ ಪಾಪವನ್ನು ನಾಶಮಾಡುವಳೂ ಆಗಿರುವಳು. ಈಗಲೂ ಜನರು ಆ ಜ್ವಾಲಾಮುಖಿದೇವಿಯನ್ನು ಸಕಲೇಷ್ಟಸಿದ್ಧಿಗಾಗಿ ಪೂಜಿಸಿ, ಉತ್ಸವಗಳನ್ನಾಚರಿಸುವರು.

ಮುಂದೆ ಸತೀದೇವಿಯು ಹಿಮವಂತನ ಪುತ್ರಿಯಾಗಿ ಜನಿಸಿದಳು. ಆಗ ಪರ್ವತಪುತ್ರಿಗೆ 'ಪಾರ್ವತೀ' ಎಂದು ಹೆಸರಾಯಿತು. ಪಾರ್ವತಿ ಕಠಿಣವಾದ ತಪಸ್ಸನ್ನಾಚರಿಸಿ ಪರಮೇಶ್ವರನನ್ನೆ ಪುನಃ ಪತಿಯಾಗಿ ಪಡೆದಳು ಎಂದು ಬ್ರಹ್ಮ ನಾರದನಿಗೆ ಹೇಳುವಲ್ಲಿಗೆ ಸತೀಖಂಡದ ಒಂದನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಾಜಸ್ಥಾನದ ಉದಯಪುರದಲ್ಲಿ ನಡೆದ ಕಾಂಗ್ರೆಸ್‌ನ ಮೂರು ದಿನಗಳ 'ಚಿಂತನ ಶಿಬಿರ'ದ್ದು ಎನ್ನಲಾದ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಚಿಂತನ ಶಿಬಿರದಲ್ಲಿ ಪಾಕಿಸ್ತಾನದ ಧ್ವಜದ ಬಣ್ಣಗಳನ್ನು ಕಾಂಗ್ರೆಸ್ ಬಳಸಿದೆ ಎಂದು ಆರೋಪಿಸಲಾಗಿದೆ. ಚಾವಣಿ ಅಲಂಕಾರಕ್ಕೆ ಬಳಸಿರುವ ಬಟ್ಟೆಯು ಹಸಿರು ಮತ್ತು ಬಿಳಿ ಬಣ್ಣದ್ದಾಗಿದೆ. ಆದರೆ ನೆಲಕ್ಕೆ ಕೇಸರಿ ಬಣ್ಣದ ನೆಲಹಾಸನ್ನು ಬಳಸಲಾಗಿದೆ ಎಂದು ಚಿತ್ರದ ಜೊತೆ ವಿವರಿಸಲಾಗಿದೆ.

ಚಿತ್ರದ ಜೊತೆ ನೀಡಲಾಗಿರುವ ಮಾಹಿತಿ ಸುಳ್ಳು ಎಂದು 'ದಿ ಕ್ವಿಂಟ್' ವರದಿ ಮಾಡಿದೆ. ಕಾಂಗ್ರೆಸ್‌ನ ಹಲವು ನಾಯಕರ ಟ್ವಿಟರ್ ಖಾತೆಗಳಲ್ಲಿ ಮತ್ತು ಪಕ್ಷದ ಅಧಿಕೃತ ಟ್ವಿಟರ್ ಖಾತೆಯಲ್ಲಿ ಕಾರ್ಯಕ್ರಮದ ಚಿತ್ರಗಳನ್ನು ಪೋಸ್ಟ್ ಮಾಡಲಾಗಿದೆ. ಚಾವಣಿಗೆ ಕೇಸರಿ, ಬಿಳಿ, ಹಸಿರು ಬಣ್ಣದ ಬಟ್ಟೆಗಳನ್ನು ಬಳಸಲಾಗಿದೆ. ಪಕ್ಷದ ಯೂಟ್ಯೂಬ್ ಚಾನಲ್ ಕೂಡಾ ಕಾರ್ಯಕ್ರಮದ ಹಲವು ವಿಡಿಯೊಗಳನ್ನು ಪ್ರದರ್ಶಿಸಿದೆ. ಕಾರ್ಯಕ್ರಮದಲ್ಲಿ ತ್ರಿವರ್ಣ ಧ್ವಜದ ಬಣ್ಣವನ್ನು ಚಾವಣಿಗೆ ಬಳಸಿರುವುದು ಸ್ಪಷ್ಟವಾಗಿ ಕಾಣುತ್ತದೆ ಎಂದು ದಿ ಕ್ವಿಂಟ್ ವರದಿಯಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 17, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣ ಪ್ರತಿಪದ್ ಗಂ. 06-26, ದ್ವಿತೀಯ ಗಂ. 27-01 ನಕ್ಷತ್ರ: ಅನುರಾಧ ಗಂ. 10-46 ಯೋಗ: ಶಿವ ಗಂ. 22-37, ಕರಣ: ಕೌಲವ ಗಂ. 06-23, ವೃಷಭ ಮಾಸದ 02 ನೇ ದಿನ.
ರಾಹುಕಾಲ : ಮಧ್ಯಾಹ್ನ 03:00 – 04:30 **ಸೂರ್ಯೋದಯ :** 06-08
ಸೂರ್ಯಾಸ್ತ : 06-46 **ಮುಸ್ಲಿಂ ದಿನಾಂಕ :** 15 ಶವ್ವಾಲ್
ದಿನ ವಿಶೇಷ : ಶೃಂಗೇರಿ ಶಾರದಾಪರಮೇಶ್ವರಿಗೆ ಮಹಾಭಿಷೇಕ.
ಅದೃಷ್ಟ ಸಂಖ್ಯೆ : 4, 9

ಮೇಷ: ಮೇಲಧಿಕಾರಿಗಳು ನಿಮ್ಮ ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯನಿರ್ವಹಿಸಲು ಅಶಕ್ತರಾಗುವ ಸಂಭವ. ಬಹುಮುಖ ಖರ್ಚು-ವೆಚ್ಚಗಳನ್ನು ನಿರ್ವಹಿಸುವಲ್ಲಿ ಯಶಸ್ವಿಯಾಗುವಿರಿ. ಭೂ ವ್ಯವಹಾರಗಳಿಂದ ಹೆಚ್ಚಿನ ಲಾಭ.

ವೃಷಭ: ಅವಿವಾಹಿತರಿಗೆ ಕಂಕಣಬಲ ಕೂಡಿ ಬರಲಿದೆ. ನಿರುದ್ಯೋಗಿಗಳಿಗೆ ಶೀಘ್ರದಲ್ಲಿ ಉದ್ಯೋಗಾವಕಾಶಗಳು ದೊರೆಯುವುದು. ಉದ್ಯೋಗ ನಿಮಿತ್ತ ವಿದೇಶ ಪ್ರಯಾಣದ ಸಾಧ್ಯತೆ. ವಾಸಸ್ಥಾನ ಬದಲಾಗುವ ಸಂಭವ.

ಮಿಥುನ: ಇಂದಿನ ಕಾರ್ಯವೈಖರಿಯನ್ನು ಸ್ವಲ್ಪ ಬದಲಿಸಿ ಹೊಸ ಕೆಲಸ ಮಾಡಿದರೆ ಜಯ ಕಾಣುವಿರಿ. ಕಠಿಣ ಶ್ರಮದ ಫಲವಾಗಿ ಬಯಸಿದ ಸಂತೋಷದ ಜೊತೆಗೆ ಹೊಸ ಅನುಭವದ ಲಾಭವು ಈ ದಿನ ನಿಮ್ಮದಾಗಲಿದೆ.

ಕರ್ಕಾಟಕ: ಪಿತೃ ವರ್ಗದವರ ಸಹಾಯ ಹಸ್ತ ಸಿಗುವುದು. ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳು ದೂರಾಗುವವು. ಸರ್ಕಾರದಿಂದ ನಿವೇಶನ ಮಂಜೂರು ಮಾಡಿಸಿಕೊಳ್ಳಲು ಹಣ ಖರ್ಚು ಮಾಡಿದ್ದಲ್ಲಿ ಸಾಧ್ಯವಾಗುತ್ತದೆ.

ಸಿಂಹ: ಬದುಕಿನ ಬಗ್ಗೆ ಸಂಗಾತಿ ಹೇಳಿದ ಮುಂದಾಲೋಚನೆಯ ವಿಚಾರಗಳಿಗೆ ಮನ್ನಣೆ ನೀಡುವುದು ಉತ್ತಮ. ಜಮೀನು ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಾಗಲಿದೆ. ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನುಕೂಲ.

ಕನ್ಯಾ: ಗೃಹಕೃತ್ಯದ ಪೂರ್ಣ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕ ವೃತ್ತಿ ಕೈಗೊಳ್ಳುವ ಬಗ್ಗೆ ಹೆಚ್ಚಿನ ಗಮನವಿರಲಿ. ದಿನಾಂತ್ಯದಲ್ಲಿ ಅಧಿಕ ದೇಹಾಯಾಸ.

ತುಲಾ: ನಿಮ್ಮ ಕರ್ಮನಿಷ್ಠೆ ಮತ್ತು ಪ್ರಾಮಾಣಿಕತೆಗೆ ತಕ್ಕ ಫಲವನ್ನು ಪಡೆಯುತ್ತೀರಿ. ಸರಳ ವ್ಯಕ್ತಿತ್ವ, ಸ್ವಭಾವದಿಂದ ಹೆಚ್ಚಿನ ಮೆಚ್ಚುಗೆ ಗಳಿಸುವಿರಿ. ವರ್ಗಾವಣೆಯಿಂದ ಸಂಸಾರದಿಂದ ದೂರ ವಾಸಿಸುವ ಸಂದರ್ಭ ಬರಲಿದೆ.

ವೃಶ್ಚಿಕ: ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವುದು ಸರಿಯಾದ ಮಾರ್ಗ. ಗುತ್ತಿಗೆದಾರರ ಹತ್ತಿರ ಗೃಹ ನಿರ್ಮಾಣದ ವಿಚಾರದಲ್ಲಿ ಪುನಃ ಪುನಃ ಪಾಠ ಕಲಿಯುವಂತಾಗಲಿದೆ.

ಧನು: ಸಹೋದರಿಯರಲ್ಲಿ ಸ್ವ-ಪ್ರಯತ್ನದಿಂದ ಸಂಬಂಧ ಉತ್ತಮ ಪಡಿಸಿಕೊಳ್ಳಿ. ಮಹಿಳೆಯರಿಗೆ ಆದರ ಮನ್ನಣೆ ಹೆಚ್ಚಲಿದ್ದು ರಾಜಕೀಯವಾಗಿ ಲಾಭ ಪಡೆದುಕೊಳ್ಳುವಿರಿ.

ಮಕರ: ನಿಮ್ಮ ನಡವಳಿಕೆ ಅಥವಾ ಮಾತಿನಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ. ಮಂಜುನಾಥನ ಸೇವೆಯನ್ನು ಮಾಡುವುದರಿಂದ ಕೋರ್ಟು–ವ್ಯವಹಾರಗಳಲ್ಲಿ ಜಯ ಸಿಗಲಿದೆ.

ಕುಂಭ: ಬಿಡುವಿಲ್ಲದ ಕೆಲಸದಿಂದ ಬಳಲಿದ ನಿಮಗೆ ವಿಶ್ರಾಂತಿಗೆ ಸೂಕ್ತ ಸಮಯ ಸಿಗುವುದು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಗುವುದು. ಷೇರು ಪೇಟೆಯಿಂದ ಲಾಭ. ಈ ದಿನ ನಿಮಗೆ ಹೆಚ್ಚಿನ ನಿರಾಶೆಯನ್ನು ತರದು.

ಮೀನ: ಗೃಹಕೃತ್ಯಗಳಿಗಾಗಿ ಮಾಡಿದ ಸಾಲಬಾಧೆ ಸ್ವಲ್ಪ ಮಟ್ಟಿಗೆ ತೀರಲಿದೆ. ಹೆಚ್ಚಿನ ಬುದ್ಧಿಶಕ್ತಿಯ ಬಲದಿಂದ ವಿವಿಧ ಕಾರ್ಯಗಳು ಫಲಿತಗೊಂಡು, ಅನಿರೀಕ್ಷಿತವೆಂಬಂತೆಯೇ ಉತ್ತಮ ಅಭಿವೃದ್ಧಿಯನ್ನು ಅನುಭವಿಸುವ ಯೋಗ.

ಬೆರಗಿನ ಬೆಳಕು

ಗುರುರಾಜ ಕರಜಗಿ

ವೈವಿಧ್ಯತೆಯ ಲಾಭ

ವೈವಿಧ್ಯವೊಂದು ಕೃಪೆ ನಮಗಿರುವ ಕಷ್ಟದಲಿ |
ಆವರಿಸದಳಲ್ ಎಲ್ಲರನುಮೊಂದೆ ಸಮಯ ||
ನೋವಿಲ್ಲದರು ನೊಂದವರನು ಸಂತಯಿಸುತಿರೆ |
ಜೀವನವು ಕಡಿದಹುದೆ? – ಮಂಕುತಿಮ್ಮ
|| 629 ||

ಪದ-ಅರ್ಥ: ವೈವಿಧ್ಯವೊಂದು = ವೈವಿಧ್ಯವು + ಒಂದು, ಆವರಿಸದಳಲ್ = ಆವರಿಸದು + ಅಳಲ್ (ದುಃಖ, ಅಳು), ಎಲ್ಲರನುಮೊಂದೆ = ಎಲ್ಲರನುಮ್ (ಎಲ್ಲರನ್ನೂ) + ಒಂದೆ, ಸಂತಯಿಸುತಿರೆ = ಸಂತಯಿಸುತ + ಇರೆ, ಕಡಿದಹುದೆ = ಕಡಿದು (ಕಷ್ಟವಾದದ್ದು) + ಅಹುದೆ.

ವಾಚ್ಯಾರ್ಥ: ನಮಗೆ ಈಗ ಇರುವ ಕಷ್ಟಗಳಲ್ಲಿ ಕೃಪೆ ಎಂದರೆ ವೈವಿಧ್ಯತೆ. ಅದರಿಂದಾಗಿ ಕಷ್ಟಗಳು, ನೋವುಗಳು ಒಂದೇ ಬಾರಿ ಎಲ್ಲರನ್ನೂ ಆವರಿಸಿಕೊಳ್ಳುವುದಿಲ್ಲ. ಆಗ ನೋವಿಲ್ಲದವರು, ನೊಂದವರನ್ನು ಸಮಾಧಾನಪಡಿಸುತ್ತಿದ್ದರೆ ಬದುಕು ಕಷ್ಟವಾದೀತೇ?

ವಿವರಣೆ: ಪ್ರಕೃತಿಯ ವಿಶಿಷ್ಟತೆ ಅದರ ವೈವಿಧ್ಯತೆ. ಅದು ಯಾರನ್ನಾದರೂ ಬೆರಗುಗೊಳಿಸುತ್ತದೆ. ಒಂದು ಮರ ಮತ್ತೊಂದರಂತಿಲ್ಲ. ಒಂದೇ ನೆಲದಲ್ಲಿ, ಪಕ್ಕಪಕ್ಕದಲ್ಲಿ ಹುಟ್ಟಿ ಬೆಳೆದ ಗಿಡಗಳ ಹಣ್ಣಿನ ರುಚಿ ಬೇರೆ. ಮಲ್ಲಿಗೆ ಹೂವು ಎಂದು ಹೇಳಿಬಿಟ್ಟರೂ ಮಂಗಳೂರಿನ ಮಲ್ಲಿಗೆಯ, ಮೈಸೂರು ಮಲ್ಲಿಗೆಯ, ಮದ್ರಾಸ ಮಲ್ಲಿಗೆಯ ಗಾತ್ರ, ರೂಪ, ಪರಿಮಳ ಬೇರೆ ಬೇರೆಯೇ. ತಾವು ಕಂಡಿದ್ದೀರಿ, ಅದೆಷ್ಟು ಬಗೆಯ ಮಾವಿನ ಹಣ್ಣುಗಳು!

ಇದು ಸಸ್ಯಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ನಮ್ಮ ಜೀವರಾಶಿ ಅನನ್ಯವಾದದ್ದು ಮತ್ತು ವೈವಿಧ್ಯಪೂರ್ಣವಾದದ್ದು. ಕನಕದಾಸರೇ ಹಾಡಿದರು.

'ಏಸು ಕಾಯಂಗಳ ಕಳೆದು ಎಂಭತ್ನಾಲ್ಕು ಲಕ್ಷ ಜೀವರಾಶಿಯನ್ನು
ದಾಟಿ ಬಂದ ಈ ಶರೀರ |
ತಾನಲ್ಲ, ತನದಲ್ಲ, ಆಸೆ ತರವಲ್ಲ, ಮುಂದೆ ಬಾಹೋದಲ್ಲ ......'

ಅಂದರೆ ಎಂಭತ್ನಾಲ್ಕು ಲಕ್ಷ ಜೀವರಾಶಿಗಳನ್ನು ದಾಟಿದ ಮೇಲೆ ಬಂದದ್ದು ಮನುಷ್ಯ ಶರೀರ. ಅದರಲ್ಲೂ ಎಷ್ಟು ಭಿನ್ನತೆ! ಪರಿಸರದಿಂದ, ವಂಶವಾಹಿನಿಯಿಂದಾಗಿ, ಪರಿಸ್ಥಿತಿಯಿಂದಾಗಿ ಅವುಗಳ ಚಿಂತನಾ ಕ್ರಮದಲ್ಲಿ, ಜೀವನಕ್ರಮದಲ್ಲಿ ತುಂಬ ವ್ಯತ್ಯಾಸವಿದೆ. ಕಗ್ಗ ಹೇಳುತ್ತದೆ, ಹೀಗಿರುವುದು ಭಗವಂತನ ಕೃಪೆ. ಯಾಕೆಂದರೆ ಯಾವುದಾದರೂ ಕಷ್ಟ ಬಂದರೆ ಅದು ಎಲ್ಲರನ್ನೂ ಏಕರೂಪವಾಗಿ ತಟ್ಟುವುದಿಲ್ಲ. ತಟ್ಟಿದರೂ ಅದರ ತೀಕ್ಷ್ಣತೆ ಒಂದೇ ರೀತಿ ಇರಲಾರದು. ರಷ್ಯಾ-ಉಕ್ರೇನ್‌ಗಳ ನಡುವಿನ ಕದನ ಎರಡೂ ದೇಶದ ಜನರನ್ನು ಹೈರಾಣ ಮಾಡಿದೆ. ಅವರು ತುಂಬ ನೊಂದಿದ್ದಾರೆ. ಈಗ ಪ್ರಪಂಚದ ಉಳಿದ ಭಾಗದ ಜನ, ಈ ತರಹದ ನೋವನ್ನು ಪಡದವರು, ಅವರಿಗೆ ಸಾಂತ್ವನ, ಸಹಾಯ ಮಾಡಬಹುದಲ್ಲ? ಮಾಡುತ್ತಿದ್ದಾರೆ. ಮನೆಯ ಯಜಮಾನನ ಮಗ ರಾಕ್ಷಸನಿಗೆ ಬಲಿಯಾಗುತ್ತಾನೆ ಎಂದು ತಿಳಿದಾಗ ಅಜೇಯನಾದ ಪುತ್ರ ಭೀಮನನ್ನು ಅವನ ಬದಲು ಕುಂತಿ ಕಳುಹಿಸಿದ್ದು ಈ ತರದ ಸಹಕಾರ, ಪಾರಿವಾಳದ ಪ್ರಾಣವನ್ನು ಉಳಿಸಲು ತನ್ನ ಶರೀರದ ಮಾಂಸವನ್ನೇ ಕತ್ತರಿಸಿ ನೀಡಿದ ಶಿಬಿ ಚಕ್ರವರ್ತಿ, ನರಕದಲ್ಲಿರುವವರ ಸಂತೋಷಕ್ಕಾಗಿ ಸ್ವರ್ಗವನ್ನು ನಿರಾಕರಿಸಿದ ಧರ್ಮರಾಜ, ಇವೆಲ್ಲ ನೊಂದವರನ್ನು ಸಂತೈಸಿದ ಉದಾಹರಣೆಗಳು.

ಕಗ್ಗದ ಆಶಯವೇ ಇದು. ಜಗತ್ತಿನಲ್ಲಿ ಕಷ್ಟ ಇದೆ. ಆದರೆ ಎಲ್ಲರಿಗೂ, ಏಕಪ್ರಕಾರದ ಕಷ್ಟಗಳು ಬರದಿದ್ದದ್ದು ವೈವಿಧ್ಯತೆಯ ಕಾರಣದಿಂದ. ಅದೇ ನಮಗಿರುವ ಕೃಪೆ. ನೊಂದವರನ್ನು ಉಳಿದವರು ಸಂತೈಸುತ್ತಿದ್ದರೆ, ಸಹಾಯ ಮಾಡುತ್ತಿದ್ದರೆ ಜೀವನ ಕಷ್ಟವಾಗಲಾರದು.

ಪದಬಂಧ 4960

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸದನದಲ್ಲಿ ಒದಗಿದ ಹಣದ ನೆರವು (5)
3.ಕರದಲ್ಲಿ ಕಾಸಿದ್ರೆ ಶಿವನ ನೆಲೆ ಕಂಡೀತು! (3)
5.ಯಾವುದೇ ತಪ್ಪು ಮಾಡದವನು (5)
7.ಲಿಂಗ ವಚನ ವಿಭಕ್ತಿಗಳಿಗೆ ರೂಪಭೇದ ಹೊಂದದ ಶಬ್ದ (3)
8.ನವ ಬಾಳಿದು (5)
10.ಅಳುತ್ತಿದ್ದಾಗ ಹಿಚುಕಿರುವ ಬೆಂದಕ್ಕಿ ಕಾಳು (3)
11.ಈತ ಅರಣ್ಯ ರಕ್ಷಕ (5)
14.ಮುಚ್ಚಿಡಬೇಕಾದ ಗೌಪ್ಯ (3)
15.ಯುದ್ಧದ ಕೇಸರಿಯಿದು (5)

ಮೇಲಿಂದ ಕೆಳಕ್ಕೆ
1.ಅಧಮನ ರಕ್ತ ನಾಳ! (3)
2.ಸರಸದ ಮಾತುಕತೆ (3)
4.ಸರಸಮಯವಾಗಿರುವ ವೇಳೆ! (3)
6.ಅಸುರ ಇಲ್ಲಿ ಬಂದಿದ್ದಾನಲ್ಲಾ! (3)
7.ಅಶಕ್ತನ ಹತ್ತಿರವಿರುವ ಆಹಾರ ಕಾಣುತ್ತಿದೆಯೇ? (3)
8.ನಾಭಿ ಇಲ್ಲಿ ಕಾಣುತ್ತಿದೆ (3)
9.ವನದಲ್ಲಿ ಕಾಣಿಸಿದ ಅಭಿವೃದ್ಧಿ (3)
10.ಅಬ್ಬಾ! ಬರ ಬಂದರೂ ಇಷ್ಟು ಆರ್ಭಟವೇ? (3)
12.ಮರದ ಹತ್ತಿರ ಹಳ್ಳಿಗನಿದ್ದಾನೆ (3)
13.ಚಿಲಕಕ್ಕಾಗಿ ನಡೆಯಿತೇ ಈ ಜಗಳ! (3)



4959ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಜಲತರಂಗ 4.ಕಪೋಲ
5.ವಿನಯ 9.ಕನ್ನ
10.ಗುಲಾಬಿ 11.ಡಿಕಿಂ
12.ಕೆರೆತ 15.ಕುಟೀರ
16.ಪಕ್ಷಿಸಂಕುಲ

ಮೇಲಿಂದ ಕೆಳಕ್ಕೆ:
1.ಅಂತರ 2.ಜಲ
3.ಗವಿ 4.ಕರ್ಣಾಕರ್ಣಿಕೆ
6.ಯಮಕಿಂಕರ 7.ಹಗುರ
8.ಬಿಂಬಿಸು 13.ತಪ
14.ಪ್ರಸಂಗ 15.ಕುಲ

ಸುಡೊಕು 5346

6						7		8
				7	1		4	
1		7		4				6
		1				9		7
			3	9	7			4
7		9				8		
5				6		4		
4					3		2	1
	6	2		8	4			5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5345 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,782
ಇಂದಿನ ಅಂತ್ಯ	15,842
▲	60
ದಿನದ ಕನಿಷ್ಠ	15,977

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕೆ.ಜಿ)	₹210-471
ದ್ವಿತಳಿ (ಕೆ.ಜಿ)	₹231-675

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1580 (1580)
ಸೂರ್ಯಕಾಂತಿ (ರಿಫೈನ್ಡ್)	₹1890 (1890)
ಪಾಮೊಲಿನ್	₹1570 (1570)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1100-1300
ಮಧ್ಯಮ	₹600-800
ಸಣ್ಣ	₹300-600

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹18000-25000
2ನೇ ದರ್ಜೆ	₹10000-15000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹167.50
ಆರ್‌ಎಸ್‌ಎಸ್-5	₹161.50
ಗುಡ್ ಲಾಟ್	₹157

(ಪ್ರತಿ ಕೆ.ಜಿಗೆ)

ಎಸ್‌ಬಿಐ ಅರ್ಥಶಾಸ್ತ್ರಜ್ಞರ ಅಂದಾಜು

ರೆಪೊ ದರ ಶೇ 0.75ರಷ್ಟು ಏರಿಕೆ

ಮುಂಬೈ (ಪಿಟಿಐ): ಹಣದುಬ್ಬರ ಪ್ರಮಾಣದಲ್ಲಿನ ಏರಿಕೆಗೆ ರಷ್ಯಾ–ಉಕ್ರೇನ್ ಯುದ್ಧ ದೊಡ್ಡ ಪಾತ್ರ ವಹಿಸಿದೆ ಎಂದು ಎಸ್‌ಬಿಐ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಅಲ್ಲದೆ, ಹಣದುಬ್ಬರವು ಜಾಸ್ತಿ ಆಗಿರುವ ಕಾರಣದಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಜೂನ್ ಮತ್ತು ಆಗಸ್ಟ್‌ನಲ್ಲಿ ರೆಪೊ ದರವನ್ನು ಒಟ್ಟು ಶೇಕಡ 0.75ರಷ್ಟು ಜಾಸ್ತಿ ಮಾಡುವ ಸಾಧ್ಯತೆ ಹೆಚ್ಚಿದೆ ಎಂದು ಅವರು ಅಂದಾಜಿಸಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧದಿಂದಾಗಿ ಹಣದುಬ್ಬರದ ಮೇಲೆ ಆಗಿರುವ ಪರಿಣಾಮ ಏನು ಎಂಬುದನ್ನು ಎಸ್‌ಬಿಐ ಅರ್ಥಶಾಸ್ತ್ರಜ್ಞರು ಪರಿಶೀಲಿಸಿದ್ದಾರೆ. ಆಹಾರ, ಪಾನೀಯ, ಇಂಧನ, ಸಾರಿಗೆ ವಲಯಗಳಲ್ಲಿನ ಬೆಲೆ ಹೆಚ್ಚಳಕ್ಕೆ ಯುದ್ಧವು ಶೇ 52ರಷ್ಟು ಕೊಡುಗೆ ನೀಡಿದೆ ಎಂದಿದ್ದಾರೆ.

ಹಣದುಬ್ಬರ ಪ್ರಮಾಣವು ಸದ್ಯಕ್ಕೆ ಕಡಿಮೆ ಆಗುವ ಸಾಧ್ಯತೆ ಇಲ್ಲ. ಬೆಲೆ ಹೆಚ್ಚಳದ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳು ಹಾಗೂ ನಗರ ಪ್ರದೇಶಗಳ ನಡುವೆ ವ್ಯತ್ಯಾಸ ಕಂಡುಬಂದಿದೆ. ಆಹಾರ ವಸ್ತುಗಳ ಬೆಲೆ ಏರಿಕೆಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಹಣದುಬ್ಬರ ಕಂಡುಬಂದಿದೆ. ಇಂಧನ ಬೆಲೆ ಹೆಚ್ಚಳದ ದುಷ್ಪರಿಣಾಮವು ನಗರ ಪ್ರದೇಶಗಳಲ್ಲಿ ಜಾಸ್ತಿ ಇದೆ ಎಂದು ಅವರು ಹೇಳಿದ್ದಾರೆ.

ಆರ್‌ಬಿಐ ರೆಪೊ ದರವನ್ನು ಈ ತಿಂಗಳ ಆರಂಭದಲ್ಲಿ ಶೇ 0.40ರಷ್ಟು ಜಾಸ್ತಿ ಮಾಡಿದೆ. ಆಗಸ್ಟ್ ವೇಳೆಗೆ ರೆಪೊ ದರ ಶೇ 0.75ರಷ್ಟು ಜಾಸ್ತಿ ಮಾಡಿದರೆ ಬ್ಯಾಂಕ್ ಸಾಲಗಳ ಬಡ್ಡಿ ದರ ಜಾಸ್ತಿಯಾಗಿ 'ಇಎಂಐ' ಮೊತ್ತ ಮತ್ತೆ ಏರಿಕೆ ಆಗುವ ಸಾಧ್ಯತೆ ಇದೆ.

ಬಡ್ಡಿ ದರ ಹೆಚ್ಚಳ

ನವದೆಹಲಿ (ಪಿಟಿಐ): ಎಸ್‌ಬಿಐ ತನ್ನ ಎಂಸಿಎಲ್‌ಆರ್ ಆಧಾರಿತ ಸಾಲದ ಮೇಲಿನ ಬಡ್ಡಿ ದರವನ್ನು ಶೇ 0.1ರಷ್ಟು ಜಾಸ್ತಿ ಮಾಡಿದೆ. ಇದು ಮೇ 15ರಿಂದ ಜಾರಿಗೆ ಬಂದಿದೆ. ಇದರ ಪರಿಣಾಮವಾಗಿ ಎಂಸಿಎಲ್‌ಆರ್ ಆಧಾರದಲ್ಲಿ ಸಾಲಗಳ ಮರುಪಾವತಿ ಕಂತಿನಲ್ಲಿ ತುಸು ಏರಿಕೆ ಆಗಲಿದೆ.

ಎಸ್‌ಬಿಐ ಸಾಲದ ಬಡ್ಡಿ ದರವನ್ನು ಹೆಚ್ಚಿಸುತ್ತಿರುವುದು ಒಂದು ತಿಂಗಳಲ್ಲಿ ಇದು ಎರಡನೆಯ ಬಾರಿ. ಎಸ್‌ಬಿಐ ಕ್ರಮವನ್ನು ಇತರ ಕೆಲವು ಬ್ಯಾಂಕ್‌ಗಳೂ ಮುಂದಿನ ದಿನಗಳಲ್ಲಿ ಅನುಸರಿಸುವ ಸಾಧ್ಯತೆ ಇದೆ.

ಈಗಿನ ಪರಿಷ್ಕರಣೆಯ ನಂತರ ಒಂದು ವರ್ಷದ ಅವಧಿಯ ಎಂಸಿಎಲ್‌ಆರ್ ದರ ಶೇ 7.20 ಆಗಿದೆ. ಹೆಚ್ಚಿನ ಸಾಲಗಳು ಒಂದು ವರ್ಷದ ಎಂಸಿಎಲ್‌ಆರ್ ಆಧರಿಸಿವೆ.

'ಮೋದಿ ಸರ್ಕಾರದಿಂದ ದೇಶದ ಆರ್ಥಿಕತೆ ನಾಶ'

ಜೈಪುರ (ಪಿಟಿಐ): ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀಮಂತರು ಮತ್ತು ಬಡವರಿಗೆ ಎರಡು ಪ್ರತ್ಯೇಕ ಹಿಂದೂಸ್ತಾನವನ್ನು ನಿರ್ಮಿಸಲು ಬಯಸುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಆರೋಪಿಸಿದರು.

ರಾಜಸ್ಥಾನದ ಬನ್ಸ್‌ವಾರಾ ದಲ್ಲಿ ಸೋಮವಾರ ರ‍್ಯಾಲಿಯೊಂದರಲ್ಲಿ ಮಾತನಾಡಿದ ಅವರು, ಹಿಂದಿನ ಯುಪಿಎ ಸರ್ಕಾರ ಸಶಕ್ತಗೊಳಿಸಿದ್ದ ದೇಶದ ಆರ್ಥಿಕತೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ನಾಶ ಮಾಡುತ್ತಿದೆ ಎಂದು ದೂರಿದರು.

ಮೋದಿ ಮತ್ತು ಬಿಜೆಪಿಯವರು ಇಬ್ಬರು– ಮೂವರು ಕೈಗಾರಿಕೋದ್ಯಮಿಗಳನ್ನು ಒಳಗೊಂಡ ಶ್ರೀಮಂತರಿಗಾಗಿ ಒಂದು ಹಿಂದೂಸ್ತಾನ ಮತ್ತು ದಲಿತರು, ರೈತರು, ಬಡವರು ಮತ್ತು ಹಿಂದುಳಿದವರಿಗಾಗಿ ಮತ್ತೊಂದು ಹಿಂದೂಸ್ತಾನ ನಿರ್ಮಿಸುತ್ತಿದ್ದಾರೆ. ಆದರೆ ಕಾಂಗ್ರೆಸ್ ಒಂದೇ ಹಿಂದೂಸ್ತಾನವನ್ನು ಬಯಸುತ್ತದೆ ಎಂದು ಹೇಳಿದರು.

'ಬಿಜೆಪಿ ಸರ್ಕಾರ ನಮ್ಮ ಆರ್ಥಿಕತೆಯ ಮೇಲೆ ದಾಳಿ ಮಾಡಿದೆ. ಪ್ರಧಾನಿ ನೋಟು ರದ್ದು ಮಾಡಿದರು, ಜಿಎಸ್‌ಟಿಯನ್ನು ತಪ್ಪಾಗಿ ಅನುಷ್ಠಾನ ಮಾಡಿದರು. ಇವುಗಳಿಂದಾಗಿ ಆರ್ಥಿಕತೆ ನಾಶವಾಗಿದೆ. ಯುಪಿಎ ಸರ್ಕಾರ ದೇಶದ ಆರ್ಥಿಕತೆಯನ್ನು ಸಶಕ್ತಗೊಳಿಸಲು ಪ್ರಯತ್ನಿಸಿತ್ತು ಎಂದರು.

ತುಮಕೂರು ಎಪಿಎಂಸಿ: ಕ್ವಿಂಟಲ್‌ಗೆ ₹5 ಸಾವಿರದಿಂದ ₹7 ಸಾವಿರದವರೆಗೆ ಇಳಿಕೆ

ಹುಣಸೆಹಣ್ಣಿನ ಬೆಲೆ ತೀವ್ರ ಕುಸಿತ

ಪ್ರಜಾವಾಣಿ ವಾರ್ತೆ

ತುಮಕೂರು: ರಾಜ್ಯದ ಪ್ರಮುಖ ಮಾರುಕಟ್ಟೆಯಾದ ತುಮಕೂರು ಎಪಿಎಂಸಿಯಲ್ಲಿ ಹುಣಸೆಹಣ್ಣಿನ ಬೆಲೆ ಕ್ವಿಂಟಲ್‌ಗೆ ₹5 ಸಾವಿರದಿಂದ ₹7 ಸಾವಿರದವರೆಗೆ ಕುಸಿದಿದೆ.

ದಕ್ಷಿಣ ಭಾರತದ ದೊಡ್ಡ ಮಾರುಕಟ್ಟೆ ಹಿಂದೂಪುರ ಹಾಗೂ ತಮಿಳುನಾಡಿನ ವರ್ತಕರು ಹುಣಸೆ ಖರೀದಿಗೆ ಬರುತ್ತಿದ್ದು, ದಿನದಿಂದ ದಿನಕ್ಕೆ ಬೇಡಿಕೆ ಕುಸಿಯುತ್ತಿದ್ದು, ಸ್ಥಳೀಯ ವರ್ತಕರು ಅತಿ ಕಡಿಮೆ ಬೆಲೆಗೆ ಕೊಳ್ಳುತ್ತಿದ್ದಾರೆ.

ಮಾರ್ಚ್ ಮಧ್ಯಭಾಗದಿಂದಲೇ ಹಣ್ಣು ಮಾರುಕಟ್ಟೆಗೆ ಬಂದಿದ್ದು, ಪ್ರಸ್ತುತ ಶೇ 70ರಷ್ಟು ಹಣ್ಣು ಮಾರಾಟವಾಗಿದೆ. ಇನ್ನು ಶೇ 30ರಷ್ಟು ಮಾತ್ರ ಮಾರಾಟವಾಗಬೇಕಿದೆ. ಆರಂಭದಲ್ಲಿ ಗುಣಮಟ್ಟದ ಹಣ್ಣಿಗೆ ಕ್ವಿಂಟಲ್ ₹13 ಸಾವಿರದಿಂದ ₹16 ಸಾವಿರದವರೆಗೂ ಇತ್ತು. ಸಾಧಾರಣ ಗುಣಮಟ್ಟದ ಹಣ್ಣಿಗೆ ₹6 ಸಾವಿರದಿಂದ ₹8 ಸಾವಿರದ ವರೆಗೂ ಇತ್ತು. ಈಗಲೂ ಗುಣಮಟ್ಟದ ಆಧಾರದ ಮೇಲೆ ಬೆಲೆ ಸಿಗುತ್ತಿದ್ದು, ಕ್ವಿಂಟಲ್‌ಗೆ ₹14 ಸಾವಿರದಿಂದ ₹16 ಸಾವಿರದವರೆಗೂ ಇದೆ. ಗುಣಮಟ್ಟ ಇಲ್ಲದ ಹಣ್ಣಿನ ಬೆಲೆ ತೀವ್ರವಾಗಿ ಇಳಿಕೆಯಾಗಿದೆ.

ಕೋವಿಡ್ ಸಮಯದಲ್ಲಿ ದಾಸ್ತಾನು ಮಾಡಿದ್ದ ಹುಣಸೆ ಇನ್ನೂ ಕರಗಿಲ್ಲ. ಈ ಬಾರಿಯೂ ಸಾಕಷ್ಟು ದಾಸ್ತಾನು ಮಾಡಲಾಗಿದೆ. ಹೊರ ರಾಜ್ಯ ಹಾಗೂ ವಿದೇಶದಲ್ಲಿ ಬೇಡಿಕೆ ಇಲ್ಲ. ಮುಂದಿನ ದಿನಗಳಲ್ಲಿ ಧಾರಣೆ ಮತ್ತಷ್ಟು ಕುಸಿಯಬಹುದು ಎಂಬ ಆತಂಕದಿಂದ ಖರೀದಿಗೆ ಮುಂದಾಗುತ್ತಿಲ್ಲ ಎನ್ನುತ್ತಾರೆ ವರ್ತಕ ಮಹೇಂದ್ರ.

ಹುಣಸೆ ಬೆಳೆ ಕಡಿಮೆ (ಮೈಸೂರುವರದಿ): ಜಿಲ್ಲೆಯ ಎಪಿಎಂಸಿ ಮಾರುಕಟ್ಟೆಯಲ್ಲಿ ಹುಣಸೆಹಣ್ಣಿನ ಕನಿಷ್ಠ ಧಾರಣೆ ಕ್ವಿಂಟಲ್‌ಗೆ ₹ 2,780, ಗರಿಷ್ಠ ಧಾರಣೆ ₹ 12,555 ಇದೆ. ಮೇ 7ರಿಂದ 11ರವರೆಗೂ ಕನಿಷ್ಠ ಧಾರಣೆ ₹ 1,600ರಿಂದ ₹ 1,800ಕ್ಕೆ ತಲುಪಿತ್ತು.

ಕೆಲವರಿಗಷ್ಟೇ ಬೆಲೆ ಕುಸಿತದ ಬಿಸಿ

ಹೊಸಪೇಟೆ: ವಿಜಯನಗರ ಜಿಲ್ಲೆಯಲ್ಲೂ ಹುಣಸೆ ದರ ಕುಸಿತ ಕಂಡಿದೆ. ಪ್ರತಿ ಕೆ.ಜಿ ಹುಣಸೆ ₹35ರಿಂದ ₹40ಕ್ಕೆ ಮಾರಾಟವಾಗುತ್ತಿದೆ. ಈಗಾಗಲೇ ಹೆಚ್ಚಿನ ಹುಣಸೆ ಬೆಳೆಗಾರರು ಮಾರಾಟ ಮಾಡಿರುವುದರಿಂದ ಬೆಲೆ ಇಳಿಕೆ ಬಿಸಿ ಕೆಲವರಿಗಷ್ಟೇ ತಟ್ಟಿದೆ.

ಮೊಳಕಾಲ್ಮುರು ತಾಲ್ಲೂಕಿನ ಗ್ರಾಮವೊಂದರಲ್ಲಿ ಹುಣಸೆಹಣ್ಣು ಬಿಡಿಸುತ್ತಿರುವ ಕಾರ್ಮಿಕರು

ಕೋವಿಡ್ ಸಮಯದಲ್ಲಿ ಸಣ್ಣ ವ್ಯಾಪಾರಿಗಳಿಗೆ ನೀಡಿದ್ದ ಮುಂಗಡ ವಾಪಸ್ ಬಂದಿಲ್ಲ. ಸಾಕಷ್ಟು ಅಂಗಡಿಗಳನ್ನು ಮುಚ್ಚಲಾಗಿದೆ. ಬೆಳೆಗಾರರು ನಷ್ಟದಲ್ಲಿದ್ದಾರೆ

ಎಸ್. ಚೇತನ್, ಸಗಟು ವ್ಯಾಪಾರಿ, ಚಳ್ಳಕೆರೆ

ದರ ಕುಸಿತದ ನಂತರ ಬೆಳೆಗಾರರು ಕಟಾವು ಕೂಲಿ ಗಿಟ್ಟುವುದಿಲ್ಲ ಎಂದು ಮರದಲ್ಲೇ ಹಣ್ಣನ್ನು ಬಿಟ್ಟಿದ್ದಾರೆ. ಶೀತಲೀಕರಣ ಕೇಂದ್ರಗಳಲ್ಲಿ ಇಟ್ಟಿರುವ ಹುಣಸೆಗೆ ಬಾಡಿಗೆ ನೀಡಬೇಕಾಗಿದೆ

ಸಾದಿಕ್, ಬೆಳೆಗಾರ

ಕ್ವಿಂಟಲ್ ಹುಣಸೆಹಣ್ಣು ₹4,200ಕ್ಕೆ ಮಾರಾಟ

• ಕೊಂಡ್ಲಹಳ್ಳಿ ಜಯಪ್ರಕಾಶ

ಮೊಳಕಾಲ್ಮುರು(ಚಿತ್ರದುರ್ಗ ಜಿಲ್ಲೆ): ಎರಡು ವರ್ಷದಿಂದ ಹುಣಸೆಹಣ್ಣಿನ ದರ ತೀವ್ರ ಕುಸಿತ ಕಂಡಿದ್ದು ಬೆಳೆಗಾರರು, ಬೆಳೆದಾರರು ಸಂಕಷ್ಟಕ್ಕೀಡಾಗಿದ್ದಾರೆ.

ಕೋವಿಡ್‌ಗೂ ಮುನ್ನ ಹುಣಸೆಹಣ್ಣಿನ ದರ ಚಳ್ಳಕೆರೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹ 150 ಆಸುಪಾಸಿನಲ್ಲಿತ್ತು, ಈಗ ಕೆ.ಜಿಗೆ ₹ 42 ಇಳಿದಿದೆ. ಚಳ್ಳಕೆರೆ ಮಾರುಕಟ್ಟೆಯಲ್ಲಿ ಭಾನುವಾರ ಕ್ವಿಂಟಲ್‌ಗೆ ₹ 4,200 ರಿಂದ ₹ 4,600ಕ್ಕೆ ಹುಣಸೆ ಮಾರಾಟವಾಗಿದೆ ಎಂದು ಎಪಿಎಂಸಿ ನಿರ್ದೇಶಕ ಈಶ್ವರಪ್ಪ ಮಾಹಿತಿ ನೀಡಿದರು.

ಲಾಕ್‌ಡೌನ್‌ನಲ್ಲಿ ಕುಸಿತವಾದ ದರ ಮತ್ತೆ ಏರಿಕೆ ಕಂಡಿಲ್ಲ. ಹೆಚ್ಚು ಇಳುವರಿ ಮತ್ತು ಬೇಡಿಕೆಗಿಂತಲೂ ಹೆಚ್ಚು ಆವಕ ದರ ಕುಸಿತಕ್ಕೆ ಪ್ರಮುಖ ಕಾರಣ ಎನ್ನುತ್ತಾರೆ ಚಳ್ಳಕೆರೆಯ ತೋಂಟದಾರ್ಯ ಟ್ರೇಡರ್ಸ್‌ನ ಎಸ್. ಚೈತನ್ಯ.

ಹೈದರಾಬಾದ್, ಮದನಪಲ್ಲಿ, ಹಿಂದೂಪುರ, ಪುದುಚೇರಿ, ಪುಣೆ, ಒಡಿಶಾದ ಜಗದಲ್‌ಪುರದಲ್ಲಿ ಹುಣಸೆ ಶೇಖರಣೆ ಘಟಕಗಳಿದ್ದು, ಕಳೆದ ವರ್ಷ 6,500 ಲೋಡ್ ಹುಣಸೆ ದಾಸ್ತಾನು ಮಾಡಲಾಗಿತ್ತು, ಇದಕ್ಕೆ ಈ ವರ್ಷ ಮತ್ತೆ 38,000 ಲೋಡ್ ಸೇರ್ಪಡೆಯಾಗಿದೆ.

ರಾಜ್ಯದಲ್ಲಿ ಚಳ್ಳಕೆರೆ ಹುಣಸೆಹಣ್ಣಿನ ಪ್ರಮುಖ ಮಾರುಕಟ್ಟೆ. ಇಲ್ಲಿಗೆ ಸೀಮಾಂಧ್ರದ ಹುಣಸೆ ಮಾರಾಟಕ್ಕೆ ಬರುತ್ತದೆ. ಮೊಳಕಾಲ್ಮೂರಿನಲ್ಲೂ ಹುಣಸೆಯ ದೊಡ್ಡ ಮಾರುಕಟ್ಟೆ ಇದೆ. ಜನವರಿಯಿಂದ ಆರಂಭವಾಗುವ ಮಾರಾಟ ಜೂನ್‌ವರೆಗೆ ನಡೆಯುತ್ತದೆ.

ವಿಮಾನ ಇಂಧನ ದರ ಶೇ 5.3ರಷ್ಟು ಏರಿಕೆ

ನವದೆಹಲಿ (ಪಿಟಿಐ): ವಿಮಾನ ಇಂಧನ ದರವನ್ನು ಸೋಮವಾರ ಶೇಕಡ 5.3ರಷ್ಟು ಹೆಚ್ಚಳ ಮಾಡಲಾಗಿದೆ. ಇದರಿಂದಾಗಿ ಈ ವರ್ಷದಲ್ಲಿ ವಿಮಾನ ಇಂಧನ (ಎಟಿಎಫ್) ದರವು 10 ಬಾರಿ ಹೆಚ್ಚಳ ಆದಂತಾಗಿದೆ.

ಎಟಿಎಫ್ ದರವನ್ನು ಕಿಲೋ ಲೀಟರ್‌ಗೆ ₹ 6,188.25ರಷ್ಟು ಜಾಸ್ತಿ ಮಾಡಲಾಗಿದೆ. ಇದರಿಂದಾಗಿ ಕಿಲೋ ಲೀಟರ್ ಎಟಿಎಫ್ ಬೆಲೆಯು ದೆಹಲಿಯಲ್ಲಿ ₹ 1.23 ಲಕ್ಷಕ್ಕೆ ತಲುಪಿದೆ (ಲೀಟರ್‌ಗೆ ₹ 123). ಇದು ಈವರೆಗಿನ ಗರಿಷ್ಠ ಬೆಲೆ.

ಎಟಿಎಫ್ ಬೆಲೆಯನ್ನು ಪ್ರತಿ ತಿಂಗಳ 1 ಮತ್ತು 16ನೆಯ ತಾರೀಕಿನಂದು ಪರಿಷ್ಕರಿಸಲಾಗುತ್ತದೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಏಪ್ರಿಲ್ 6ರ ನಂತರ ಪರಿಷ್ಕರಿಸಿಲ್ಲ. ಎಟಿಎಫ್ ಬೆಲೆಯನ್ನು ಮಾತ್ರ ಪರಿಷ್ಕರಿಸಿ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿರುವುದಕ್ಕೆ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಯಾವುದೇ ವಿವರಣೆ ನೀಡಿಲ್ಲ.

ಷೇರುಪೇಟೆ: 6 ದಿನಗಳ ಕುಸಿತಕ್ಕೆ ತಡೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿಯ ಆರು ದಿನಗಳ ಕುಸಿತಕ್ಕೆ ಸೋಮವಾರ ವಿರಾಮ ಬಿದ್ದಿದೆ. ಬ್ಯಾಂಕಿಂಗ್, ಆಟೊಮೊಬೈಲ್ ಮತ್ತು ವಿದ್ಯುತ್ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಸಿದ ಕಾರಣ ಸೂಚ್ಯಂಕಗಳು ಚೇತರಿಕೆ ಕಂಡುಕೊಂಡವು.

ಸೆನ್ಸೆಕ್ಸ್ 180 ಅಂಶ, ನಿಫ್ಟಿ 60 ಅಂಶ ಏರಿಕೆ ಕಂಡಿವೆ. ಐ.ಟಿ. ವಲಯದ ಹಾಗೂ ಕೆಲವು ಪ್ರಮುಖ ಕಂಪನಿಗಳ ಷೇರುಗಳನ್ನು ಹೂಡಿಕೆದಾರರು ಲಾಭಗಳಿಕೆಯ ಉದ್ದೇಶದಿಂದ ಮಾರಾಟ ಮಾಡಿದರು. ಇದು ಗಳಿಕೆಯ ಓಟಕ್ಕೆ ತುಸು ಅಡ್ಡಿ ಉಂಟು ಮಾಡಿತು.

'ಹಣದುಬ್ಬರ ಹೆಚ್ಚಾಗುತ್ತಿರುವುದು ಹಾಗೂ ಅದರ ಪರಿಣಾಮವಾಗಿ ಜನ ವೆಚ್ಚ ಮಾಡುವುದು ಕಡಿಮೆ ಆಗಬಹುದು ಎಂಬುದು ಹೂಡಿಕೆದಾರರ ಚಿಂತೆಗೆ ಕಾರಣವಾಗಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಉತ್ತಮ ಸಾಧನೆ ತೋರುವ ಸಾಧ್ಯತೆ ಇರುವ ಕಂಪನಿಗಳಲ್ಲಿ ಹೂಡಿಕೆದಾರರು ಆಸಕ್ತಿ ತೋರಿಸಿದ್ದಾರೆ' ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 0.51ರಷ್ಟು ಇಳಿಕೆಯಾಗಿ ಪ್ರತಿ ಬ್ಯಾರೆಲ್‌ಗೆ 111 ಡಾಲರ್‌ಗೆ ತಲುಪಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಥಮ ವರ್ಷದ ಪುಣ್ಯಸ್ಮರಣೆ
(ತಾ॥17-05-2022)

ಶ್ರೀ ಪೃಥ್ವಿ ಶಂಕರ್
(ಶ್ರೀ ಬಿ. ಸಿ. ಶಂಕರ್ ಮತ್ತು ದಿ॥ ಛಾಯಾದೇವಿಯವರ ಪುತ್ರ)
ನಿಮ್ಮ ಪ್ರೀತಿ, ವಾತ್ಸಲ್ಯ, ಮಮತೆ, ಸರಳತೆ ತುಂಬಿದ ಆದರ್ಶಮಯ. ಅನುಕ್ಷಣವೂ ನಿಮ್ಮ ನೆನಪುಗಳಲ್ಲಿ ಮುನ್ನಡೆಯುತ್ತೇವೆ.
ದಿ॥ ಪ್ರೊ॥ ಬಿ. ಸಿ. ರಾಜಣ್ಣನವರ ಕುಟುಂಬಸ್ಥರು
ಪವಿತ್ರಾ, ದತ್ತ ಪಟೇಲ್

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು -	490
ಅಡಿಕೆ	
ಬೆಂಗಳೂರು	
ಇತರ	65000-70000
ಚನ್ನಗಿರಿ	
ರಾಶಿ	49699-50839
ಹೊನ್ನಾಳಿ	
ರಾಶಿ	49800-49800
ಕಾರ್ಕಳ	
ಹೊಸತು	40000-45000
ಕುಮಟಾ	
ಚಿಪ್ಪು	25609-31119
ಕೋಕ	18509-29089
ಫ್ಯಾಕ್ಟರಿ	10169-21299
ಹಳೆಚಾಲಿ	45509-49299
ಹೊಸಚಾಲಿ	35699-39019
ಸಾಗರ	
ಬಿಳಿಗೋಟು	25409-30399
ಚಾಲಿ	34609-39159
ಕೋಕ	24369-33099
ಕೆಂಪುಗೋಟು	20899-38699
ರಾಶಿ	34129-50839
ಸಿಪ್ಪೆ ಗೋಟು	12599-21770
ಶಿವಮೊಗ್ಗ	
ಬೆಟ್ಟೆ	51336-53399
ಗೊರಬಲು	17000-37999
ರಾಶಿ	43469-50599
ಸರಕು	57109-79999
ಸಿದ್ದಾಪುರ	
ಬಿಳಿಗೋಟು	24911-32099
ಕೋಕ	23399-33889
ಹೊಸಚಾಲಿ	34589-40099
ಕೆಂಪುಗೋಟು	28089-31109
ರಾಶಿ	44809-50109
ತಟ್ಟಿಬೆಟ್ಟೆ	33199-43509
ಶಿರಸಿ	
ಬೆಟ್ಟೆ	37699-47499
ಬಿಳಿಗೋಟು	24500-31999
ಚಾಲಿ	30599-40291
ರಾಶಿ	41849-50088
ತುಮಕೂರು	
ರಾಶಿ	49100-50100
ಯಲ್ಲಾಪುರ	
ಬಿಳಿಗೋಟು	28812-34099
ಚಾಲಿ	35930-40070
ಕೋಕ	18812-30866
ಕೆಂಪುಗೋಟು	32099-34705
ರಾಶಿ	48699-53799
ತಟ್ಟಿಬೆಟ್ಟೆ	38419-46764

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	15950	231.90 ಸೆಂಟ್ಸ್
ಎಸಿ	8900	8500	8750	
ಆರ್‌ಪಿ	9600	9800	9975	ಲಂಡನ್
ಆರ್‌ಸಿ	4600	4300	4450	2040 ಡಾಲರ್ಸ್

ಸಿಎನ್‌ಜಿ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ರಾಜಧಾನಿ ದೆಹಲಿಯಲ್ಲಿ ಸಿಎನ್‌ಜಿ ಬೆಲೆಯನ್ನು ಕೆ.ಜಿ. ₹ 2ರಂತೆ ಹೆಚ್ಚಿಸಲಾಗಿದೆ. ಎರಡು ತಿಂಗಳಿಗೂ ತುಸು ಹೆಚ್ಚಿನ ಅವಧಿಯಲ್ಲಿ ಒಟ್ಟು 12 ಬಾರಿ ಸಿಎನ್‌ಜಿ ಬೆಲೆ ಏರಿಕೆ ಆಗಿದೆ. 12 ಬಾರಿ ಬೆಲೆ ಹೆಚ್ಚಳ ಮಾಡಿರುವ ಕಾರಣ ಸಿಎನ್‌ಜಿ ಬೆಲೆಯು ಪ್ರತಿ ಕೆ.ಜಿ.ಗೆ ₹ 17.6ರಷ್ಟು ಹೆಚ್ಚಾಗಿದೆ. ಏಪ್ರಿಲ್ ಒಂದರಲ್ಲಿಯೇ ಕೆ.ಜಿ. ಸಿಎನ್‌ಜಿ ಬೆಲೆಯು ₹ 7.50ರಷ್ಟು ಏರಿಕೆಆಗಿದೆ.

ರಫ್ತು ನಿಷೇಧ: ಗೋಧಿ ಬೆಲೆ ಗಗನಕ್ಕೆ

ಪ್ಯಾರಿಸ್ (ಎಎಫ್‌ಪಿ): ಭಾರತವು ಗೋಧಿ ರಫ್ತು ನಿಷೇಧಿಸಿದ ಬಳಿಕ ಜಾಗತಿಕ ಮಾರುಕಟ್ಟೆಯಲ್ಲಿ ಗೋಧಿಯ ಬೆಲೆ ಹೆಚ್ಚಳವಾಗಿದೆ.

ಐರೋಪ್ಯ ಮಾರುಕಟ್ಟೆಯಲ್ಲಿ ಒಂದು ಟನ್ ಗೋಧಿಯ ಬೆಲೆ ₹35,273ಕ್ಕೆ(435 ಯುರೊ) ಏರಿದೆ.

ಜಾಗತಿಕ ಮಾರುಕಟ್ಟೆಗೆ ಶೇಕಡ 12ರಷ್ಟು ಗೋಧಿ ಪೂರೈಕೆ ಮಾಡುತ್ತಿದ್ದ ಉಕ್ರೇನ್‌ನ ವಿರುದ್ಧ ರಷ್ಯಾ ಯುದ್ಧ ಪ್ರಾರಂಭಿಸಿದ ನಂತರ ಗೋಧಿ ಪೂರೈಕೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಈ ಮಧ್ಯೆ ಗೋಧಿ ಉತ್ಪಾದನೆಯಲ್ಲಿ ವಿಶ್ವದಲ್ಲೇ ಎರಡನೇ ಸ್ಥಾನದಲ್ಲಿರುವ ಭಾರತ ರಫ್ತು ನಿಷೇಧಿಸಿದ ಬಳಿಕ ಬೆಲೆ ಹೆಚ್ಚಳವಾಗಿದೆ.

'ಕಡಿಮೆ ಉತ್ಪಾದನೆ ಹಾಗೂ ತ್ವರಿತವಾಗಿ ಬೆಲೆ ಏರಿಕೆ ಆಗುತ್ತಿರುವುದರಿಂದ ನಮ್ಮ ದೇಶದ 140 ಕೋಟಿ ಜನರ ಆಹಾರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ರಫ್ತು ನಿಷೇಧಿಸುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಭಾರತ ತಿಳಿಸಿದೆ.

ಬಂದರುಗಳಲ್ಲಿ ಸಿಲುಕಿದ ಗೋಧಿ

ಮುಂಬೈ (ರಾಯಿಟರ್ಸ್): ಗೋಧಿ ರಫ್ತಿಗೆ ನಿಷೇಧ ಹೇರಿದ ಕೇಂದ್ರದ ಕ್ರಮದಿಂದಾಗಿ ಬಂದರುಗಳಲ್ಲಿ ಅಂದಾಜು 18 ಲಕ್ಷ ಟನ್ ಗೋಧಿ ಸಿಲುಕಿಕೊಂಡಿದೆ. ಇದರಿಂದಾಗಿ ವರ್ತಕರು ಭಾರಿ ನಷ್ಟಕ್ಕೆ ಸಿಲುಕುವ ಭೀತಿ ಎದುರಿಸುತ್ತಿದ್ದಾರೆ.

ಬಂದರುಗಳಲ್ಲಿ ಒಟ್ಟು 22 ಲಕ್ಷ ಟನ್ ಗೋಧಿ ಸಿಲುಕಿಕೊಂಡಿದೆ. ಈ ಪೈಕಿ 4 ಲಕ್ಷ ಟನ್‌ಗೆ ಲೆಟರ್ ಆಫ್ ಕ್ರೆಡಿಟ್ ಇದ್ದು, ಇಷ್ಟು ಗೋಧಿಯನ್ನು ರಫ್ತು ಮಾಡಲು ಸಮಸ್ಯೆ ಇಲ್ಲ ಎಂದು ವರ್ತಕರು ತಿಳಿಸಿದ್ದಾರೆ.

ಇನ್ನುಳಿದ 18 ಲಕ್ಷ ಟನ್ ಗೋಧಿಯನ್ನು ಏನು ಮಾಡುವುದು ಎಂಬುದು ಗೊತ್ತಾಗುತ್ತಿಲ್ಲ. ವರ್ತಕರು ಗೋಧಿಯನ್ನು ಮತ್ತೆ ದೇಶಿ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗಬಹುದು ಎನ್ನಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

General

✔ ಟಾಟಾಮೋಟಾರ್ಸ್, TOYOTA, ಬ್ರಿಟಾನಿಯಾ, ಆನ್‌ಲೈನ್ಗಳಿಗೆ 7th SSLC PUC/ Degree/ ITI/ Diplomaದವರು 18,600-54,000 ವಸತಿಯೂಟವಿದೆ. 9731066259, 9731670789

Part-Time Jobs

ಕನ್ನಡ /ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

✔ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Manager

REQUIRE RESTAURANT Manager in Koramangala. Contact 9810767062 or mail at drona@thedonercompany.in

Wanted

✔ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ Ot. 17,800-68,000/- 8884666594/ 8884666597

ಸಿನಿಮಾ, ಧಾರವಾಹಿ, ರಿಯಾಲಿಟಿ ಶೋಗಾಗಿ ನಟ-ನಟಿಯರ, ಮಕ್ಕಳ ಆಯ್ಕೆ ನಡೆಯುತ್ತಿದ್ದು ಭಾವಚಿತ್ರದೊಂದಿಗೆ ತಕ್ಷಣ ಸಂಪರ್ಕಿಸಿ. ಪೋಷಕ ಕಲಾವಿದರಿಗೂ ಅವಕಾಶವುಂಟು. 8660330943

ಪ್ರವಾಸ

Travel

ಶ್ರೀರಾಜರಾಜೇಶ್ವರಿ ಟೂರ್ಸ್. 9739618243,9743895346, 31.05.2022, 5 ದಿನಗಳ ತಮಿಳುನಾಡು ಪ್ರವಾಸ 3.7.2022, 8 ದಿನಗಳ ಶಿರಡಿ,ನಾಸಿಕ್,ಎಲ್ಲೋರ, ಪಂಚಜ್ಯೋತಿರ್ಲಿಂಗ, 21.9.2022, 14ದಿನಗಳ ಚಾರಧಾಮ್

ಬೇಕಾಗಿದ್ದಾರೆ 24.5.2022 ರಿಂದ 6ದಿನ 2+2 ಎ/ಸಿ ಬಸ್ ರೂಮ್ ವಸತಿ ರಾಮೇಶ್ವರ- ತಿವೇಂದ್ರಂ- ಅಲಪಿಬೋಟಿಂಗ್ ಕನ್ಯಾಕುಮಾರಿ- ಗುರುವಾಯೂರು- ಕೋವಲಂ ಬೀಚ 26.5.2022 ರಿಂದ 4ದಿನ ಧರ್ಮಸ್ಥಳ- ಮುರಡೇಶ್ವರ- ಕೊಲ್ಲೂರು ಹೊರನಾಡು- ಸಿಂಗದೂರು- ಕುಕ್ಕೆಸುಬ್ರಮಣ್ಯ. 11.6.2022 ರಿಂದ 5ದಿನ ಶಿರಡಿ ಪಂಡರಾಪುರ, ಕೊಲ್ಲಾಪುರ ಕೂಡಲಸಂಗಮ, ಹಂಪೆ. 8.7.2022 ರಿಂದ 12ದಿನ ವಿಮಾನದಲ್ಲಿ ರೂ ವಸತಿ ಕೇದರನಾಥ್ ಗಂಗೋತ್ರಿ ಬದರಿನಾಥ್ ಯಮನೋತ್ರಿ ದೆಹಲಿ, ಹರಿದ್ವಾರ 22.7.2022 ರಿಂದ 9ದಿನ ವಿಮಾನದಲ್ಲಿ ರೂವಸತಿ ಕಾಶಿ ನೇಪಾಳ ಗಯಾ/ ಅಯೋಧ್ಯೆ/ ಅಲಹಾಬಾದ್/ ಗೊರಕಪುರ. 11.8.2022 ರಿಂದ 5ದಿನ ವಿಮಾನದಲ್ಲಿ ರೂವಸತಿ ಕಾಶಿ, ಅಯೋಧ್ಯೆ, ಗಯಾ ಬುದ್ಧಗಯಾ ಅಲಹಾಬಾದ ಶ್ರೀಗುರುರಾಜ ಟ್ರಾವಲ್ಸ್ ಕೋಲಾರ್: 9900124333, 8123099913, 9611082432,

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಕೊಬ್ಬರಿ ಧಾರಣೆ

ತುರುವೇಕೆರೆ	₹15000-15045

ಮುಂಬೈ ಧಾರಣೆ

ಶೇಂಗಾ

16-5-2022

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9600-9650
ದಪ್ಪ ಮಧ್ಯಪ್ರದೇಶ(ಹೊಸ)	10950-11000
ದಪ್ಪ ಗುಜರಾತ್(ಹೊಸ)	10050-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಸೋಯಾ ಕಚ್ಚಾ	1555 (1560)
ಪಾಮ್ ವಾರದ ಡೆಲಿವರಿ	1568 (1568)
ಸೂರ್ಯಕಾಂತಿ ಎಣ್ಣೆ ಕಚ್ಚಾ	1830 (1840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,200 (50,250)
ಬೆಳ್ಳಿ ಕೆ.ಜಿ 60,100 (59,650)

ಆವರಣದಲ್ಲಿ ಶನಿವಾರದ ಧಾರಣೆ

ಎಲ್‌ಐಸಿ ಷೇರು ಇಂದಿನಿಂದ ವಹಿವಾಟು

ನವದೆಹಲಿ (ಪಿಟಿಐ): ಎಲ್‌ಐಸಿ ಷೇರುಗಳು ದೇಶದ ಷೇರು ಮಾರುಕಟ್ಟೆಗಳಲ್ಲಿ ಮಂಗಳವಾರದಿಂದ ವಹಿವಾಟು ಆರಂಭಿಸಲಿವೆ.

ಕೇಂದ್ರ ಸರ್ಕಾರವು ಎಲ್‌ಐಸಿಯ ಪ್ರತಿ ಷೇರಿನ ಬೆಲೆಯನ್ನು ₹ 949ಕ್ಕೆ ನಿಗದಿ ಮಾಡಿತ್ತು. ರಿಯಾಯಿತಿಯ ಕಾರಣದಿಂದಾಗಿ ಷೇರುಗಳು ಎಲ್‌ಐಸಿ ಪಾಲಿಸಿದಾರರಿಗೆ ಹಾಗೂ ಸಣ್ಣ ಹೂಡಿಕೆದಾರರಿಗೆ ಕ್ರಮವಾಗಿ ₹ 889ಕ್ಕೆ ಮತ್ತು ₹ 904ಕ್ಕೆ ಸಿಕ್ಕಿವೆ.

ರಾಜ್ಯದಲ್ಲಿ ಡೆಂಗಿ ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷ ನಿಯಂತ್ರಣದಲ್ಲಿದ್ದ ಡೆಂಗಿ ಪ್ರಕರಣಗಳು, ಈ ವರ್ಷ ಅಕಾಲಿಕ ಮಳೆಯಿಂದಾಗಿ ಏರುಗತಿ ಪಡೆದುಕೊಂಡಿವೆ. ಒಂದೂವರೆ ತಿಂಗಳಲ್ಲಿ 461 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 300ಕ್ಕೂ ಅಧಿಕ ಮಂದಿ ಡೆಂಗಿ ಜ್ವರಕ್ಕೆ ಒಳಗಾಗಿದ್ದಾರೆ. ಈ ವರ್ಷ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

ಈ ವರ್ಷ ಐದೂವರೆ ತಿಂಗಳಲ್ಲಿ ಡೆಂಗಿ ಜ್ವರಕ್ಕೆ ಒಳಗಾದವರ ಸಂಖ್ಯೆ1,400ಕ್ಕೆ ತಲುಪಿದೆ. ಪ್ರಕರಣಗಳ ಸಂಖ್ಯೆ ಮೂರು ಜಿಲ್ಲೆಗಳಲ್ಲಿ ಮೂರಂಕಿ, 20 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ.

ಉಡುಪಿಯಲ್ಲಿ 150, ಮೈಸೂರಿನಲ್ಲಿ 127, ಕೊಪ್ಪಳದಲ್ಲಿ 87, ಚಿತ್ರದುರ್ಗದಲ್ಲಿ 79, ಬಳ್ಳಾರಿಯಲ್ಲಿ 76, ವಿಜಯಪುರದಲ್ಲಿ 56, ದಾವಣಗೆರೆಯಲ್ಲಿ 51, ದಕ್ಷಿಣ ಕನ್ನಡ ಹಾಗೂ ಶಿವಮೊಗ್ಗದಲ್ಲಿ ತಲಾ 48, ಕೋಲಾರದಲ್ಲಿ 35, ರಾಯಚೂರು ಹಾಗೂ ತುಮಕೂರಿನಲ್ಲಿ ತಲಾ 30, ಯಾದಗಿರಿಯಲ್ಲಿ 25, ಹಾವೇರಿ ಹಾಗೂ ಬಾಗಲಕೋಟೆಯಲ್ಲಿ ತಲಾ 24 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 20ಕ್ಕಿಂತ ಕಡಿಮೆ ಇವೆ.

25 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿದ್ದು, 320 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ. ಕೋಲಾರದಲ್ಲಿ 55, ವಿಜಯಪುರದಲ್ಲಿ 52, ಬೆಂಗಳೂರು ಗ್ರಾಮಾಂತರದಲ್ಲಿ 35, ತುಮಕೂರಿನಲ್ಲಿ 33, ಚಿತ್ರದುರ್ಗದಲ್ಲಿ 22, ದಾವಣಗೆರೆಯಲ್ಲಿ 17 ಹಾಗೂ ರಾಮನಗರದಲ್ಲಿ 13 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆ ಇವೆ.

'ಮನೆಯ ಸುತ್ತಮುತ್ತಲಿನ ಘನತ್ಯಾಜ್ಯ ವಸ್ತುಗಳಲ್ಲಿ ಸಂಗ್ರಹವಾಗುವ ನೀರಿನಿಂದ ಈಡಿಸ್ ಜಾತಿಯ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಆ ಸೊಳ್ಳೆಗಳ ಕಡಿತದಿಂದ ಡೆಂಗಿ ಜ್ವರ ಬರುತ್ತದೆ. ಅಕಾಲಿಕ ಮಳೆಯಿಂದ ಈ ಜ್ವರ ಕೆಲವರಲ್ಲಿ ಕಾಣಿಸಿಕೊಳ್ಳುತ್ತಿದೆ. ಸ್ವಚ್ಛತೆ ಸೇರಿದಂತೆ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

'ದೆಹಲಿ: ಒತ್ತುವರಿ ತೆರವು– 63 ಲಕ್ಷ ಮಂದಿ ಬೀದಿಗೆ'

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಬಿಜೆಪಿ ನೇತೃತ್ವದ ಮಹಾನಗರ ಪಾಲಿಕೆಗಳು ನಡೆಸುತ್ತಿರುವ ಒತ್ತುವರಿ ತೆರವು ಕಾರ್ಯಾಚರಣೆಯಿಂದ 63 ಲಕ್ಷ ಜನರು ಮನೆ ಕಳೆದುಕೊಂಡು ಬೀದಿಗೆ ಬೀಳಲಿದ್ದಾರೆ. ಇದು ಸ್ವತಂತ್ರ ಭಾರತದ ಅತಿ ದೊಡ್ಡ ವಿಚ್ಛಿದ್ರಕಾರಕ ಕಾರ್ಯಾಚರಣೆಯಾಗಲಿದೆ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದರು.

ದೆಹಲಿಯ ಹಲವೆಡೆ ನಡೆಯುತ್ತಿರುವ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಬಿಜೆಪಿಯ 'ಬುಲ್ಡೋಜರ್ ರಾಜಕೀಯ' ಎಂದಿರುವ ಆಮ್ ಆದ್ಮಿ ಪಕ್ಷ, ಆ ಕುರಿತು ಸೋಮವಾರ ವರ್ಚುಯಲ್ ಆಗಿ ಶಾಸಕರ ಸಭೆ ನಡೆಸಿತು. ಇಲ್ಲಿ ಬಿಜೆಪಿ ವಿರುದ್ಧ ಟೀಕಾ ಪ್ರಹಾರ ನಡೆಸಿದ ಅರವಿಂದ ಕೇಜ್ರಿವಾಲ್, ಒತ್ತುವರಿ ಕಾರ್ಯಾಚರಣೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಬಿಜೆಪಿ ಅಧಿಕಾರ ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು.

'ದೆಹಲಿ ನಗರವು ಯೋಜನಾ ಬದ್ಧವಾಗಿ ಅಭಿವೃದ್ಧಿಯಾಗಿಲ್ಲ. ಇಲ್ಲಿ ಶೇ 80ಕ್ಕೂ ಹೆಚ್ಚು ಪ್ರದೇಶವನ್ನು ಅಕ್ರಮ ಮತ್ತು ಒತ್ತುವರಿ ಎಂದು ಕರೆಯಬಹುದು. ಹಾಗಾದರೆ ಇದೆಲ್ಲವನ್ನು ಕೆಡವಿ ಹಾಕುವಿರಾ?' ಎಂದು ಪ್ರಶ್ನಿಸಿದರು. 'ಬುಲ್ಡೋಜರ್‌ನಿಂದ 63 ಲಕ್ಷ ಜನರ ಮನೆ, ಮಳಿಗೆಗಳನ್ನು ಧ್ವಂಸಗೊಳಿಸಿ, ಅವರ ನಿತ್ಯದ ಬದುಕನ್ನು ಹಾಳು ಮಾಡಬೇಡಿ. ಇದನ್ನು ಯಾರೂ ಸಹಿಸಲಾರರು' ಎಂದರು. ಬಿಜೆಪಿ ನೇತೃತ್ವದ ಪಾಲಿಕೆಯ ಅಧಿಕಾರ ಅವಧಿ ಇನ್ನೆರಡು ದಿನದಲ್ಲಿ ಕೊನೆಗೊಳ್ಳಲಿದೆ. ಇಂಥ ಸಂದರ್ಭದಲ್ಲಿ ಇದು ಸರಿಯೇ ಎಂದು ಪ್ರಶ್ನಿಸಿದರು.

ಮಿಚೆಲ್ ಮಾರ್ಷ್ ಅರ್ಧಶತಕದ ರಂಗು; ಶಾರ್ದೂಲ್ ಠಾಕೂರ್ ಪರಿಣಾಮಕಾರಿ ದಾಳಿ

ಪಂಜಾಬ್ ಕನಸಿಗೆ ಕ್ಯಾಪಿಟಲ್ಸ್ ಅಡ್ಡಿ

ಮುಂಬೈ (ಪಿಟಿಐ): ಸಾಧಾರಣ ಮೊತ್ತದ ಗುರಿ ಬೆನ್ನತ್ತಿದರೂ ದಡ ಸೇರದ ಪಂಜಾಬ್ ಕಿಂಗ್ಸ್ ನಿರಾಸೆಗೆ ಒಳಗಾಯಿತು. ಮಿಚೆಲ್ ಮಾರ್ಷ್ ಅವರ ಹೋರಾಟದ ಅರ್ಧಶತಕ ಮತ್ತು ಐಪಿಎಲ್‌ನಲ್ಲಿ ವೈಯಕ್ತಿಕ ಶ್ರೇಷ್ಠ ಪ್ರದರ್ಶನ ನೀಡಿದ ಶಾರ್ದೂಲ್ ಠಾಕೂರ್ ಅವರ ಪರಿಣಾಮಕಾರಿ ಬೌಲಿಂಗ್‌ನಿಂದಾಗಿ ಡೆಲ್ಲಿ ಕ್ಯಾಪಿಟಲ್ಸ್ ಭರ್ಜರಿ ಜಯ ಸಾಧಿಸಿತು.

ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಡೆಲ್ಲಿ 17 ರನ್‌ಗಳಿಂದ ಗೆದ್ದು ಪ್ಲೇ ಆಫ್ ಆಸೆ ಜೀವಂತವಾಗಿರಿಸಿಕೊಂಡಿತು. ಪಂಜಾಬ್ ಹಾದಿ ಕಠಿಣವಾಯಿತು.

160 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಂಜಾಬ್ ತಂಡ ಶಾರ್ದೂಲ್ ಠಾಕೂರ್ ಅವರ ವೇಗ ಮತ್ತು ಅಕ್ಷರ್ ಪಟೇಲ್, ಕುಲದೀಪ್ ಯಾದವ್ ಜೋಡಿಯ ಸ್ಪಿನ್ ದಾಳಿಗೆ ನಲುಗಿತು. ಆರಂಭಿಕ ಬ್ಯಾಟರ್ ಜಾನಿ ಬೆಸ್ಟೊ, ವಿಕೆಟ್ ಕೀಪರ್ ಜಿತೇಶ್ ಶರ್ಮಾ ಮತ್ತು 9ನೇ ಕ್ರಮಾಂಕದ ರಾಹುಲ್ ಚಾಹರ್ ಮಾತ್ರ ಸ್ವಲ್ಪ ಪ್ರತಿರೋಧ ಒಡ್ಡಿದರು. ಶೂನ್ಯಕ್ಕೆ ಔಟಾದ ನಾಯಕ ಮಯಂಕ್ ಅಗರವಾಲ್ ಸೇರಿದಂತೆ 7 ಮಂದಿಗೆ ಎರಡಂಕಿ ಮೊತ್ತ ದಾಟಲು ಆಗಲಿಲ್ಲ.

ಮಧ್ಯಮ ಕ್ರಮಾಂಕದ ಕುಸಿತ; ಮಾರ್ಷ್ ಆಸರೆ: ಟಾಸ್ ಗೆದ್ದ ಪಂಜಾಬ್ ಕಿಂಗ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಧ್ಯಮ ಕ್ರಮಾಂಕದ ದಿಢೀರ್ ಕುಸಿತದ ನಡುವೆಯೂ ಮೋಹಕ ಬ್ಯಾಟಿಂಗ್ ಪ್ರದರ್ಶಿಸಿದ ಮಿಚೆಲ್ ಮಾರ್ಷ್, ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 159 ರನ್ ಕಲೆಹಾಕಲು ನೆರವಾದರು.

ಮಿಚೆಲ್ ಮಾರ್ಷ್ ಅವರ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಇನಿಂಗ್ಸ್‌ನ ಮೊದಲ ಎಸೆತದಲ್ಲೇ ಸ್ಫೋಟಕ ಬ್ಯಾಟರ್ ಡೇವಿಡ್ ವಾರ್ನರ್ ಅವರನ್ನು ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿದ್ದ ರಾಹುಲ್ ಚಾಹರ್ ಅವರ ಮುಷ್ಠಿಯೊಳಗೆ ತಲುಪಿಸಿ ಲಿಯಾಮ್ ಲಿವಿಂಗ್‌ಸ್ಟೋನ್ ಸಂಭ್ರಮಿಸಿದರು. ಸರ್ಫರಾಜ್ ಖಾನ್ ಮತ್ತು ಮಿಚೆಲ್ ಮಾರ್ಷ್ ಎರಡನೇ ವಿಕೆಟ್‌ಗೆ 51 ರನ್ ಸೇರಿಸಿದರು. ಸರ್ಫರಾಜ್ ಖಾನ್ ವಿಕೆಟ್ ಕಬಳಿಸಿ ಅರ್ಷದೀಪ್ ಸಿಂಗ್ ಪೆಟ್ಟು ನೀಡಿದರು.

ಮಿಚೆಲ್ ಮಾರ್ಷ್ ಮತ್ತು ಲಲಿತ್ ಯಾದವ್ ಕೂಡ ಉತ್ತಮ ಆಟವಾಡಿದರು. ಇವರಿಬ್ಬರ ಜೊತೆಯಾಟದಲ್ಲಿ 47 ರನ್‌ಗಳು ಹರಿದುಬಂದವು. ಲಲಿತ್ ಔಟಾದ ನಂತರ ತಂಡ ದಿಢೀರ್ ಪತನ ಕಂಡಿತು. 19ನೇ ಓವರ್‌ನಲ್ಲಿ ಮಿಚೆಲ್ ಕೂಡ ಔಟಾದರು. ಅಂತಿಮ ಓವರ್‌ಗಳಲ್ಲಿ ನಿರೀಕ್ಷಿತ ರನ್‌ಗಳು ಬರಲಿಲ್ಲ.

ಇಂದಿನ ಪಂದ್ಯ: ಮುಂಬೈ ಇಂಡಿಯನ್ಸ್–ಸನ್‌ರೈಸರ್ಸ್ ಹೈದರಾಬಾದ್. ಆರಂಭ: ರಾತ್ರಿ 7.30
ಸ್ಥಳ: ವಾಂಖೆಡೆ ಕ್ರೀಡಾಂಗಣ, ಮುಂಬೈ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 7ಕ್ಕೆ 159 (20 ಓವರ್)
ವಾರ್ನರ್ ಸಿ ಚಾಹರ್ ಬಿ ಲಿವಿಂಗ್‌ಸ್ಟೋನ್ 0 (1 ಎ), ಸರ್ಫರಾಜ್ ಸಿ ಚಾಹರ್ ಬಿ ಅರ್ಷದೀಪ್ 32 (16 ಎ, 4x5, 6x1), ಮಿಚೆಲ್ ಸಿ ರಿಷಿ ಬಿ ರಬಾಡ 63 (48 ಎ, 4x4, 6x3), ಲಲಿತ್ ಸಿ ರಾಜಪಕ್ಸ ಬಿ ಅರ್ಷದೀಪ್ 24 (21 ಎ, 4x1, 6x1), ರಿಷಭ್ ಸ್ಟಂಪ್ಡ್ ಶರ್ಮಾ ಬಿ ಲಿವಿಂಗ್‌ಸ್ಟೋನ್ 7 (3 ಎ, 6x1), ರೋವ್ಮನ್ ಸಿ ಶಿಖರ್ ಬಿ ಲಿವಿಂಗ್‌ಸ್ಟೋನ್ 2 (6 ಎ), ಅಕ್ಷರ್ ಔಟಾಗದೆ 17 (20 ಎ, 6x2), ಶಾರ್ದೂಲ್ ಸಿ ಹರಪ್ರೀತ್ ಬಿ ಅರ್ಷದೀಪ್ 3 (4 ಎ), ಕುಲದೀಪ್ ಔಟಾಗದೆ 2 (2 ಎ)
ಇತರೆ (ಲೆಗ್‌ಬೈ 6, ನೋಬಾಲ್ 1, ವೈಡ್ 2) 9
ವಿಕೆಟ್ ಪತನ: 1-0 (ಡೇವಿಡ್ ವಾರ್ನರ್, 0.1), 2-51 (ಸರ್ಫರಾಜ್ ಖಾನ್, 4.5), 3-98 (ಲಲಿತ್ ಯಾದವ್, 10.6), 4-107 (ರಿಷಭ್ ಪಂತ್, 11.6), 5-112 (ರೋವ್ಮನ್ ಪೊವೆಲ್, 13.3), 6-149 (ಮಿಚೆಲ್ ಮಾರ್ಷ್, 18.2), 7-154 (ಶಾರ್ದೂಲ್ ಠಾಕೂರ, 19.3)
ಬೌಲಿಂಗ್: ಲಿಯಾಮ್ ಲಿವಿಂಗ್‌ಸ್ಟೋನ್ 4–0–27–3, ಕಗಿಸೊ ರಬಾಡ 3–0–24–1, ಹರಪ್ರೀತ್ ಸಿಂಗ್ ಬ್ರಾರ್ 3–0–29–0, ರಿಷಿ ಧವನ್ 2–0–17–0, ಅರ್ಷದೀಪ್ ಸಿಂಗ್ 4–0–37–3, ರಾಹುಲ್ ಚಾಹರ್ 4–0–19–0

ಪಂಜಾಬ್ ಕಿಂಗ್ಸ್ 9ಕ್ಕೆ 142 (20 ಓವರ್)
ಬೆಸ್ಟೊ ಸಿ ಅಕ್ಷರ್ ಬಿ ನಾರ್ಕಿಯ 28 (15 ಎ, 4x4, 6x1), ಶಿಖರ್ ಸಿ ಪಂತ್ ಬಿ ಶಾರ್ದೂಲ್ 19 (16 ಎ, 4x3), ರಾಜಪಕ್ಸ ಸಿ ನಾರ್ಕಿಯ ಬಿ ಶಾರ್ದೂಲ್ 4 (5 ಎ, 4x1), ಲಿಯಾಮ್ ಸ್ಟಂಪ್ಡ್ ಪಂತ್ ಬಿ ಕುಲದೀಪ್ 3 (5 ಎ), ಮಯಂಕ್ ಬಿ ಅಕ್ಷರ್ 0 (2 ಎ), ಜಿತೇಶ್ ಸಿ ವಾರ್ನರ್ ಬಿ ಶಾರ್ದೂಲ್ 44 (34 ಎ, 4x3, 6x2), ಹರಪ್ರೀತ್ ಬಿ ಕುಲದೀಪ್ 1 (2 ಎ), ರಿಷಿ ಬಿ ಅಕ್ಷರ್ 4 (13 ಎ), ರಾಹುಲ್ ಔಟಾಗದೆ 25 (24 ಎ, 4x2, 6x1), ಕಗಿಸೊ ಸಿ ಪೊವೆಲ್ ಬಿ ಶಾರ್ದೂಲ್ 6 (2 ಎ, 6x1), ಅರ್ಷದೀಪ್ ಔಟಾಗದೆ 2 (3 ಎ))
ಇತರೆ (ನೋಬಾಲ್ 1, ವೈಡ್ 5) 6
ವಿಕೆಟ್ ಪತನ: 1-38 (ಜಾನಿ ಬೆಸ್ಟೊ, 3.5), 2-53 (ಭಾನುಕ ರಾಜಪಕ್ಸ, 5.4), 3-54 (ಶಿಖರ್ ಧವನ್, 5.6), 4-55 (ಮಯಂಕ್ ಅಗರವಾಲ್, 6.3), 5-61 (ಲಿಯಾಮ್ ಲಿವಿಂಗ್‌ಸ್ಟೋನ್, 7.6), 6-67 (ಹರಪ್ರೀತ್ ಬ್ರಾರ್, 9.3), 7-82 (ರಿಷಿ ಧವನ್, 12.4), 8-123 (ಜಿತೇಶ್ ಶರ್ಮಾ, 17.4), 9-131 (ಕಗಿಸೊ ರಬಾಡ, 17.6)
ಬೌಲಿಂಗ್: ಖಲೀಲ್ 4–0–43–0, ಆ್ಯನ್ರಿಚ್ ನಾರ್ಕಿಯ 4–0–29–1, ಲಲಿತ್ 1–0–6–0, ಶಾರ್ದೂಲ್ ಠಾಕೂರ್ 4–0–36–4, ಅಕ್ಷರ್ ಪಟೇಲ್ 4–0–14–2, ಕುಲದೀಪ್ 3–0–14–2

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 17 ರನ್‌ಗಳ ಜಯ

ಮರಳಿ ಬಂದ ಹೆಟ್ಮೆಯರ್: ಮೊದಲ ಮಗುವಿನ ಜನನದ ಸಂಭ್ರಮದಲ್ಲಿ ಪಾಲ್ಗೊಳ್ಳಲು ತಾಯ್ನಾಡಿಗೆ ಮರಳಿದ್ದ ರಾಜಸ್ಥಾನ ರಾಯಲ್ಸ್ ಬ್ಯಾಟರ್ ವೆಸ್ಟ್ ಇಂಡೀಸ್‌ನ ಶಿಮ್ರೊನ್ ಹೆಟ್ಮೆಯರ್ ಮರಳಿ ಬಂದಿದ್ದು ತಂಡವನ್ನು ಸೇರಿಕೊಂಡಿದ್ದಾರೆ. ಇದೇ ಶುಕ್ರವಾರ ಚೆನ್ನೈ ಸೂಪರ್ ಕಿಂಗ್ಸ್ ಎದುರು ನಡೆಯಲಿರುವ ಲೀಗ್ ಹಂತದ ತನ್ನ ಕೊನೆಯ ಪಂದ್ಯಕ್ಕೆ ಅವರು ಲಭ್ಯ ಇರುವರು.

ಪಾಯಿಂಟ್ ಪಟ್ಟಿ							
ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	13	10	3	0	0	20	0.391
ರಾಜಸ್ಥಾನ	13	8	5	0	0	16	0.304
ಲಖನೌ	13	8	5	0	0	16	0.262
ಡೆಲ್ಲಿ	13	7	6	0	0	14	0.255
ಬೆಂಗಳೂರು	13	7	6	0	0	14	-0.323
ಕೋಲ್ಕತ್ತ	13	6	7	0	0	12	0.160
ಪಂಜಾಬ್	13	6	7	0	0	12	-0.043
ಹೈದರಾಬಾದ್	12	5	7	0	0	10	-0.270
ಚೆನ್ನೈ	13	4	9	0	0	8	-0.206
ಮುಂಬೈ	12	3	9	0	0	6	-0.613

*ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	627
ರಾಹುಲ್	ಲಖನೌ	469
ವಾರ್ನರ್	ಡೆಲ್ಲಿ	427

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	24
ಹಸರಂಗ	ಬೆಂಗಳೂರು	23
ಕಗಿಸೊ	ಪಂಜಾಬ್	22

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

370ನೇ ವಾರ ಅಗ್ರಸ್ಥಾನದಲ್ಲಿ ನೊವಾಕ್

ಎಟಿಪಿ ಟೆನಿಸ್ ರ್‍ಯಾಂಕಿಂಗ್: 5ನೇ ಸ್ಥಾನಕ್ಕೆ ಕುಸಿದ ನಡಾಲ್

ಪ್ಯಾರಿಸ್ (ಎಎಫ್‌ಪಿ): ವಿಶ್ವ ಟೆನಿಸ್‌ನ ಪುರುಷರ ವಿಭಾಗದ ರ್‍ಯಾಂಕಿಂಗ್‌ನಲ್ಲಿ 370ನೇ ವಾರವೂ ಅಗ್ರಸ್ಥಾನದಲ್ಲಿ ಮುಂದುವರಿದಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ದಾಖಲೆಯನ್ನು ಇನ್ನಷ್ಟು ವಿಸ್ತರಿಸಿದ್ದಾರೆ. ಸ್ಪೇನ್‌ನ ರಫೆಲ್ ನಡಾಲ್ ಅವರು ಒಂದು ಸ್ಥಾನದ ಕುಸಿತದೊಂದಿಗೆ ಐದನೇ ಸ್ಥಾನಕ್ಕೆ ಇಳಿದಿದ್ದಾರೆ.

ಭಾನುವಾರ ಕೊನೆಗೊಂಡ ಇಟಾಲಿಯನ್ ಓಪನ್ ಟೂರ್ನಿಯಲ್ಲಿ ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ ಅವರನ್ನು ಮಣಿಸಿ ಜೊಕೊವಿಚ್ ಪ್ರಶಸ್ತಿ ಗೆದ್ದುಕೊಂಡಿದ್ದರು. ರಫೆಲ್ ನಡಾಲ್ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಡೆನಿಸ್ ಶಪೊವಲೊವ್‌ಗೆ ಮಣಿದಿದ್ದರು. ಫೈನಲ್‌ನಲ್ಲಿ ಜಯ ಗಳಿಸುವುದರೊಂದಿಗೆ ಜೊಕೊವಿಚ್ ಆರನೇ ಬಾರಿ ಇಟಾಲಿಯನ್ ಓಪನ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ಇದು, ರ್‍ಯಾಂಕಿಂಗ್ ಪಟ್ಟಿಯಲ್ಲಿ ಅವರು ಅಗ್ರಸ್ಥಾನದಲ್ಲೇ ಉಳಿಯುವಂತೆ ಮಾಡಿತು.ಅತಿಹೆಚ್ಚು ವಾರ ಸತತವಾಗಿ ಮೊದಲ ಸ್ಥಾನದಲ್ಲಿ ಮುಂದುವರಿದವರ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ರೋಜರ್ ಫೆಡರರ್ ಅವರಿಗೂ ಜೊಕೊವಿಚ್‌ಗೂ ನಡುವೆ ಈಗ 60 ವಾರಗಳ ಅಂತರವಿದೆ.ಮುಂದಿನ ಭಾನುವಾರ ಫ್ರೆಂಚ್ ಓಪನ್ ಆರಂಭವಾಗಲಿದ್ದು ಅಗ್ರ ಶ್ರೇಯಾಂಕ ಜೊಕೊವಿಚ್ ಪಾಲಾಗುವುದು ಖಚಿತವಾಗಿದೆ.

ಎಟಿಪಿ ರ್‍ಯಾಂಕಿಂಗ್‌ನಲ್ಲಿ ಅಗ್ರ 10 ಸ್ಥಾನ

ರ್‍ಯಾಂಕಿಂಗ್	ಆಟಗಾರ	ದೇಶ	ಪಾಯಿಂಟ್ಸ್
1	ನೊವಾಕ್ ಜೊಕೊವಿಚ್	ಸರ್ಬಿಯಾ	8,660
2	ಡ್ಯಾನಿಯಲ್ ಮೆಡ್ವೆಡೆವ್	ರಷ್ಯಾ	7,990
3	ಅಲೆಕ್ಸಾಂಡರ್ ಜ್ವೆರೆವ್	ಜರ್ಮನಿ	7,200
4	ಸ್ಟೆಫನೊಸ್ ಸಿಟ್ಸಿಪಾಸ್	ಗ್ರೀಸ್	6,170
5	ರಫೆಲ್ ನಡಾಲ್	ಸ್ಪೇನ್	5,525
6	ಕಾರ್ಲೋಸ್ ಅಲ್ಕರಾಜ್	ಸ್ಪೇನ್	4,770
7	ಆ್ಯಂಡ್ರೆ ರುಬ್ಲೆವ್	ರಷ್ಯಾ	3,945
8	ಕಾಸ್ಪರ್ ರೂಡ್	ನಾರ್ವೆ	3,940
9	ಫೆಲಿಕ್ಸ್ ಅಲಿಯಾಸಿಮ್	ಕೆನಡಾ	3,850
10	ಮಟಿಯೊ ಬೆರೆಟಿನಿ	ಇಟಲಿ	3,805

ಇಟಾಲಿಯನ್ ಓಪನ್ ಟೂರ್ನಿಯ ಪ್ರಶಸ್ತಿಯೊಂದಿಗೆ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ಹಾಕಿ: ಕರ್ನಾಟಕ – ಒಡಿಶಾ ಫೈನಲ್ ಹಣಾಹಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮತ್ತು ಹರಿಯಾಣ ತಂಡಗಳು ಹಾಕಿ ಇಂಡಿಯಾ ಆಯೋಜಿಸಿರುವ ಮಹಿಳೆಯರ ರಾಷ್ಟ್ರೀಯ ಟೂರ್ನಿಯ ಪ್ರಶಸ್ತಿಗಾಗಿ ಸೆಣಸಲಿವೆ. ಫೈನಲ್ ಪಂದ್ಯ ಮಂಗಳವಾರ ನಡೆಯಲಿದೆ.

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋಮವಾರ 2–0ಯಿಂದ ಕರ್ನಾಟಕ ತಂಡ ಹರಿಯಾಣವನ್ನು ಮಣಿಸಿತು.

ನಿಶಾ

ಮತ್ತೊಂದು ಸೆಮಿಫೈನಲ್‌ನಲ್ಲಿ ಒಡಿಶಾ ತಂಡ ಜಾರ್ಖಂಡ್ ಎದುರು 5–0ಯಿಂದ ಗೆಲುವು ಸಾಧಿಸಿತು.ಹರಿಯಾಣ ಎದುರಿನ ಪಂದ್ಯದ 34ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದ ನಿಶಾ ಅವರು ಕರ್ನಾಟಕಕ್ಕೆ ಮುನ್ನಡೆ ಗಳಿಸಿಕೊಟ್ಟರು.

ಪೂಜಿತಾ

ಕೊನೆಯ ಕ್ವಾರ್ಟರ್‌ನಲ್ಲಿ ಬಿ.ಎನ್.ಪೂಜಿತಾ ಮಿಂಚಿದರು. 53ನೇ ನಿಮಿಷದಲ್ಲಿ ಅವರು ಗಳಿಸಿದ ಗೋಲು ತಂಡದ ಮುನ್ನಡೆಯನ್ನು ಹೆಚ್ಚಿಸಿತು. ಗೆಲುವು ಖಚಿತಮಾಡಿಕೊಂಡ ತಂಡ ನಂತರ ರಕ್ಷಣೆಗೆ ಒತ್ತು ನೀಡಿ ಗೋಲು ಬಿಟ್ಟುಕೊಡದೆ ಎದುರಾಳಿಗಳನ್ನು ಕಟ್ಟಿಹಾಕಿತು.

ಎರಡನೇ ಸೆಮಿಫೈನಲ್‌ನಲ್ಲಿ ಒಡಿಶಾ ಪರವಾಗಿ ರೋಜಿತಾ ಕುಜೂರ್ (21, 36, 48ನೇ ನಿಮಿಷ) ಹ್ಯಾಟ್ರಿಕ್ ಸಾಧನೆಯೊಂದಿಗೆ ಮಿಂಚಿದರು. ಜನಾಬಿ ಪ್ರಧಾನ್ (35ನೇ ನಿ) ಮತ್ತು ಭಾರತಿ ಎಕ್ಕಾ (60ನೇ ನಿ) ಉಳಿದೆರಡು ಗೋಲು ಗಳಿಸಿದರು.

ಎರಡೂ ತಂಡಗಳು ಶೂಟೌಟ್‌ನಲ್ಲಿ ಗೆದ್ದು ಸೆಮಿಫೈನಲ್ ಪ್ರವೇಶಿಸಿದ್ದವು. ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ 5–4ರಲ್ಲಿ ಪಂಜಾಬ್ ವಿರುದ್ಧ ಜಯ ಗಳಿಸಿಸಿತ್ತು.

ಫೈನಲ್ ಪಂದ್ಯ: ಆರಂಭ: ಸಂಜೆ 4.00 ಸ್ಥಳ: ಭೋಪಾಲ್

ಕ್ರಿಕೆಟ್: ದ್ವಿಶತಕ ವಂಚಿತ ಮ್ಯಾಥ್ಯೂಸ್

ಚಿತ್ತಗಾಂಗ್, ಬಾಂಗ್ಲಾದೇಶ (ಎಎಫ್‌ಪಿ): ಒಂದು ರನ್‌ನಿಂದ ದ್ವಿಶತಕ ತಪ್ಪಿಸಿಕೊಂಡ ಆಲ್‌ರೌಂಡರ್ ಏಂಜೆಲೊ ಮ್ಯಾಥ್ಯೂಸ್ ಬ್ಯಾಟಿಂಗ್ ಬಲದಿಂದ ಶ್ರೀಲಂಕಾ ಉತ್ತಮ ಮೊತ್ತ ಗಳಿಸಿತು.ಇಲ್ಲಿ ನಡೆಯುತ್ತಿರುವ ಬಾಂಗ್ಲಾದೇಶ ಎದುರಿನ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶ್ರೀಲಂಕಾ 397 ರನ್‌ಗಳಿಗೆ ಆಲೌಟಾಯಿತು.

ಮ್ಯಾಥ್ಯೂಸ್

ಎರಡನೇ ದಿನವಾದ ಸೋಮವಾರದ ಅಂತ್ಯಕ್ಕೆ ಆತಿಥೇಯರು ವಿಕೆಟ್ ಕಳೆದುಕೊಳ್ಳದೆ 76 ರನ್ ಗಳಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 153 ಓವರ್‌ಗಳಲ್ಲಿ 397 (ಒಶಾಡೊ ಫರ್ನಾಂಡೊ 36, ಕುಶಾಲ್ ಮೆಂಡಿಸ್ 54, ಏಂಜೆಲೊ ಮ್ಯಾಥ್ಯೂಸ್ 199, ದಿನೇಶ್ ಚಾಂದಿಮಲ್ 66; ನಯೀಮ್ ಹಸನ್ 105ಕ್ಕೆ6, ತೈಜುಲ್ ಇಸ್ಲಾಂ 107ಕ್ಕೆ1, ಶಕೀಬ್ ಅಲ್ ಹಸನ್ 60ಕ್ಕೆ3); ಬಾಂಗ್ಲಾದೇಶ: 19 ಓವರ್‌ಗಳಲ್ಲಿ 76 (ಮಹಮ್ಮದುಲ್ ಹಸನ್ ಜಾಯ್ 31, ತಮೀಮ್ ಇಕ್ಬಾಲ್ 35).

ಬೌದ್ಧ ಧರ್ಮ ಅಂತರರಾಷ್ಟ್ರೀಯ ಕೇಂದ್ರ ನಿರ್ಮಾಣಕ್ಕೆ ಶಂಕುಸ್ಥಾಪನೆ

ಲುಂಬಿನಿ, ನೇಪಾಳ (ಪಿಟಿಐ): ಬೌದ್ಧರ ಪ್ರಮುಖ ಧಾರ್ಮಿಕ ಕೇಂದ್ರವಾದ ಇಲ್ಲಿನ ಲುಂಬಿನಿ ವಲಯದಲ್ಲಿ ನಿರ್ಮಾಣವಾಗಲಿರುವ ಅತ್ಯಾಧುನಿಕ ‘ಅಂತರರಾಷ್ಟ್ರೀಯ ಬೌದ್ಧ ಧರ್ಮ ಮತ್ತು ಪರಂಪರೆಯ ಭಾರತೀಯ ಕೇಂದ್ರ’ಕ್ಕೆ ಸೋಮವಾರ ಶಂಕುಸ್ಥಾಪನೆ ನೆರವೇರಿಸಲಾಯಿತು.

ಬೌದ್ಧ ಧರ್ಮದ ಸಂಪ್ರದಾಯಗಳಾದ ತೆರವಾಡ, ಮಹಾಯಾನ, ವಜ್ರಯಾನ ಪ್ರತಿನಿಧಿಸುವ ಸನ್ಯಾಸಿಗಳು ಶಿಲಾನ್ಯಾಸ ನೆರವೇರಿಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿ, ನೇಪಾಳ ಪ್ರಧಾನಿ ಶೇರ್ ಬಹಾದ್ದೂರ್ ದೇವುಬಾ ಜಂಟಿಯಾಗಿ ಕೇಂದ್ರದ ಮಾದರಿ ಅನಾವರಣಗೊಳಿಸಿದರು.

ಉದ್ದೇಶಿತ ಕೇಂದ್ರದ ನಿರ್ಮಾಣ ಪೂರ್ಣಗೊಂಡ ಬಳಿಕ ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಪ್ರವಾಸಿಗರನ್ನು ಸೆಳೆಯುವ ವಿಶ್ವದರ್ಜೆ ಗುಣಮಟ್ಟದ, ಅಂತರರಾಷ್ಟ್ರೀಯ ಕೇಂದ್ರವಾಗಿ ಇದು ಗಮನಸೆಳೆಯಲಿದೆ.

‘ಈ ಕೇಂದ್ರ ಆಧುನಿಕ ಶೈಲಿಯದ್ದಾಗಿರಲಿದೆ. ಇಂಧನ, ನೀರು, ತ್ಯಾಜ್ಯ ನಿರ್ವಹಣೆ ಸೌಲಭ್ಯ ಇರಲಿದೆ. ಪ್ರಾರ್ಥನಾಲಯ, ಧ್ಯಾನ ಮಂದಿರ, ಗ್ರಂಥಾಲಯ, ಪ್ರದರ್ಶನ ಸಭಾಂಗಣ, ಉಪಾಹಾರ ಕೇಂದ್ರ, ಕಚೇರಿ ಹೊಂದಿರಲಿದೆ’ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆ ನೀಡಿದೆ.

ನವದೆಹಲಿಯ ಅಂತರರಾಷ್ಟ್ರೀಯ ಬೌದ್ಧ ಕೇಂದ್ರ (ಐಬಿಸಿ) ಕೇಂದ್ರವನ್ನು ನಿರ್ಮಿಸಲಿದ್ದು, ಲುಂಬಿನಿ ಡೆವಲಪ್‌ಮೆಂಟ್ ಟ್ರಸ್ಟ್ (ಎಲ್‌ಡಿಟಿ) ಅಗತ್ಯ ನಿವೇಶನವನ್ನು ಒದಗಿಸಿದೆ.

ಬುದ್ಧ ಪೂರ್ಣಿಮೆ ದಿನವಾದ ಸೋಮವಾರ ನೇಪಾಳದ ಪ್ರಧಾನಿಯ ಆಹ್ವಾನದ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿಗೆ ಭೇಟಿ ನೀಡಿದ್ದರು. ಮಾತುಕತೆಗೆ ಮೊದಲು ಇಲ್ಲಿನ ಹೆಸರಾಂತ ಮಾಯಾದೇವಿ ದೇವಸ್ಥಾನಕ್ಕೆ ತೆರಳಿದ ಅವರು ಪ್ರಾರ್ಥನೆ ಸಲ್ಲಿಸಿದರು.

ವಿದ್ಯುತ್ ಉತ್ಪಾದನೆ: 695 ಮೆಗಾವಾಟ್ ಸಾಮರ್ಥ್ಯದ ಜಲವಿದ್ಯುತ್ ಸ್ಥಾವರವನ್ನು ಅಭಿವೃದ್ಧಿಪಡಿಸಲು ಉಭಯದ ದೇಶಗಳು ಸಮ್ಮತಿಸಿವೆ. ನೇಪಾಳದೊಂದಿಗೆ ವಿದ್ಯುತ್ ವ್ಯಾಪಾರ ವಹಿವಾಟು ಹೊಂದಿರುವ ಭಾರತವು, ಸ್ಥಾವರ ಸ್ಥಾಪನೆಗಾಗಿ ಬಂಡವಾಳ ಹೂಡಿಕೆ ಮಾಡಲಿದೆ.

ನೇಪಾಳದ ಪೂರ್ವದಲ್ಲಿನ ಅರುಣ ನದಿಗೆ ಅಡ್ಡಲಾಗಿ ಅರುಣ್–4 ಯೋಜನೆಯನ್ನು ಭಾರತದ ಸತ್ಲುಜ್ ಜಲ್‌ವಿದ್ಯುತ್ ನಿಗಮ (ಎಸ್‌ಜೆವಿಎನ್) ಕಾರ್ಯಗತಗೊಳಿಸಲಿದೆ. ಎಸ್‌ಜೆವಿಎನ್ ಮತ್ತು ನೇಪಾಳ ವಿದ್ಯುತ್ ಪ್ರಾಧಿಕಾರ ಕ್ರಮವಾಗಿ ಶೇ 51, ಶೇ 49ರಷ್ಟು ಹೂಡಿಕೆ ಮಾಡಲಿವೆ.

ನೇಪಾಳದ ಲುಂಬಿನಿಯಲ್ಲಿ ನಿರ್ಮಾಣವಾಗಲಿರುವ ‘ಅಂತರರಾಷ್ಟ್ರೀಯ ಬೌದ್ಧ ಧರ್ಮ ಮತ್ತು ಪರಂಪರೆಯ ಭಾರತೀಯ ಕೇಂದ್ರ’ದ ಮಾದರಿಯನ್ನು ನೇಪಾಳ ಪ್ರಧಾನಿ ಶೇರ್ ಬಹಾದ್ದೂರ್ ದೇವುಬಾ ಮತ್ತು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಅನಾವರಣಗೊಳಿಸಿದರು. –ಪಿಟಿಐ ಚಿತ್ರ

6 ದ್ವಿಪಕ್ಷೀಯ ಒಪ್ಪಂದಗಳಿಗೆ ಸಹಿ

ಪ್ರಧಾನಿ ನರೇಂದ್ರ ಮೋದಿ ಮತ್ತು ನೇಪಾಳದ ಪ್ರಧಾನಿ ಶೇರ್ ಬಹಾದ್ದೂರ್ ದೇವುಬಾ ಅವರು ಸೋಮವಾರ ಇಲ್ಲಿ ಉಭಯ ದೇಶಗಳ ದ್ವಿಪಕ್ಷೀಯ ಬಾಂಧವ್ಯ ಕುರಿತು ಮಾತುಕತೆ ನಡೆಸಿದರು. ಲುಂಬಿನಿಯು ಗೌತಮ ಬುದ್ಧ ಅವರ ಜನ್ಮ ಸ್ಥಳವಾಗಿದೆ.

ಮಾತುಕತೆಯ ಬಳಿಕ ಸಂಸ್ಕೃತಿ, ಸಹಕಾರ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿಂತೆ ಉಭಯ ದೇಶಗಳ ಪ್ರತಿನಿಧಿಗಳು ಆರು ಒಡಂಬಡಿಕೆಗಳಿಗೆ ಸಹಿ ಹಾಕಿದರು. 2004ರ ನಂತರ ನೇಪಾಳಕ್ಕೆ ಮೋದಿ ಅವರ 5ನೇ ಭೇಟಿ ಇದಾಗಿದೆ.

‘ಹಿಮಾಲಯದಷ್ಟೇ ಬಾಂಧವ್ಯ ದೃಢ’

ಭಾರತ ಮತ್ತು ನೇಪಾಳ ನಡುವಣ ಬಾಂಧವ್ಯ ಹಿಮಾಲಯ ಪರ್ವತದಷ್ಟೇ ದೃಢವಾದುದು. ಈ ಬಾಂಧವ್ಯವು ಇಡೀ ಮನುಕುಲಕ್ಕೆ ನೆರವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಇಲ್ಲಿ ‘ಅಂತರರಾಷ್ಟ್ರೀಯ ಬೌದ್ಧ ಸಮ್ಮೇಳನ’ ಉದ್ದೇಶಿಸಿ ಮಾತನಾಡಿದ ಅವರು, ‘ಬುದ್ಧನ ಚಿಂತನೆಯೊಂದಿಗೆ ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಉಭಯ ದೇಶಗಳು ಒತ್ತುನೀಡಲಿವೆ’ ಎಂದರು.

ಚೀನಾ ನೆರವಿನ ಏರ್‌ಪೋರ್ಟ್ ಬಳಸದ ಮೋದಿ

ಲುಂಬಿನಿಯಲ್ಲಿ ಚೀನಾ ನೆರವಿನಲ್ಲಿ ಅಭಿವೃದ್ಧಿಪಡಿಸಲಾದ ನೂತನ ವಿಮಾನನಿಲ್ದಾಣ ಸೋಮವಾರವೇ ಉದ್ಘಾಟನೆಗೊಂಡಿದೆ. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು ಈ ನೂತನ ವಿಮಾನ ನಿಲ್ದಾಣ ಬಳಸದೆ, ಭಾರತದ ವಿಮಾನನಿಲ್ದಾಣದಿಂದ ಹೆಲಿಕಾಪ್ಟರ್‌ನಲ್ಲಿ ನೇರವಾಗಿ ಕಾರ್ಯಕ್ರಮದ ಸ್ಥಳಕ್ಕೆ ತಲುಪಿದರು.

ಶ್ರೀಲಂಕಾ: ಸರ್ಕಾರಕ್ಕೆ ಎಸ್‌ಜೆಬಿ ಬೆಂಬಲ

ಕೊಲಂಬೊ (ಪಿಟಿಐ): ಶ್ರೀಲಂಕಾದ ಪ್ರಮುಖ ಪ್ರತಿಪಕ್ಷ ಸಮಗಿ ಜನ ಬಲವೇಗಯ (ಎಸ್‌ಜೆಬಿ), ನೂತನ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ನೇತೃತ್ವದ ಸರ್ವಪಕ್ಷಗಳ ಮಧ್ಯಂತರ ಸರ್ಕಾರಕ್ಕೆ ಷರತ್ತು ಬದ್ಧ ಬೆಂಬಲ ನೀಡಲು ಸೋಮವಾರ ತೀರ್ಮಾನಿಸಿದೆ.

ದೇಶದಲ್ಲಿರುವ ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಜವಾಬ್ದಾರಿಯುತ ರಾಜಕೀಯ ಪಕ್ಷವಾಗಿ ದೇಶದ ರಕ್ಷಣೆಯೇ ಪ್ರಮುಖವಾದುದು ಎಂದು ಪಕ್ಷ ಭಾವಿಸಲಿದೆ ಎಂದು ಎಸ್‌ಜೆಪಿ ಹೇಳಿಕೆ ನೀಡಿದೆ.

ಸರ್ಕಾರದಲ್ಲಿ ಯಾವುದೇ ಖಾತೆ ಪಡೆಯದೇ ಬೇಷರತ್ತಾಗಿ ಪೂರ್ಣ ಬೆಂಬಲ ನೀಡಲಾಗುವುದು ಎಂದು ತಿಳಿಸಿದೆ. ‘ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರಿಗೆ ಜನಾದೇಶ ಇಲ್ಲ. ಅಲ್ಲದೆ, ಅವರದು ಏಕಸದಸ್ಯ ಪಕ್ಷ. ಹೀಗಾಗಿ ಬೆಂಬಲಿಸುವುದಿಲ್ಲ’ ಎಂದು ಪಕ್ಷವು ಈ ಹಿಂದೆ ಹೇಳಿತ್ತು.

ಮಹಿಂದಾ ರಾಜಪಕ್ಸ ರಾಜೀನಾಮೆ ನಂತರ ಪ್ರಧಾನಿಯಾಗಿ ನೇಮಕಗೊಂಡ ರಾನಿಲ್ ವಿಕ್ರಮಸಿಂಘೆ ಅವರು ಎಸ್‌ಜೆಪಿ ನಾಯಕ ಸಾಜಿತ್ ಪ್ರೇಮದಾಸ ಅವರಿಗೆ ಪತ್ರ ಬರೆದಿದ್ದು, ಸರ್ಕಾರದ ಭಾಗವಾಗಲು ಆಹ್ವಾನಿಸಿದ್ದರು.

ದೇಶ ಸದ್ಯ ಎದುರಿಸುತ್ತಿರುವ ಪರಿಸ್ಥಿತಿ ಎಲ್ಲರಿಗೂ ತಿಳಿದಿದೆ. ಇದಕ್ಕೆ ಅಂತ್ಯವಾಡಲು ಎಲ್ಲರೂ ಒಗ್ಗೂಡುವುದು ಅಗತ್ಯ. ಯುವಪೀಳಿಗೆಯ ಭವಿಷ್ಯದ ದೃಷ್ಟಿಯಿಂದ ಎಲ್ಲರಿಗೂ ಚಾರಿತ್ರಿಕ ಹೊಣೆಗಾರಿಕೆ ಇದೆ ಎಂದು ವಿಕ್ರಮಸಿಂಘೆ ಪತ್ರದಲ್ಲಿ ತಿಳಿಸಿದ್ದರು.

‘ಪೆಟ್ರೋಲ್ ದಾಸ್ತಾನು ದಿನಕ್ಕೆ ಸಾಕಾಗಬಹುದು’

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿ ಈಗ ಪೆಟ್ರೋಲ್‌ಗೆ ತೀವ್ರ ಕೊರತೆಯಿದೆ. ಅಗತ್ಯ ಇಂಧನ ಆಮದಿಗೆ ಡಾಲರ್ ಕ್ರೋಡೀಕರಿಸಲು ಆಗುತ್ತಿಲ್ಲ ಎಂದು ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಹೇಳಿದ್ದಾರೆ.

ಪ್ರಧಾನಿಯಾದ ಬಳಿಕ ಮೊದಲ ಬಾರಿಗೆ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಪೆಟ್ರೋಲ್ ಮುಗಿದಿದೆ. ಸದ್ಯ ಇರುವ ದಾಸ್ತಾನು ಒಂದು ದಿನಕ್ಕೆ ಸಾಕಾಗಬಹುದು’ ಎಂದರು. ಈ ಮೂಲಕ ‘ಮುಂದಿನ ದಿನಗಳು ಕ್ಲಿಷ್ಟಕರವಾಗಿವೆ’ ಎಂದು ಎಚ್ಚರಿಸಿದ್ದಾರೆ.

ಆಮದು ಆಗಿರುವ ಇಂಧನ ದಾಸ್ತಾನ ಸದ್ಯ ಬಂದರಿನಲ್ಲಿದೆ. ಅದನ್ನು ಬಿಡಿಸಿಕೊಳ್ಳಲು ಅಗತ್ಯ ಡಾಲರ್ ಕ್ರೋಡೀಕರಿಸಲು ಆಗುತ್ತಿಲ್ಲ’ ಎಂದರು. ‘ಬಿಕ್ಕಟ್ಟಿನಿಂದ ದೇಶ ರಕ್ಷಿಸುವುದೇ ನನ್ನ ಆದ್ಯತೆ. ಒಬ್ಬ ವ್ಯಕ್ತಿ ಅಥವಾ ಕುಟುಂಬದ ರಕ್ಷಣೆಯಲ್ಲ’ ಎಂದಿದ್ದಾರೆ.

ಕೊರ್ಬೆವ್ಯಾಕ್ಸ್: ₹840ರಿಂದ ₹250ಕ್ಕೆ ಇಳಿಕೆ

ನವದೆಹಲಿ (ಪಿಟಿಐ): ಕೋವಿಡ್ ವಿರುದ್ಧ ಖಾಸಗಿ ಲಸಿಕಾ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಕೊರ್ಬೆವ್ಯಾಕ್ಸ್ ಡೋಸ್‌ನ ದರವನ್ನು ₹840ರಿಂದ ₹250ಕ್ಕೆ ಇಳಿಸಿರುವುದಾಗಿ ಔಷಧ ತಯಾರಕ ಸಂಸ್ಥೆ ಬಯಾಲಾಜಿಕಲ್ ಇ ಕಂಪನಿ (ಬಿಇ) ಸೋಮವಾರ ತಿಳಿಸಿದೆ.

ಲಸಿಕೆಯ ಪೂರೈಕೆ ದರವು ₹250ಕ್ಕೆ ಇಳಿದರೂ, ಖಾಸಗಿ ಕೇಂದ್ರಗಳಲ್ಲಿ ತೆರಿಗೆ ಮತ್ತು ಇತರೆ ಆಡಳಿತಾತ್ಮಕ ಶುಲ್ಕ ಸೇರಿ ಒಂದು ಡೋಸ್ ಲಸಿಕೆ ₹400ಕ್ಕೆ ಲಭ್ಯವಾಗಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ಈ ಹಿಂದೆ, ಖಾಸಗಿ ಲಸಿಕೆ ಕೇಂದ್ರಗಳಲ್ಲಿ ಈ ಲಸಿಕೆಯ ದರ ತೆರಿಗೆ, ಶುಲ್ಕ ಸೇರಿ ₹990 ಆಗಿತ್ತು.

ಈ ವರ್ಷ ಮಾರ್ಚ್‌ನಲ್ಲಿ ಕೋವಿಡ್ ವಿರುದ್ಧ 12ರಿಂದ 14 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕುವ ಪ್ರಕ್ರಿಯೆ ಪ್ರಾರಂಭವಾದಾಗ ಕಾರ್ಬೆವಾಕ್ಸ್ ಲಸಿಕೆಯನ್ನು ಬಳಸಲಾಯಿತು. ಸರ್ಕಾರದ ಲಸಿಕೆ ಕಾರ್ಯಕ್ರಮಕ್ಕಾಗಿ ಅದರ ಬೆಲೆಯನ್ನು ₹145ಕ್ಕೆ ನಿಗದಿ ಮಾಡಲಾಗಿತ್ತು.

‘ಕೊರ್ಬೆವ್ಯಾಕ್ಸ್’ ಕೋವಿಡ್ ಲಸಿಕೆಯನ್ನು 5ರಿಂದ 12 ವರ್ಷದ ಮಕ್ಕಳಿಗೆ ಮತ್ತು ಭಾರತ್ ಬಯೋಟೆಕ್‌ನ ‘ಕೋವ್ಯಾಕ್ಸಿನ್’ ಲಸಿಕೆಯನ್ನು 6ರಿಂದ 12 ವರ್ಷದ ಮಕ್ಕಳಿಗೆ ತುರ್ತು ಬಳಕೆ ಅಡಿಯಲ್ಲಿ ನೀಡಲು ಈ ವರ್ಷದ ಏಪ್ರಿಲ್‌ನಲ್ಲಿ ಭಾರತದ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಒಪ್ಪಿಗೆ ನೀಡಿದ್ದಾರೆ.

ಹಾರ್ಕಿವ್ ರಕ್ಷಣೆಗೆ ಕ್ರಮ ಎಂದು ಸೇನೆಯ ಹೇಳಿಕೆ

ಯಶಸ್ವಿ ಪ್ರತಿರೋಧ: ಉಕ್ರೇನ್

ಕೀವ್ (ರಾಯಿಟರ್ಸ್): ‘ಉಕ್ರೇನ್‌ನ ಎರಡನೇ ಅತಿದೊಡ್ಡ ನಗರ ಹಾರ್ಕಿವ್‌ನ ರಕ್ಷಣಾತ್ಮಕ ಕ್ರಮವಾಗಿ ದೇಶದ ಸೇನೆಯು ರಷ್ಯಾದ ಸೇನೆಯನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾಗಿದ್ದು, ರಷ್ಯಾದ ಗಡಿ ಭಾಗವನ್ನು ತಲುಪಿದೆ ಎಂದು ಉಕ್ರೇನ್ ಸೋಮವಾರ ಹೇಳಿದೆ.

ಉಕ್ರೇನ್‌ನ ರಕ್ಷಣಾ ಸಚಿವಾಲಯ ಫೇಸ್‌ಬುಕ್ ಪುಟದಲ್ಲಿ ಈ ಮಾಹಿತಿ ಹಂಚಿಕೊಂಡಿದ್ದು, ಉಕ್ರೇನ್ ಸೇನೆಯ 127ನೇ ಬ್ರಿಗೇಡ್‌ಗೆ ಸೇರಿದ 227ನೇ ತುಕಡಿ ಗಡಿಭಾಗದಲ್ಲಿ ನೆಲೆಯೂರಿದೆ. ರಷ್ಯಾದ ಅತಿಕ್ರಮಣದಿಂದ ಉಕ್ರೇನ್‌ನ ಈ ಭಾಗವು ಮುಕ್ತಗೊಂಡಿದೆ ಎಂದಿದೆ.

ಫೆ. 24ರಂದು ರಷ್ಯಾದ ಅತಿಕ್ರಮಣ ಆರಂಭವಾದ ಬಳಿಕ ಉಕ್ರೇನ್ ಕೂಡ ಪ್ರತಿರೋಧ ತೋರುತ್ತಿದ್ದು, ಸರಣಿ ಯಶಸ್ಸು ಸಾಧಿಸುತ್ತಿದೆ. ರಾಜಧಾನಿ ಕೀವ್ ಅನ್ನು ಪೂರ್ಣವಾಗಿ ರಷ್ಯಾ ಆಕ್ರಮಿಸುವುದನ್ನು ಉಕ್ರೇನ್ ಸೇನೆ ತಡೆದಿದೆ.

ಆದರೆ, ಉಕ್ರೇನ್‌ನ ಎಷ್ಟು ಸೇನಾ ತುಕಡಿಗಳು ರಷ್ಯಾದ ಗಡಿ ತಲುಪಿವೆ ಎಂಬುದು ಖಚಿತವಾಗಿಲ್ಲ. ಇದು ಖಚಿತವಾದರೆ ಇದು ಉಕ್ರೇನ್‌ನ ಪ್ರತಿದಾಳಿಗೆ ದೊರೆತ ಯಶಸ್ಸು ಎನ್ನಬಹುದಾಗಿದೆ.

ಇನ್ನೊಂದೆಡೆ, ರಷ್ಯಾ ಸ್ವಾಧೀನ ಪಡೆದಿರುವ ಇಜಿಯುಂ ನಗರದಲ್ಲಿ ಸಂಘರ್ಷ ಮುಂದುವರಿದಿದೆ. ಉಕ್ರೇನ್‌ನ ನೆಲೆಯ ಮೇಲೆ ಕ್ಷಿಪಣಿದಾಳಿ ನಡೆಸಿದ್ದು, ನಾಶಪಡಿಸಲಾಗಿದೆ ಎಂದು ರಷ್ಯಾ ತಿಳಿಸಿದೆ.

ಅಲ್ಲದೆ, ಲುಹಾನ್ಸ್ಕ್, ಡೊನೆಟ್ಸ್ಕ್‌ನ ವಿವಿಧೆಡೆ ಚಕಮಕಿ ಮುಂದುವರಿದಿದೆ. ನಾಗರಿಕ ವಸತಿ ಪ್ರದೇಶವನ್ನು ಗುರಿಯಾಗಿಸಿ ರಷ್ಯಾ ದಾಳಿ ಮುಂದುವರಿಸಿದೆ ಎಂದು ಉಕ್ರೇನ್‌ನ ಸೇನಾಪಡೆ ತಿಳಿಸಿದೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು, ಮರಿಯುಪೋಲ್ ಮತ್ತು ಅಜೊವ್‌ಸ್ತಾಲ್‌ನಲ್ಲಿ ಉಕ್ರೇನಿಯನ್ನರ ರಕ್ಷಣೆಯ ಕ್ರಮವಾಗಿ ‘ಕ್ಲಿಷ್ಟಕರ ಮತ್ತು ವ್ಯವಸ್ಥಿತ ಸಮಾಲೋಚನೆ’ ನಡೆದಿದೆ ಎಂದು ಹೇಳಿದ್ದಾರೆ.

ಆಸ್ಪತ್ರೆ ಮೇಲೆ ದಾಳಿ, 2 ಸಾವು: ಸೀವಿರೋಡೋನೆಟ್ಸ್ಕ್ ನಗರದಲ್ಲಿ ಆಸ್ಪತ್ರೆ ಮೇಲೆ ರಾತ್ರಿ ವಾಯುದಾಳಿ ನಡೆದಿದೆ. ಇಬ್ಬರು ಮೃತಪಟ್ಟಿದ್ದು, ಇತರೆ 9 ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್‌ನ ಪೂರ್ವ ಲುಹಾನ್ಸ್ಕ್ ವಲಯದ ಸೇನಾ ಕಮಾಂಡರ್ ತಿಳಿಸಿದ್ದಾರೆ.

ಈ ಮಧ್ಯೆ ರಷ್ಯಾದ ಅತಿಕ್ರಮಣ ತಡೆಯುವ ಕ್ರಮವಾಗಿ ಸೀವಿರೋಡೋನೆಟ್ಸ್ಕ್ ಮತ್ತು ರುಬಿಜ್ನೈನ್ ಸಂಪರ್ಕ ಕಲ್ಪಿಸುವ ರೈಲ್ವೆ ಸೇತುವೆಯನ್ನು ನಾಶಪಡಿಸಲಾಗಿದೆ ಎಂದು ಉಕ್ರೇನ್‌ನ ಪ್ರಾದೇಶಿಕ ಸೇನಾ ಗವರ್ನರ್ ಸೆರ್‌ಹಿಯ್ ಹೈಡೇ ತಿಳಿಸಿದ್ದಾರೆ.

ನ್ಯಾಟೊ ಸದಸ್ಯತ್ವ; ಫಿನ್ಲೆಂಡ್, ಸ್ವೀಡನ್ ನಿರ್ಧಾರ

ನ್ಯಾಟೊ ಸೇರ್ಪಡೆ ಕುರಿತು ಫಿನ್ಲೆಂಡ್ ಮತ್ತು ಸ್ವೀಡನ್ ಒಲವು ತೋರಿವೆ. ಈ ಬೆಳವಣಿಗೆಯು ರಷ್ಯಾಗೆ ಹಿನ್ನಡೆಯಾಗಿದೆ. ಉಭಯ ದೇಶಗಳು ನ್ಯಾಟೊ ಭಾಗವಾಗುವ ವಿಶ್ವಾಸವನ್ನು ನ್ಯಾಟೊ, ಅಮೆರಿಕ ವ್ಯಕ್ತಪಡಿಸಿವೆ.

ಎರಡೂ ರಾಷ್ಟ್ರಗಳು ನ್ಯಾಟೊ ಸದಸ್ಯತ್ವ ಪಡೆಯಲು ಒಲವು ತೋರುವುದರಿಂದ ರಷ್ಯಾವು ರಾಜತಾಂತ್ರಿಕ ಬಲ ಸಡಿಲವಾದಂತಿದೆ. ನ್ಯಾಟೊದ ವಿಸ್ತರಣೆಯು ಪೂರ್ವ ಯೂರೋಪ್‌ಗೆ ಧಕ್ಕೆ ತರಲಿದೆ ಎಂದು ಹೇಳಿದ್ದ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಇದರಿಂದ ಹಿನ್ನಡೆಯಾಗಿದೆ.

ನ್ಯಾಟೊ ಸೇರ್ಪಡೆ ಕುರಿತಂತೆ ಸ್ವೀಡನ್, ಫಿನ್ಲೆಂಡ್‌ನ ಕ್ರಮಕ್ಕೆ ಪ್ರತಿಯಾಗಿ ಸೂಕ್ತ ಪರಿಣಾಮ ಎದುರಿಸಬೇಕಾದಿತು ಎಂದೂ ರಷ್ಯಾ ಎಚ್ಚರಿಸಿದೆ. ಈ ಮಧ್ಯೆ, ಉಕ್ರೇನ್‌ನಲ್ಲಿ ರಷ್ಯಾದ ಅತಿಕ್ರಮಣ ಯೋಜನೆ ನಿರೀಕ್ಷೆಯಂತೆ ಕಾರ್ಯಗತಗೊಳ್ಳದು ಎಂದು ನ್ಯಾಟೊ ಮುಖ್ಯಸ್ಥ ಹೇಳಿದ್ದಾರೆ.

ನ್ಯಾಟೊ ಸದಸ್ಯತ್ವ ಪಡೆಯುವ ಪ್ರಯತ್ನಕ್ಕೆ ಫಿನ್ಲೆಂಡ್ ಜೊತೆಗೆ ದೇಶವೂ ಕೈಜೋಡಿಸಲಿದೆ ಎಂದು ಸ್ವೀಡನ್ ಪ್ರಧಾನಿ ಮ್ಯಾಂಗ್ಡಲೀನಾ ಆಂಡರ್ಸನ್ ಅವರು ಹೇಳಿದರು.

ಅಮೆರಿಕದ ಹೆಸರಾಂತ ಸಿದ್ಧ ಆಹಾರ ಮಾರಾಟ ಸಂಸ್ಥೆ ಮ್ಯಾಕ್‌ಡೊನಾಲ್ಡ್, ರಷ್ಯಾದ ಮಾರುಕಟ್ಟೆಯಿಂದ ಹಿಂದೆ ಸರಿಯುವುದಾಗಿ ಸೋಮವಾರ ಪ್ರಕಟಿಸಿದೆ. ರಷ್ಯಾದಲ್ಲಿ 850 ಮಳಿಗೆಯನ್ನು ಮುಚ್ಚಿದೆ.

ಇನ್ನೊಂದೆಡೆ, ಫ್ರೆಂಚ್‌ನ ಕಾರು ತಯಾರಿಕೆ ಸಂಸ್ಥೆಯಾದ ರೆನಾಲ್ಟ್ ಕೂಡಾ ರಷ್ಯಾದಲ್ಲಿನ ತನ್ನ ಶಾಖೆ ಹಾಗೂ ರಷ್ಯಾದ ಕಂಪನಿ ಅವ್‌ಟೊವಾಜ್‌ನಲ್ಲಿ ಇರುವ ತನ್ನ ಪಾಲನ್ನು ಸ್ಥಳೀಯ ಸಂಸ್ಥೆಯೊಂದಕ್ಕೆ ಮಾರಾಟ ಮಾಡುವುದಾಗಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಅಮೆರಿಕ: ಕೋವಿಡ್‌ನಿಂದ 10 ಲಕ್ಷ ಸಾವು

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕದಲ್ಲಿ ಎರಡೂ ವರ್ಷಗಳಲ್ಲಿ ಕೋವಿಡ್‌ನಿಂದ ಒಟ್ಟು 10 ಲಕ್ಷ ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.



ಚೀನಾದಲ್ಲಿ 1,227 ಪ್ರಕರಣ ಪತ್ತೆ: ಚೀನಾದಲ್ಲಿ ಭಾನುವಾರ 1,227 ಕೋವಿಡ್ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 151 ಲಕ್ಷಣ ಮತ್ತು 1,076 ಲಕ್ಷಣರಹಿತ ಪ್ರಕರಣಗಳಾಗಿವೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗವು ತಿಳಿಸಿದೆ.

ಶನಿವಾರ ವರದಿಯಾಗಿದ್ದ 1,789 ಪ್ರಕರಣಗಳಲ್ಲಿ 239 ಲಕ್ಷಣ ಮತ್ತು 1,550 ಲಕ್ಷಣ ರಹಿತವಾಗಿದ್ದವು. ಮೃತರ ಸಂಖ್ಯೆ 5,213ಕ್ಕೆ ಏರಿಕೆಯಾಗಿದೆ. ಇದುವರೆಗೆ 2,21,955 ಪ್ರಕರಣಗಳು ವರದಿಯಾಗಿವೆ. ಉತ್ತರ ಕೊರಿಯಾದಲ್ಲಿ 12 ಲಕ್ಷ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 5.6 ಲಕ್ಷ ಮಂದಿ ಕ್ವಾರಂಟೈನ್‌ನಲ್ಲಿದ್ದಾರೆ.

ಕೋವಿಡ್: 2,202 ಪ್ರಕರಣ, 27 ಸಾವು

ನವದೆಹಲಿ (ಪಿಟಿಐ): ದೇಶದಲ್ಲಿ ಹೊಸದಾಗಿ 2,202 ಕೋವಿಡ್ ಪ್ರಕರಣಗಳು ವರದಿಯಾಗಿವೆ. 27 ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆಸಕ್ರಿಯ ಪ್ರಕರಣಗಳ ಸಂಖ್ಯೆ 17,317ಕ್ಕೆ ಇಳಿಕೆಯಾಗಿದೆ. ದಿನನಿತ್ಯದ ಸೋಂಕು ದೃಢ ಪ್ರಮಾಣ ಶೇ 0.74 ರಷ್ಟಿದ್ದು, ಚೇತರಿಕೆ ಪ್ರಮಾಣ ಶೇ 98.74 ರಷ್ಟಿದೆ.

ಇಂಡೊನೇಷ್ಯಾದಲ್ಲಿ ಬಸ್ ಅಪಘಾತ: 14 ಜನ ಸಾವು

ಸುರಬಾಯ, ಇಂಡೊನೇಷ್ಯಾ(ಎಪಿ): ಇಂಡೊನೇಷ್ಯಾದ ಪ್ರಮುಖ ದ್ವೀಪ ಪ್ರದೇಶ ಜಾವಾದ ಹೆದ್ದಾರಿಯಲ್ಲಿ ಪ್ರವಾಸಿ ಬಸ್ಸೊಂದು ನಾಮಫಲಕಕ್ಕೆ ಡಿಕ್ಕಿ ಹೊಡೆದ ಪರಿಣಾಮ 14 ಮಂದಿ ಮೃತಪಟ್ಟಿದ್ದು, 19ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ಚಾಲಕ ನಿದ್ರೆಗೆ ಜಾರಿದ್ದರಿಂದ ಅಪಘಾತ ಸಂಭವಿಸಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ಸೆಂಟ್ರಲ್ ಜಾವಾದ ಜನಪ್ರಿಯ ಗುಡ್ಡಗಾಡು ರೆಸಾರ್ಟ್ ಡೀಂಗ್ ಪ್ಲೇಟು ಸ್ಥಳದಿಂದ ವಾಪಸ್ ಸುರಬಾಯಕ್ಕೆ ತೆರಳುತ್ತಿದ್ದಾಗ ಈ ದುರ್ಘಟನೆ ನಡೆದಿದೆ. ಇಂಡೊನೇಷ್ಯಾದಲ್ಲಿ ಸರಿಯಾದ ರಸ್ತೆ ಸುರಕ್ಷತಾ ಕ್ರಮಗಳು ಇಲ್ಲದ ಪರಿಣಾಮ, ರಸ್ತೆ ಅಪಘಾತಗಳು ಸಾಮಾನ್ಯವಾಗಿವೆ ಎಂದು ವರದಿಗಳು ತಿಳಿಸಿವೆ.

‘ಖಾನ್ ಬಂಧಿಸಿದರೆ ಪಾಕ್‌ಗೂ ಲಂಕಾ ಸ್ಥಿತಿ’

ಇಸ್ಲಾಮಾಬಾದ್ (ಪಿಟಿಐ): ’ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಬಂಧಿಸಿದರೆ ಪಾಕಿಸ್ತಾನಕ್ಕೂ ಶ್ರೀಲಂಕಾದ ಪರಿಸ್ಥಿತಿ ಬರುತ್ತದೆ. ಪಾಕಿಸ್ತಾನವು ಶ್ರೀಲಂಕಾ ಆಗುವುದು ನನಗೆ ಬೇಕಿಲ್ಲ’ ಎಂದು ಪಾಕಿಸ್ತಾನದ ಆಂತರಿಕ ವ್ಯವಹಾರಗಳ ಮಾಜಿ ಸಚಿವ ಶೇಕ್ ರಶೀದ್ ಅಹ್ಮದ್ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಮಾತನಾಡಿದ ಅವರು, ‘ಈಗಿನ ಸಮ್ಮಿಶ್ರ ಸರ್ಕಾರವು ದಿಕ್ಕಿಲ್ಲದಂತಾಗಿದ್ದು, ಪರಿಸ್ಥಿತಿಯನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ’ ಎಂದು ಹೇಳಿದರು.

ಕರ್ನಾಟಕ ರಾಜ್ಯ ಎರಡನೇ ಮಿನಿ ಒಲಿಂಪಿಕ್ಸ್‌ಗೆ ಚಾಲನೆ

ಹಾಕಿ: ಗದಗ, ಕೊಡಗು ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗದಗ ಮತ್ತು ಕೊಡಗು ತಂಡಗಳು ಇಲ್ಲಿ ಆರಂಭವಾದ ಮಿನಿ ಒಲಿಂಪಿಕ್ಸ್‌ನ ಹಾಕಿಯಲ್ಲಿ ಗೆಲುವಿನ ಆರಂಭ ಮಾಡಿದವು.

ರಾಜ್ಯ ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಮತ್ತು ಕರ್ನಾಟಕ ಒಲಿಪಿಕ್ ಸಂಸ್ಥೆ (ಕೆಒಎ) ಆಯೋಜಿಸಿರುವ ಕೂಟದಲ್ಲಿ ಸೋಮವಾರ ಪುರುಷರ ವಿಭಾಗದಲ್ಲಿ ಗದಗ 3–2 ಗೋಲುಗಳಿಂದ ಹಾಸನ ತಂಡಕ್ಕೆ ಸೋಲುಣಿಸಿತು. ಮತ್ತೊಂದು ಪಂದ್ಯದಲ್ಲಿ ಕೊಡಗು ತಂಡವು 21–0ರಿಂದ ಕಲಬುರಗಿ ತಂಡಕ್ಕೆ ಸೋಲುಣಿಸಿತು.

ಮಹಿಳೆಯರ ವಿಭಾಗದಲ್ಲಿ ಹಾಸನ ಮತ್ತು ಕೊಡಗು ತಂಡಗಳೂ ಶುಭಾರಂಭ ಮಾಡಿದವು.

‘ಬೆಂಗಳೂರು ಕ್ರೀಡಾ ರಾಜಧಾನಿಯಾಗಲಿ’: ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂದಿರುವ ಬೆಂಗಳೂರು ಕ್ರೀಡೆಯಲ್ಲೂ ರಾಜಧಾನಿ ಎನಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಿನಿ ಒಲಿಂಪಿಕ್ ಕೂಟಕ್ಕೆ ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ರಾಜ್ಯಪಾಲ ಥಾವರ್‌ಚಂದ ಗೆಹಲೋತ್ ಅವರು ಮಾತನಾಡಿ, ಭಾರತ ಸರ್ಕಾರ ಕ್ರೀಡೆಗೆ ಪ್ರೋತ್ಸಾಹ ನೀಡುತ್ತಿದ್ದು ಹಲವು ಮಹತ್ವದ ಯೋಜನೆಗಳನ್ನು ರೂಪಿಸಿದೆ’ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಕೆಒಎ ಅಧ್ಯಕ್ಷ ಕೆ.ಗೋವಿಂದರಾಜು, ಕಾರ್ಯದರ್ಶಿ ಅನಂತರಾಜು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತಿತರರು ಇದ್ದರು.

ಪಥಸಂಚಲನದಲ್ಲಿ ಪಾಲ್ಗೊಂಡ ಕ್ರೀಡಾಪಟುಗಳು– ಪ್ರಜಾವಾಣಿ ಚಿತ್ರ

ಥಾಮಸ್ ಕಪ್ ವಿಜಯ: ಲಕ್ಷ್ಯಸೇನ್‌ಗೆ ₹ 5 ಲಕ್ಷ ಘೋಷಣೆ

ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ ಭಾರತ ತಂಡಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿನಂದನೆ ಸಲ್ಲಿಸಿದರು.

ಬೆಂಗಳೂರಿನ ದ್ರಾವಿಡ್– ಪಡುಕೋಣೆ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ, ತಂಡವನ್ನು ಪ್ರತಿನಿಧಿಸಿದ್ದ ಲಕ್ಷ್ಯ ಸೇನ್ ಅವರಿಗೆ ರಾಜ್ಯ ಸರ್ಕಾರದಿಂದ ₹ 5 ಲಕ್ಷ ಬಹುಮಾನ ನೀಡಲಾಗುವುದು ಎಂದು ಘೋಷಿಸಿದರು.

ಭುವನೇಶ್ವರದಲ್ಲಿ ಬ್ಯಾಡ್ಮಿಂಟನ್ ಹೈ ಪರ್ಫಾರ್ಮೆನ್ಸ್ ಕೇಂದ್ರ

ಭುವನೇಶ್ವರ (ಪಿಟಿಐ): ಥಾಮಸ್ ಕಪ್ ಟೂರ್ನಿಯಲ್ಲಿ ಭಾರತ ಬ್ಯಾಡ್ಮಿಂಟನ್ ತಂಡ ಮೊದಲ ಚಿನ್ನ ಗೆದ್ದ ಸಂಭ್ರಮದ ಬೆನ್ನಲ್ಲೇ ಕ್ರೀಡಾಪಟುಗಳಿಗೆ ಮತ್ತೊಂದು ಶುಭ ಸುದ್ದಿ ಬಂದಿದೆ. ಈ ಕ್ರೀಡೆಗೆ ಸಂಬಂಧಿಸಿದ ಸುಸಜ್ಜಿತ ಹೈ ಪರ್ಫಾರ್ಮೆನ್ಸ್ ಕೇಂದ್ರ (ಎಚ್‌ಪಿಸಿ) ಭುವನೇಶ್ವರದಲ್ಲಿ ಸಜ್ಜಾಗುತ್ತಿದೆ.

ದಾಲ್ಮಿಯಾ ಭಾರತ್ ಗೋಪಿಚಂದ್ ಒಡಿಶಾ ಬ್ಯಾಡ್ಮಿಂಟನ್ ಅಕಾಡೆಮಿ ಎಂಬ ಹೆಸರಿನ ಕೇಂದ್ರದ ಕಾಮಗಾರಿ ಕೊನೆಯ ಹಂತದಲ್ಲಿದ್ದು ಸೆಪ್ಟೆಂಬರ್‌ನಲ್ಲಿ ಬಳಕೆಗೆ ಸಿದ್ಧವಾಗಲಿದೆ. ಪುಲ್ಲೇಲ ಗೋಪಿಚಂದ್ ಇದರ ಉಸ್ತುವಾರಿ ವಹಿಸಿಕೊಳ್ಳಲಿದ್ದಾರೆ ಎಂದು ರಾಜ್ಯದ ಕ್ರೀಡಾ ಇಲಾಖೆ ಸೋಮವಾರ ತಿಳಿಸಿದೆ.

ಕೇಂದ್ರಕ್ಕಾಗಿ ಒಡಿಶಾ ಸರ್ಕಾರ 3 ಎಕರೆ ಜಮೀನು ನೀಡಿತ್ತು. ದಾಲ್ಮಿಯಾ ಭಾರತ್ ಸಮೂಹ ₹ 55 ಕೋಟಿ ವೆಚ್ಚದಲ್ಲಿ ನಿರ್ಮಾಣ ಕಾಮಗಾರಿ ನಡೆಸಿದ್ದಾರೆ.

ಭಾರತ ತಂಡದ ಮಾಜಿ ಮುಖ್ಯ ಕೋಚ್ ಪುಲ್ಲೇಲ ಗೋಪಿಚಂದ್ ಅವರ ನಿರ್ದೇಶನದಲ್ಲಿ ಕೇಂದ್ರ ಸ್ಥಾಪನೆಯಾಗಿದೆ. ತರಬೇತಿ ಮತ್ತು ಅಭ್ಯಾಸಕ್ಕೆ ಇಲ್ಲಿ ವಿಶ್ವ ದರ್ಜೆಯ ಸೌಲಭ್ಯಗಳು ಸಿದ್ಧವಾಗಲಿವೆ.

500 ಮಂದಿಗೆ ಆಸನ ವ್ಯವಸ್ಥೆ ಇರುವ ಕೇಂದ್ರದಲ್ಲಿ ಎಂಟು ಅಂಗಣಗಳು ಇರುತ್ತವೆ. ಜಿಮ್ನಾಶಿಯಂ, ಕ್ರೀಡಾವಿಜ್ಞಾನ ಕೊಠಡಿ, ಹೆಲ್ತ್ ಕ್ಲಬ್ ಇತ್ಯಾದಿ ಒಳಗೊಂಡಿರುವ ಕೇಂದ್ರದಲ್ಲಿ ಆಟಗಾರರು, ಕೋಚ್‌ಗಳು ಮತ್ತು ನೆರವು ಸಿಬ್ಬಂದಿಗೆ ಬೋರ್ಡಿಂಗ್, ಲಾಡ್ಜಿಂಗ್ ಸೌಲಭ್ಯ ಇರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ದಾಲ್ಮಿಯಾ ಭಾರತ್ ಸಮೂಹ ಮತ್ತು ಪುಲ್ಲೇಲ ಗೋಪಿಚಂದ್ ಬ್ಯಾಡ್ಮಿಂಟನ್ ಫೌಂಡೇಷನ್ ಜೊತೆ ಒಡಿಶಾ ಸರ್ಕಾರ 2018ರಲ್ಲಿ ಒಪ್ಪಂದಕ್ಕೆ ಸಹಿ ಹಾಕಿತ್ತು. 2019ರಲ್ಲಿ ಕಾಮಗಾರಿ ಆರಂಭವಾಗಿತ್ತು.

ಭಾರತಕ್ಕೆ 10ನೇ ಚಿನ್ನ

ನವದೆಹಲಿ: ಸಿಫ್ತ್ ಕೌರ್ ಸಮ್ರಾ ಅವರು 50 ಮೀಟರ್ಸ್ ರೈಫಲ್–3 ಪೊಸಿಷನ್‌ನಲ್ಲಿ ಚಿನ್ನ ಗೆಲ್ಲುವುದರೊಂದಿಗೆ ಭಾರತಕ್ಕೆ ಅಂತರರಾಷ್ಟ್ರೀಯ ಶೂಟಿಂಗ್ ಸ್ಪೋರ್ಟ್ ಫೆಡರೇಷನ್‌ನ (ಐಎಸ್‌ಎಸ್‌ಎಫ್) ಜೂನಿಯರ್ ವಿಶ್ವಕಪ್ ಟೂರ್ನಿಯಲ್ಲಿ ಭಾರತಕ್ಕೆ 10ನೇ ಚಿನ್ನ ಗಳಿಸಿಕೊಟ್ಟರು.

ಭಾರತದ ಖಾತೆಯಲ್ಲಿ ಈಗ 10 ಚಿನ್ನ, 12 ಬೆಳ್ಳಿ ಮತ್ತು 3 ಕಂಚಿನ ಪದಕಗಳು ಇವೆ.

ಭಾರತವು ಬ್ಯಾಡ್ಮಿಂಟನ್‌ನಲ್ಲಿ ಐತಿಹಾಸಿಕ ಥಾಮಸ್ ಕಪ್ ಅನ್ನು ಗೆದ್ದಿದೆ!

ಕಾಮನ್‌ವೆಲ್ತ್ ಗೇಮ್ಸ್‌ಗೆ ಸಾಕ್ಷಿ, ವಿನೇಶಾ

ಲಖನೌ (ಪಿಟಿಐ): ಬದ್ಧ ಎದುರಾಳಿ ಸೋನಮ್ ಮಲಿಕ್ ವಿರುದ್ಧ ಕೊನೆಗೂ ಸಾಕ್ಷಿ ಮಲಿಕ್ ಗೆಲುವು ಸಾಧಿಸಿದರು. ಮನೀಷಾ ಎದುರು ಕೂಡ ಜಯ ಗಳಿಸಿದ ಸಾಕ್ಷಿ, ಕಾಮನ್‌ವೆಲ್ತ್ ಗೇಮ್ಸ್‌ನ ಕುಸ್ತಿಗೆ ಅರ್ಹತೆ ಗಳಿಸಿದರು.

ಇಲ್ಲಿ ನಡೆದ ಆಯ್ಕೆ ಟ್ರಯಲ್ಸ್‌ನಲ್ಲಿ ಸಾಕ್ಷಿ ಮಲಿಕ್ 8–1ರಲ್ಲಿ ಸೋನಮ್ ವಿರುದ್ಧ ಗೆದ್ದರು. ನಂತರ ನಡೆದ ಫೈನಲ್ ಬೌಟ್‌ನಲ್ಲಿ ಮನೀಷಾ ವಿರುದ್ಧ ಸಾಕ್ಷಿ 7–1ರ ಜಯ ಸಾಧಿಸಿದರು. ಸೆಮಿಫೈನಲ್‌ನಲ್ಲಿ ಮನೀಷಾ 7–5ರಲ್ಲಿ ಬಜರಂಗ್ ಪೂನಿಯಾ ಅವರ ಪತ್ನಿ ಸಂಗೀತಾ ಫೋಗಟ್ ಎದುರು ಜಯ ಗಳಿಸಿದ್ದರು.

53 ಕೆಜಿ ವಿಭಾಗದಲ್ಲಿ ವಿನೇಶಾ ಫೋಗಟ್ ಕೂಟ ಆಯ್ಕೆಯಾಗಿದ್ದಾರೆ. ಟೋಕಿಯೊ ಒಲಿಂಪಿಕ್ಸ್ ನಂತರ ಉತ್ತಮ ಸಾಮರ್ಥ್ಯ ಪ್ರದರ್ಶಿಸಲು ವಿಫಲರಾಗಿದ್ದ ವಿನೇಶಾ ಫೈನಲ್ ವರೆಗೂ ಒಂದು ಪಾಯಿಂಟ್ ಕೂಡ ಬಿಟ್ಟುಕೊಡದೆ ಮುನ್ನುಗ್ಗಿದ್ದರು. ಅಂಟಿಮ್ ಎದುರಿನ ಫೈನಲ್‌ನಲ್ಲಿ 0–3 ಹಿನ್ನಡೆಯಲ್ಲಿದ್ದ ಅವರು ನಂತರ ಚೇತರಿಸಿಕೊಂಡು ಗೆಲುವಿನ ನಗೆ ಸೂಸಿದರು.

ಮಹಿಳೆಯರ ವಿಭಾಗದ ಚಾಂಪಿಯನ್ ಕರ್ನಾಟಕ ತಂಡ. (ಎಡದಿಂದ): ಸಹನಾ, ಕವನಾ, ಅಕ್ಷತಾ, ದಿವ್ಯಾ, ಜಯಲಕ್ಷ್ಮಿ, ಗಾಯತ್ರಿ, ಪಲ್ಲವಿ, ಮೇಘನಾ, ಯಶಸ್ವಿನಿ, ಹರ್ಷಿತಾ

ಫೆಡರೇಷನ್ ಕಪ್ ಬಾಲ್ ಬ್ಯಾಡ್ಮಿಂಟನ್ ಟೂರ್ನಿ

ಕರ್ನಾಟಕ ಮಹಿಳಾ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹಿರಿಯೂರು (ಚಿತ್ರದುರ್ಗ ಜಿಲ್ಲೆ): ಆಲ್‌ರೌಂಡ್ ಆಟ ಪ್ರದರ್ಶಿಸಿದ ಕರ್ನಾಟಕ ಮಹಿಳೆಯರ ತಂಡ ಫೆಡರೇಷನ್ ಕಪ್ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು.

ಇಲ್ಲಿನ ನೆಹರು ಮೈದಾನದಲ್ಲಿ ಭಾನುವಾರ ಮುಕ್ತಾಯಗೊಂಡ ಟೂರ್ನಿಯ ಸೂಪರ್ ಲೀಗ್ ಹಂತದ ಎಲ್ಲ ಮೂರು ಪಂದ್ಯಗಳನ್ನು ಗೆದ್ದುಕೊಂಡ ಕರ್ನಾಟಕ ತಂಡದವರು ಪ್ರಶಸ್ತಿ ಗೆದ್ದು ಸಂಭ್ರಮಿಸಿದರು. ಎರಡು ಪಂದ್ಯಗಳನ್ನು ಗೆದ್ದುಕೊಂಡ ತಮಿಳುನಾಡು ರನ್ನರ್ ಅಪ್ ಆದರೆ ಕೇರಳ ಮೂರನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡಿತು.

ಕರ್ನಾಟಕ ರಾಜ್ಯ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆ, ಚಿತ್ರದುರ್ಗ ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆ ಮತ್ತು ಹಿರಿಯೂರು ನಗರ ಬಾಲ್ ಬ್ಯಾಡ್ಮಿಂಟನ್ ಕ್ಲಬ್ ಆಶ್ರಯದಲ್ಲಿ ನಡೆದ ಟೂರ್ನಿಯ ‘ಎ’ ಗುಂಪಿನಿಂದ ಕರ್ನಾಟಕ ಮತ್ತು ಕೇರಳ, ‘ಬಿ’ ಗುಂಪಿನಿಂದ ತಮಿಳುನಾಡು ಮತ್ತು ಆಂಧ್ರಪ್ರದೇಶ ತಂಡಗಳು ಸೂಪರ್ ಲೀಗ್ ಪ್ರವೇಶಿಸಿದ್ದವು.

ನಾಯಕಿ, ಸೆಂಟರ್ ಆಟಗಾರ್ತಿ ಜಯಲಕ್ಷ್ಮಿ ಮತ್ತು ಆಲ್‌ರೌಂಡರ್ ಕವನಾ ಅವರ ಅಮೋಘ ಆಟದಿಂದಾಗಿ ಕರ್ನಾಟಕ ತಂಡ ಆರಂಭದಿಂದಲೇ ಪಾರಮ್ಯ ಮೆರೆದಿತ್ತು. ಹೀಗಾಗಿ ಗುಂಪು ಹಂತದಲ್ಲಿ ಪಾಯಿಂಟ್ ಪಟ್ಟಿಯ ಅಗ್ರಸ್ಥಾನ ಅಲಂಕರಿಸಿಕೊಂಡಿತ್ತು.ಸೂಪರ್ ಲೀಗ್‌ನ ಮೊದಲ ಪಂದ್ಯದಲ್ಲಿ ಆಂಧ್ರಪ್ರದೇಶ ವಿರುದ್ಧ ಕರ್ನಾಟಕ 35–21, 35–18ರಲ್ಲಿ ಜಯ ಸಾಧಿಸಿತ್ತು. ಕೇರಳವನ್ನು 35–28, 35–27ರಲ್ಲಿ ಸೋಲಿಸಿದ ತಂಡ ಅಂತಿಮ ಹಣಾಹಣಿಯಲ್ಲಿ ತಮಿಳುನಾಡನ್ನು 35–31, 35–25ರಲ್ಲಿ ಮಣಿಸಿತು. ಈ ಮೂಲಕ 9 ಪಾಯಿಂಟ್ ಕಲೆ ಹಾಕಿತು.

ಪುರುಷರ ವಿಭಾಗದಲ್ಲಿ ಭಾರತೀಯ ರೈಲ್ವೆ ಚಾಂಪಿಯನ್ ಆಯಿತು. ತಮಿಳುನಾಡು ರನ್ನರ್ ಅಪ್ ಸ್ಥಾನ ಗಳಿಸಿತು. ಕರ್ನಾಟಕಕ್ಕೆ 3ನೇ ಸ್ಥಾನ ದೊರಕಿತು. ಕರ್ನಾಟಕದ ವಿಜಯಲಕ್ಷ್ಮಿ ಉತ್ತಮ ಆಟಗಾರ್ತಿ ಎನಿಸಿಕೊಂಡರು.


ನಿಖತ್ ಜರೀನ್– ಪಿಟಿಐ ಚಿತ್ರ

ವಿಶ್ವ ಬಾಕ್ಸಿಂಗ್: ಸೆಮಿಗೆ ನಿಖತ್, ಮನೀಷಾ, ಪರ್ವೀನ್

ನವದೆಹಲಿ (ಪಿಟಿಐ): ಭಾರತದ ನಿಖತ್ ಜರೀನ್, ಮನೀಷಾ ಮತ್ತು ಪರ್ವೀನ್ ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿದ್ದು, ಪದಕಗಳನ್ನು ಖಚಿತಪಡಿಸಿದ್ದಾರೆ.

ಟರ್ಕಿಯ ಇಸ್ತಾಂಬುಲ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 52 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ನಿಖತ್ 5–0ಯಿಂದ ಇಂಗ್ಲೆಂಡ್‌ನ ಚಾರ್ಲಿ ಸಿಯಾನ್ ಡೇವಿಸನ್ ಅವರನ್ನು ಸೋಲಿಸಿದರು. 63 ಕೆಜಿ ವಿಭಾಗದಲ್ಲಿ ಪರ್ವೀನ್ ಇಷ್ಟೇ ಅಂತರದಿಂದ ತಜಿಕಿಸ್ತಾನದ ಶೊಯಿರಾ ಜುಲ್ಕಾಯ್ನರೊವಾ ಸವಾಲು ಮೀರಿದರು.

57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ಮನೀಷಾ 4–1ರಿಂದ ಮಂಗೋಲಿಯಾದ ನಾಮೂನ್ ಮೊಂಖೊರ್ ಅವರನ್ನು ಎಂಟರಘಟ್ಟದ ಬೌಟ್‌ನಲ್ಲಿ ಮಣಿಸಿದರು.